# ಕರ್ನಾಟಕ ಶಿಕ್ಷಣ ಅಧಿನಿಯಮ, 1983

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

### ಅಧ್ಯಾಯ - I
### ಸಾಮಾನ್ಯ


1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಶಿಕ್ಷಣದ ವಿನಿಯಮನ
4. ಖಾಸಗಿ ಪಾಠವನ್ನು ನಿಷೇಧಿಸುವುದು
5. ದುರ್ಬಲ ವರ್ಗಗಳ ಮತ್ತು ಅಂಗವಿಕಲರ ಶಿಕ್ಷಣಕ್ಕೆ ಉತ್ತೇಜನ ನೀಡುವುದು
6. ಶಿಕ್ಷಣ ಸಂಸ್ಥೆಗಳು ಈ ಅಧಿನಿಯಮಕ್ಕನುಗುಣವಾಗಿ ಇರುವುದು
7. ಪಾಠಕ್ರಮ, ಇತ್ಯಾದಿಗಳನ್ನು ಸರ್ಕಾರ ಗೊತ್ತುಪಡಿಸುವುದು


### ಅಧ್ಯಾಯ - II
### ಶಿಕ್ಷಣ ಪ್ರಾಧಿಕಾರಗಳು


8. ಅಧಿಕಾರಿಗಳ ನೇಮಕಾತಿ
9. ಜಿಲ್ಲಾ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ
10. ಮಂಡಲಿಗಳ ರಚನೆ


### ಅಧ್ಯಾಯ - III
### ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜಾರಿ


11. ನಿರ್ದಿಷ್ಟ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಗೊಳಿಸಬೇಕೆಂದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸುವುದು
12. ಪ್ರಾಥಮಿಕ ಶಿಕ್ಷಣಕ್ಕಾಗಿ ಯೋಜನೆಗಳು
13. ಹಾಜರಾತಿ ಪ್ರಾಧಿಕಾರಿಗಳು ಮತ್ತು ಅವರ ಅಧಿಕಾರಗಳು ಮತ್ತು ಕರ್ತವ್ಯಗಳು
14. ತನ್ನ ಮಗುವನ್ನು ಶಾಲೆಗೆ ಹಾಜರಾಗುವಂತೆ ಮಾಡುವ ಬಗ್ಗೆ ತಂದೆ/ತಾಯಿಯ ಜವಾಬ್ದಾರಿ
15. ಶಾಲೆಗೆ ಹಾಜರಾಗದಿರುವುದಕ್ಕೆ ಯುಕ್ತ ಕಾರಣ
16. ದೈಹಿಕ ಅಥವಾ ಮಾನಸಿಕ ನ್ಯೂನತೆ ಇರುವ ಮಕ್ಕಳಿಗಾಗಿ ವಿಶೇಷ ಶಾಲೆಗಳು
17. ಹಾಜರಾತಿ ಆದೇಶಗಳು
18. ಮಕ್ಕಳು ಶಾಲೆಗೆ ಹಾಜರಾಗುವುದಕ್ಕೆ ಅಡ್ಡಿಯಾಗುವ ಹಾಗೆ ಅವರನ್ನು ಕೆಲಸಕ್ಕೆ ತೊಡಗಿಸದಿರುವುದು
19. ಪ್ರಾಥಮಿಕ ಶಿಕ್ಷಣವು ಉಚಿತವಾಗಿರತಕ್ಕದು
20. ಮಗುವಿನ ವಯಸ್ಸನ್ನು ಲೆಕ್ಕ ಹಾಕುವುದು

## ಅಧ್ಯಾಯ - VI

### ಪರೀಕ್ಷೆಗಳು ಮತ್ತು ದುರಾಚರಣೆಗಳು, ಇತ್ಯಾದಿಗಳನ್ನು ತಡೆಯುವುದು


21. ಪರಿಭಾಷೆಗಳು
22. ಪರೀಕ್ಷೆಗಳು
23. ಪರೀಕ್ಷಾ ಕೆಲಸವನ್ನು ವಹಿಸಿಕೊಡಲಾದ ಕೆಲವು ವ್ಯಕ್ತಿಗಳ ಕರ್ತವ್ಯಗಳು
24. ಪರೀಕ್ಷೆಗಳಲ್ಲಿ ಕಾಪಿ, ಇತ್ಯಾದಿಗಳನ್ನು ಮಾಡುವುದಕ್ಕೆ ನಿಷೇಧ
25. ಬೇರೊಬ್ಬನಂತೆ ನಟಿಸಿ, ಪರೀಕ್ಷೆಗಳಲ್ಲಿ ಹಾಜರಾಗುವುದಕ್ಕೆ ನಿಷೇಧ
26. ಪರೀಕ್ಷಾ ಕೇಂದ್ರದ ಸಮೀಪ ಅಲೆದಾಡುವುದಕ್ಕೆ ಪ್ರತಿಬಂಧ
27. ಪರೀಕ್ಷೆಯಲ್ಲಿ ಬರೆದ ಉತ್ತರಗಳು ಮುಂತಾದವುಗಳ ಬದಲಾವಣೆ
28. ಪರೀಕ್ಷೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದು ಶಿಕ್ಷಣ ಸಂಸ್ಥೆಗಳ ನೌಕರರ ಕರ್ತವ್ಯವಾಗಿರುವುದು


## ಅಧ್ಯಾಯ - V

### ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ ಮತ್ತು ನೋಂದಣಿ


29. ಶಿಕ್ಷಣ ಸಂಸ್ಥೆಗಳ ವರ್ಗೀಕರಣ
30. ಶಿಕ್ಷಣ ಸಂಸ್ಥೆಗಳ ನೋಂದಣಿ
31. ಶಿಕ್ಷಣ ಸಂಸ್ಥೆಯನ್ನು ನೋಂದಾಯಿಸುವ ಕಾರ್ಯ ವಿಧಾನ
32. ಶೈಕ್ಷಣಿಕ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದು, ಇತ್ಯಾದಿ
33. ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಯ ನೋಂದಣಿ
34. ನೋಂದಣಿ ರದ್ದಿಯಾತಿ
35. ಟ್ಯುಟೋರಿಯಲ್ ಸಂಸ್ಥೆಗಳ ನೋಂದಣಿ


## ಅಧ್ಯಾಯ - VI

### ಶಿಕ್ಷಣ ಸಂಸ್ಥೆಗಳಿಗೆ ಮನ್ನಣೆ ನೀಡುವುದು, ಇತ್ಯಾದಿ


36. ಮನ್ನಣೆ
37. ತಜ್ಞ ಮಂಡಲಿ
38. ಹಾಲಿ ಇರುವ ಸಂಸ್ಥೆಗಳಿಗೆ ಮನ್ನಣೆ, ಇತ್ಯಾದಿ
39. ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದು

## ಅಧ್ಯಾಯ - VII

### ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಮೊದಲಾದವುಗಳ ವ್ಯವಸ್ಥಾಪಕ ವರ್ಗ


40. ಸ್ಥಳೀಯ ಪ್ರಾಧಿಕಾರದ, ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯಗಳು

41. ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪನೆ

42. ವ್ಯವಸ್ಥಾಪಕ ಸಮಿತಿ

43. ಅಧ್ಯಕ್ಷ ಮತ್ತು ಕಾರ್ಯದರ್ಶಿ

44. ಕಾರ್ಯದರ್ಶಿಯನ್ನು ತೆಗೆದುಹಾಕುವುದು

45. ಸಭೆ ಇತ್ಯಾದಿಗಳು

46. ವ್ಯವಸ್ಥಾಪಕ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು


## ಅಧ್ಯಾಯ - VIII

### ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ, ಫೀಜುಗಳ ಶ್ರೇಣಿಗಳು, ಇತ್ಯಾದಿ


47. ಪ್ರವೇಶ, ಇತ್ಯಾದಿ ನಿಯಮಗಳಿಗನುಸಾರವಾಗಿರಬೇಕು

48. ಫೀಜು


## ಅಧ್ಯಾಯ - IX

### ಸಹಾಯಾನುದಾನಗಳು


49. ಸರ್ಕಾರವು ಮನ್ನಣೆ ಪಡೆದ ಕೆಲವು ಸಂಸ್ಥೆಗಳಿಗೆ ಸಹಾಯಾನುದಾನ ನೀಡಲು ಮೊತ್ತವನ್ನು ಮೀಸಲಿಡುವುದು

50. ಅನುದಾನವನ್ನು ಮಂಜೂರ್ಮಾಡಬಹುದಾದ ಪ್ರಾಧಿಕಾರಗಳು

51. ಅನುದಾನದ ಹೊರತು, ಇತರ ಮೂಲಗಳಿಂದ ಸ್ವೀಕರಿಸಿದ ಹಣ

52. ಅನುದಾನದ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವುದು ಹಾಗೂ ಅಂಥ ಮಂಜೂರಾತಿಯ ನಂತರ ಪಾಲಿಸಬೇಕಾದ ಷರತ್ತುಗಳು

53. ಅನುದಾನವನ್ನು ತಡೆಹಿಡಿಯಲು, ಕಡಿಮೆ ಮಾಡಲು ಅಥವಾ ಹಿಂತೆಗೆದುಕೊಳ್ಳಲು ರಾಜ್ಯ ಸರ್ಕಾರದ ಅಧಿಕಾರ

54. ಖಾಸಗಿ ಸಂಸ್ಥೆಗಳ ನಿಧಿಗಳ ಮತ್ತು ಚರ ಸ್ವತ್ತಿನ ಬಳಕೆ


## ಅಧ್ಯಾಯ - X

### ಲೆಕ್ಕಗಳು, ಲೆಕ್ಕ ಪರಿಶೋಧನೆ, ಪರಿಶೀಲನೆ ಮತ್ತು ವಿವರ ಪಟ್ಟಿಕೆಗಳು


55. ಲೆಕ್ಕಗಳು

56. ಲೆಕ್ಕಗಳ ವಾರ್ಷಿಕ ಪರಿಶೋಧನೆ

57. ಪರಿಶೀಲನೆ, ವಿಚಾರಣೆ, ಇತ್ಯಾದಿ

58. ವಿವರಪಟ್ಟಿಕೆ, ಮುಂತಾದುವುಗಳನ್ನು ಒದಗಿಸುವುದು

## ಅಧ್ಯಾಯ - XI

### ನೆರವು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಸ್ವತ್ತು ವರ್ಗಾವಣೆಗೆ ನಿಷೇಧ


59. ಪರಿಭಾಷೆಗಳು

60. ಕೆಲವು ಸಂದರ್ಭಗಳಲ್ಲಿ ಸರ್ಕಾರದ ಅನುಮತಿ ಇಲ್ಲದೆ, ಶಿಕ್ಷಣ ಸಂಸ್ಥೆಗಳು ಜಮೀನು ಹಾಗೂ ಕಟ್ಟಡಗಳನ್ನು ವರ್ಗಾಯಿಸಲು ನಿಷೇಧ

61. 60ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಯ ಪರಿಣಾಮ

62. 60ನೇ ಪ್ರಕರಣದ (2)ನೇ ಉಪಪ್ರಕರಣದ ಮತ್ತು 61ನೇ ಪ್ರಕರಣದ ಮೇರೆಗಿನ ಆದೇಶದ ಪರಿಣಾಮ

63. ಸ್ವಾಧೀನವನ್ನು ತೆಗೆದುಕೊಂಡ ತರುವಾಯ ಜಮೀನು ಅಥವಾ ಕಟ್ಟಡವು ನಿರುಪಾಧಿಕವಾಗಿ ಸರ್ಕಾರದಲ್ಲೇ ನಿಹಿತವಾಗುವುದು

64. ಈ ಅಧ್ಯಾಯದ ಮೇರೆಗೆ ಬಾಕಿ ಇರುವ ಮೊತ್ತದ ವಸೂಲಾತಿ

65. ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ನ್ಯಾಯಾಲಯವು ಜಪ್ತಿ, ಮಾರಾಟ, ಮುಂತಾದವುಗಳನ್ನು ಮಾಡದಿರುವುದು


## ಅಧ್ಯಾಯ - XII

### ಶಿಕ್ಷಣ ಸಂಸ್ಥೆಗಳ ಆಡಳಿತ ವಹಿಸಿಕೊಳ್ಳುವುದು, ಕಡ್ಡಾಯ ಅಧಿಗ್ರಹಣ ಮತ್ತು ಆರ್ಜನೆ


66. ಪರಿಭಾಷೆಗಳು

67. ಸಾರ್ವಜನಿಕ ಹಿತದೃಷ್ಟಿಯಿಂದ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ವಹಿಸಿಕೊಳ್ಳುವುದು

67ಎ. ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ಬಿಟ್ಟುಕೊಡುವುದು

68. ಉದ್ಯೋಗದ ಕರಾರನ್ನು ಮುಕ್ತಾಯಗೊಳಿಸುವ ಅಧಿಕಾರ

69. ದುರ್ಭಾವನೆಯಿಂದ ಮಾಡಿಕೊಂಡ ಕರಾರು, ಇತ್ಯಾದಿಗಳನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು

70. ಸ್ವಇಚ್ಛಾ ನ್ಯಾಸಗಳ ರಚನೆಯನ್ನು ಅನೂರ್ಜಿತಗೊಳಿಸುವುದು

71. ಶಿಕ್ಷಣ ಸಂಸ್ಥೆಯ ಕಡ್ಡಾಯ ಕೋರಿಕೆ

72. ಸ್ವತ್ತನ್ನು ಕ್ಷಿಪ್ರವಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅಧಿಕಾರ

73. ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮತ್ತು ಹೊಣೆಗಾರಿಕೆಯಿಂದ ರಾಜ್ಯ ಸರ್ಕಾರದ ವಿಮುಕ್ತಿ

74. ಸ್ವತ್ತಿನ ಆರ್ಜನೆ

75. ಕಡ್ಡಾಯವಾಗಿ ಕೋರಿದ ಅಥವಾ ಆರ್ಜಿಸಿದ ಆ ಸ್ವತ್ತಿನ ಮೊಬಲಗನ್ನು ನಿರ್ಧರಿಸುವ ತತ್ವಗಳು ಮತ್ತು ವಿಧಾನಗಳು

76. ಕಡ್ಡಾಯ ಕೋರಿಕೆ ಅಥವಾ ಆರ್ಜಿಸಿದ ಸ್ವತ್ತಿನ ಬಗ್ಗೆ ಹಣ ಸಂದಾಯ

77. ಹಣದ ವಿಷಯದಲ್ಲಿ 75ನೇ ಪ್ರಕರಣದ ಮೇರೆಗೆ ಮಧ್ಯಸ್ಥಗಾರನು ನೀಡಿದ ತೀರ್ಪಿನ ಮೇಲೆ ಅಪೀಲು

78. ಮಧ್ಯಸ್ಥಗಾರನು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರುವುದು

79. ಪ್ರವೇಶ ಮತ್ತು ಪರಿಶೀಲನೆ ಅಧಿಕಾರಗಳು ಹಾಗೂ ಮಾಹಿತಿ ತರಿಸಿಕೊಳ್ಳುವುದು

80. ಶಿಕ್ಷಣ ಸಂಸ್ಥೆಯಲ್ಲಿ ಹಾಲಿ ಇರುವ ಸಿಬ್ಬಂದಿಯ ಬಗ್ಗೆ ಉಪಬಂಧಗಳು
81. ಈ ಅಧ್ಯಾಯದ ಮೇರೆಗೆ ನಿಹಿತವಾದ ಶಿಕ್ಷಣ ಸಂಸ್ಥೆಗಳ ನೌಕರರ ಹುದ್ದೆಗಳನ್ನು ಕೆಲವು ಉದ್ದೇಶಗಳಿಗಾಗಿ ಒಂದು ಪ್ರತ್ಯೇಕ ಘಟಕವಾಗಿ ಪರಿಗಣಿಸುವುದು

## ಅಧ್ಯಾಯ - XIII

### ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಪೂರಕ ಸೇವೆಗಳನ್ನು ಒದಗಿಸುವುದು

82. ವೈದ್ಯಕೀಯ ತಪಾಸಣೆ ಮತ್ತು ಆರೋಗ್ಯ ಸೇವೆಗಳು
83. ಭೋಜನ ಮತ್ತು ಉಪಹಾರಗಳನ್ನು ಒದಗಿಸುವುದು
84. ಮನರಂಜನೆ ಮತ್ತು ದೈಹಿಕ ಶಿಕ್ಷಣ ತರಬೇತಿ ಸೌಕರ್ಯಗಳನ್ನು ಒದಗಿಸುವುದು
85. ಮಾರ್ಗದರ್ಶನ ಸೇವೆಗಳು
86. ಗ್ರಂಥಾಲಯ ಸೇವೆ

## ಅಧ್ಯಾಯ - XIV

### ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು

87. ನೌಕರರ ಅರ್ಹತೆಗಳು ಮತ್ತು ಸೇವಾ ಷರತ್ತುಗಳು
88. ನೌಕರರ ನೇಮಕಾತಿ
89. ಉಪಾಧ್ಯಾಯರು ಮತ್ತು ಇತರ ನೌಕರರ ವೇತನ ಮತ್ತು ಭತ್ಯೆಗಳು
90. ನೌಕರರ ಪಟ್ಟಿಯನ್ನು ಇಡುವುದು
91. ಆಚಾರ ಸಂಹಿತೆ
92. ವಜಾ ಮಾಡುವುದು, ತೆಗೆದು ಹಾಕುವುದು ಇತ್ಯಾದಿ
93. ಆದೇಶವನ್ನು ತಿಳಿಸುವುದು
94. ಅಪೀಲುಗಳು
95. ನ್ಯಾಯಾಲಯ ಶುಲ್ಕ
96. ನ್ಯಾಯಾಧಿಕರಣ
97. ರಾಜೀನಾಮೆ
98. ನೌಕರರನ್ನು ಕೆಲಸದಿಂದ ತೆಗೆದುಹಾಕುವುದು
99. ಸೇವೆಯನ್ನು ಕೊನೆಗೊಳಿಸುವುದು
100. ಈ ಅಧ್ಯಾಯದ ಮೇಲುಗೈ ಪರಿಣಾಮ
101. ದಂಡನೆ ವಿಧಿಸಲು ಸರ್ಕಾರದ ಅಧಿಕಾರ

## ಅಧ್ಯಾಯ - XV

### ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ


102. ಆಡಳಿತ ಪರಿಷತ್ತಿನ ಆಚಾರ ಸಂಹಿತೆ
103. ಸ್ವತ್ತುಗಳ ಪಟ್ಟಿಯನ್ನು ಒದಗಿಸುವುದು
104. ನಿಧಿ, ಮುಂತಾದುವುಗಳ ಬಳಕೆ
105. ಸಾಕಷ್ಟು ನೋಟೀಸು ಕೊಡದೆ ಖಾಸಗಿ ಸಂಸ್ಥೆಗಳನ್ನು ಮುಚ್ಚದಿರುವುದು, ಇತ್ಯಾದಿ
106. ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚುವುದು, ಇತ್ಯಾದಿಗಳ ನಂತರ ಆಡಳಿತ ಪರಿಷತ್ತು, ಸ್ವತ್ತುಗಳನ್ನು ಮತ್ತು ದಾಖಲೆ, ಮುಂತಾದುವುಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ವಹಿಸಿಕೊಡುವುದು
107. ಖಾಸಗಿ ಶಿಕ್ಷಣ ಸಂಸ್ಥೆಯ ಸ್ವತ್ತನ್ನು ಪರಭಾರೆ ಮಾಡಲು ನಿರ್ಬಂಧ
108. ಕೆಲವು ಸಂದರ್ಭಗಳಲ್ಲಿ ಮಾಡಿದ ಸಾಲಗಳನ್ನು ಮರು ಪಾವತಿ ಮಾಡಲು ಕಾರ್ಯದರ್ಶಿಯ ಹೊಣೆ


### ಅಧ್ಯಾಯ - XVI
### ರಾಜ್ಯ ಶಿಕ್ಷಣ ಸಲಹಾ ಪರಿಷತ್ತು, ಇತ್ಯಾದಿ


109. ರಾಜ್ಯ ಶಿಕ್ಷಣ ಸಲಹಾ ಪರಿಷತ್ತು
110. ಸ್ಥಾಯೀ ಸಮಿತಿ
111. ಸಲಹಾ ಸಮಿತಿ
112. ಸಭೆಗಳ ಕಾರ್ಯವಿಧಾನ


### ಅಧ್ಯಾಯ - XVII
### ದಂಡನೆಗಳು


113. 17ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ
114. 18ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ
115. 23ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ
116. ರ್‍ಯಾಗಿಂಗ್ ಮಾಡಿದ್ದಕ್ಕಾಗಿ ದಂಡನೆ
117. ಪರೀಕ್ಷೆಗಳಲ್ಲಿ ಕಾಪಿ ಮಾಡಿದ್ದಕ್ಕೆ ದಂಡನೆ
118. ಪರೀಕ್ಷೆಗಳಲ್ಲಿ ಇತರರಂತೆ ನಟಿಸಿ ಹಾಜರಾಗಿದ್ದಕ್ಕೆ ದಂಡನೆ
119. ಪರೀಕ್ಷಾ ಕೇಂದ್ರದ ಸಮೀಪ ಅಲೆದಾಡುತ್ತಿರುವುದು, ಮುಂತಾದುವಕ್ಕೆ ದಂಡನೆ
120. ಪರೀಕ್ಷೆಯಲ್ಲಿ ಬರೆದ ಉತ್ತರಗಳನ್ನು ವ್ಯತ್ಯಾಸಗೊಳಿಸಿದ್ದಕ್ಕೆ ದಂಡನೆ
121. ಪರೀಕ್ಷೆಯಲ್ಲಿ ಇತರ ದುರಾಚರಣೆಗಳಿಗೆ ನಿಷೇಧ, ಇತ್ಯಾದಿ
122. 28ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ
123. ನೋಂದಣಿಯಾಗದ ಶಿಕ್ಷಣ ಸಂಸ್ಥೆಗಳು, ಮುಂತಾದುವನ್ನು ಸ್ಥಾಪಿಸಿದ್ದಕ್ಕಾಗಿ ದಂಡನೆ
124. ನೋಂದಣಿಯಾಗದ ಟ್ಯುಟೋರಿಯಲ್ ಸಂಸ್ಥೆಗಳನ್ನು ನಿರ್ವಹಿಸಿದ್ದಕ್ಕಾಗಿ ಅಥವಾ ನಡೆಸಿದ್ದಕ್ಕಾಗಿ ದಂಡನೆ
125. 51ನೇ ಪ್ರಕರಣವನ್ನು ಉಲ್ಲಂಘಿಸಿ ಹಣ ಸಂಗ್ರಹಿಸಿದುದಕ್ಕಾಗಿ ದಂಡನೆ

126. ಆಡಳಿತ ಪರಿಷತ್ತು ಆಚಾರ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿದಂಡನೆ

127. ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ನೋಟೀಸನ್ನು ಕೊಡಲು ತಪ್ಪಿರುವುದಕ್ಕಾಗಿ ದಂಡನೆ

128. ಅಪರಾಧದ ಬಗ್ಗೆ ಉಪಬಂಧಿಸಿರದ ಜುಲ್ಮಾನೆಗಳು

129. ಕಂಪನಿಗಳಿಂದ ಅಪರಾಧಗಳು


## ಅಧ್ಯಾಯ - XVIII

### ಸಂಕೀರ್ಣ

130. ಅಪೀಲುಗಳು

131. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ

132. ಪುನರವಲೋಕನ

133. ನಿರ್ದೇಶನಗಳನ್ನು ಕೊಡಲು ಸರ್ಕಾರದ ಅಧಿಕಾರ

134. ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರ

135. ಈ ಅಧಿನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಗೆ ಅಥವಾ ಇನ್ನಿತರ ವ್ಯಕ್ತಿಗೆ ಅಡ್ಡಿಯುಂಟು ಮಾಡಿದ್ದಕ್ಕೆ ದಂಡನೆ

136. ರಕ್ಷಣೆ

137. ತನಿಖೆ ಹಾಗೂ ಅಪರಾಧಗಳ ಸಂಜ್ಞಾನ

138. ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ

139. ವಿಚಾರಣೆ ಮತ್ತು ವ್ಯವಹರಣೆಗಳು

140. ಕರ್ನಾಟಕ ಅಧಿನಿಯಮ, 1966ರ ಸಂಖ್ಯೆ 16ರ ತಿದ್ದುಪಡಿ

141. ಕೆಲವು ಸಂಸ್ಥೆಗಳಿಗೆ ಈ ಅಧಿನಿಯಮದ ಅನ್ವಯ

142. ತೊಂದರೆಗಳ ನಿವಾರಣೆ

143. ಪ್ರತ್ಯಾಯೋಜನೆ

144. ಇತ್ಯರ್ಥದಲ್ಲಿರುವ ವ್ಯವಹರಣೆಗಳ ವರ್ಗಾವಣೆ

145. ನಿಯಮಗಳ ರಚನಾಧಿಕಾರ

146. ನಿರಸನ ಮತ್ತು ಉಳಿಸುವಿಕೆಗಳು

ಅನುಸೂಚಿ - I

ಅನುಸೂಚಿ - II

## [1][1995ರ ಕರ್ನಾಟಕ ಅಧಿನಿಯಮ ಸಂಖ್ಯೆ 1][1]

(1995ರ ಜನವರಿ ಇಪ್ಪತ್ತನೇ ದಿನದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)

# ಕರ್ನಾಟಕ ಶಿಕ್ಷಣ ಅಧಿನಿಯಮ, 1983

(1993ರ ಅಕ್ಟೋಬರ್ ಇಪ್ಪತ್ತೇಳನೇ ದಿನದಂದು ರಾಷ್ಟ್ರಪತಿಯವರ ಅನುಮತಿ ಪಡಿದಿದೆ).

[2][1998ರ ಅಧಿನಿಯಮ 8ರ ಮೂಲಕ ತಿದ್ದುಪಡಿ ಮಾಡಲಾಗಿದೆ][2]

**ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ಸಂಘಟಿಸುವ, ಅಭಿವೃದ್ಧಿಪಡಿಸುವ ಮತ್ತು ಶಿಸ್ತಿಗೆ ಹಾಗೂ ನಿಯಂತ್ರಣಕ್ಕೆ ಒಳಪಡಿಸುವ ಸಲುವಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.**

1. ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ IV ವಿಭಾಗ 2ಬಿ ಸಂಖ್ಯೆ 41 ದಿನಾಂಕ 20–1–1995ರಲ್ಲಿ ಪ್ರಕಟವಾಗಿದೆ.

2. ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ IV ವಿಭಾಗ 2ಬಿ ಸಂಖ್ಯೆ 403 ದಿನಾಂಕ 11–4–1998ರಲ್ಲಿ ಪ್ರಕಟಿಸಲಾಗಿದೆ.

ವಿದ್ಯಾರ್ಥಿಗಳ ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯಗಳ ಸಮರಸ ಬೆಳವಣಿಗೆಗೆ ಪೋಷಣೆ ನೀಡುವ ಮತ್ತು ಶಿಕ್ಷಣದ ಮೂಲಕ ವೈಜ್ಞಾನಿಕ ದೃಷ್ಟಿಕೋನವನ್ನು ಹಾಗೂ ಸರ್ವಧರ್ಮ ಸಮಭಾವವನ್ನು ಬೆಳೆಸುವ ಉದ್ದೇಶದಿಂದ ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಆರೋಗ್ಯಕರ ಶಿಕ್ಷಣ ಪದ್ಧತಿಗಳ ಅಳವಡಿಕೆ, ಶೈಕ್ಷಣಿಕ ಗುಣಮಟ್ಟದ ನಿರ್ವಹಣೆ ಮತ್ತು ಸುಧಾರಣೆ - ಇವುಗಳ ಬಗ್ಗೆ ಮತ್ತು ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ಸಂಘಟಿಸುವ, ಅಭಿವೃದ್ಧಿಪಡಿಸುವ ಮತ್ತು ಶಿಸ್ತಿಗೆ ಹಾಗೂ ನಿಯಂತ್ರಣಕ್ಕೆ ಒಳಪಡಿಸುವ ಬಗ್ಗೆ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ-I
## ಸಾಮಾನ್ಯ

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೆಳಕಂಡವುಗಳನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಟ್ಯುಟೋರಿಯಲ್ ಸಂಸ್ಥೆಗಳಿಗೆ ಅನ್ವಯವಾಗತಕ್ಕುದು:-

(i) ಕೇಂದ್ರ ಸರ್ಕಾರದ ಆರ್ಥಿಕ ನೆರವು ಪಡೆದ ಹಾಗೂ ಕಾನೂನು ಮೂಲಕ ರಾಷ್ಟ್ರೀಯ ಮಹತ್ವದ ಸಂಸ್ಥೆಗಳಿಂದು ಸಂಸತ್ತು ಘೋಷಿಸಿದ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು;

(ii) ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ ಖಖಖ)ರ 3ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ, ವಿಶ್ವವಿದ್ಯಾನಿಲಯಗಳೆಂಬುದಾಗಿ ಪರಿಗಣಿಸತಕ್ಕುದೆಂದು ಘೋಷಿಸಿರುವಂಥ ಉನ್ನತ ಶಿಕ್ಷಣ ಸಂಸ್ಥೆಗಳು;

(iii) ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸಿದ ಮತ್ತು ಅದರ ಆಡಳಿತಕ್ಕೊಳಪಡುವ ಅಥವಾ ಅದಕ್ಕೆ ಸಂಯೋಜಿತವಾದ ಅಥವಾ ಅದರಿಂದ ಮನ್ನಣೆ ಪಡೆದ

ಸಂಸ್ಥೆಗಳು, ಆ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯಗಳು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 22) ಇದರ ವ್ಯಾಪ್ತಿಯೊಳಗೆ ಅವುಗಳಿಗೆ ವ್ಯವಹರಿಸಲಾಗುವಷ್ಟರ ಮಟ್ಟಿಗೆ;

[1][(iiiಎ) ಅನುಕ್ರಮವಾಗಿ ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷಾ ಪರಿಷತ್ತು ಅಥವಾ ಪ್ರೌಢ ಶಿಕ್ಷಣದ ಕೇಂದ್ರ ಮಂಡಲಿಯೊಂದಿಗೆ ಸಂಯೋಜಿತವಾದ ಅಥವಾ ಅದರಿಂದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳು;][1]

1. 1998ರ ಅಧಿನಿಯಮ ಸಂಖ್ಯೆ 8ರ, ಪ್ರಕರಣ 2ರ ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. (ಕರ್ನಾಟಕ ವಿಶೇಷ ರಾಜ್ಯಪತ್ರ 11-4-1998)

(iv) ಯಾವ ಕಾಲೇಜುಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಈ ಕೆಳಕಂಡ ಅಧಿನಿಯಮಗಳ ವ್ಯಾಪ್ತಿಯೊಳಗೆ ವ್ಯವಹರಿಸಲಾಗುವಷ್ಟರ ಮಟ್ಟಿಗೆ ಅಂಥ ಕಾಲೇಜುಗಳು ಮತ್ತು ಶಿಕ್ಷಣ ಸಂಸ್ಥೆಗಳು,-

(ಎ) ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 11);

(ಬಿ) ದಂತ ವೈದ್ಯರ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ XVI);

(ಸಿ) ಔಷಧಗಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ VIII);

(ಡಿ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 28);

[1][(ಡಿಎ) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (1987ರ ಕೇಂದ್ರ ಅಧಿನಿಯಮ ಸಂಖ್ಯೆ 52);

(ಡಿಬಿ) ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ, 1985 (1985ರ ಕೇಂದ್ರ ಅಧಿನಿಯಮ ಸಂಖ್ಯೆ 50);

(ಡಿಸಿ) ರಾಷ್ಟ್ರೀಯ ಶಿಕ್ಷಣ ಪರಿಷತ್ತು ಅಧಿನಿಯಮ, 1993 (1993ರ ಕೇಂದ್ರ ಅಧಿನಿಯಮ ಸಂಖ್ಯೆ 73][1]

1. 1998ರ ಅಧಿನಿಯಮ ಸಂಖ್ಯೆ 8ರ, ಪ್ರಕರಣ 2ರ ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. (ಕರ್ನಾಟಕ ವಿಶೇಷ ರಾಜ್ಯಪತ್ರ 11-4-1998)

(ಇ) ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ವೃತ್ತಿಗರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 9); ಮತ್ತು

(ಎಫ್) ಕರ್ನಾಟಕ ಹೋಮಿಯೋಪತಿ ವೈದ್ಯ ವೃತ್ತಿಗರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 35);

(v) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ನಿರ್ದಿಷ್ಟಪಡಿಸಬಹುದಾದಷ್ಟು ಮಟ್ಟಿಗೆ ಅಂಥ ಇತರ ಸಂಸ್ಥೆಗಳ ವರ್ಗ ಅಥವಾ ವರ್ಗಗಳು:

ಪರಂತು, IIIನೇ ಅಧ್ಯಾಯದಲ್ಲಿ, Vನೇ ಅಧ್ಯಾಯದ 35ನೇ ಪ್ರಕರಣದಲ್ಲಿ, VIIನೇ ಅಧ್ಯಾಯದಲ್ಲಿ ಮತ್ತು IXನೇ ಅಧ್ಯಾಯದಿಂದ XVರವರೆಗಿನ ಅಧ್ಯಾಯಗಳಲ್ಲಿ ಎರಡೂ ಸೇರಿ ಮತ್ತು 57 ಮತ್ತು 58ನೇ ಪ್ರಕರಣಗಳನ್ನು ಬಿಟ್ಟು Xನೇ ಅಧ್ಯಾಯದಲ್ಲಿ ಇರುವುದು ಯಾವುದೂ ವಾಣಿಜ್ಯ ವಿದ್ಯಾ ಸಂಸ್ಥೆಗಳಿಗೆ ಅನ್ವಯವಾಗತಕ್ಕುದಲ್ಲ.

(4) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕುದು ಮತ್ತು ರಾಜ್ಯ ಸರ್ಕಾರವು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮವು 1-6-1995ರಿಂದ ಜಾರಿಗೆ ಬಂದಿದೆ, ಅಧಿಸೂಚನೆ ಸಂಖ್ಯೆ ಇಡಿ 2 ಇಎಂಎಸ್ 95, ಬೆಂಗಳೂರು, ದಿನಾಂಕ 30-5-1995 (ಕರ್ನಾಟಕ ವಿಶೇಷ ರಾಜ್ಯಪತ್ರ 30-5-1995)

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಶೈಕ್ಷಣಿಕ ವರ್ಷ" ಎಂದರೆ ಯಾವುದೇ ನಿರ್ದಿಷ್ಟ ಪ್ರದೇಶಕ್ಕೆ ಅಥವಾ ಯಾವುದೇ ಶಿಕ್ಷಣ ಸಂಸ್ಥೆಗೆ ಅಥವಾ ಶಿಕ್ಷಣ ಸಂಸ್ಥೆಗಳ ವರ್ಗಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಥವಾ ನಿಯಮಿಸಲಾದ ಪ್ರಾಧಿಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಪ್ರಾರಂಭವಾಗುವ ವರ್ಷ;

(2) "ವಯಸ್ಕರ ಶಿಕ್ಷಣ" -ಎಂದರೆ ಈ ಮುಂಚೆ ಯಾವುದೇ ಸಮಯದಲ್ಲಿ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡದೇ ಇರುವಂಥ, ಅಥವಾ ಸಂದರ್ಭಾನುಸಾರ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಮಾಡುತ್ತಿದ್ದ ವ್ಯಾಸಂಗವನ್ನು ಯಾವುದೇ ಹಂತದಲ್ಲಿ ಬಿಟ್ಟುಬಿಟ್ಟಂಥ ಹದಿನೈದು ವರ್ಷಕ್ಕಿಂತ ಕಡಿಮೆಯಿಲ್ಲದ ವಯಸ್ಸಿನ ವ್ಯಕ್ತಿಗೆ ನೀಡುವ ಶಿಕ್ಷಣ ಅಥವಾ ಮುಂದುವರಿಸಿದ ಶಿಕ್ಷಣ;

(3) "ಅನುಮೋದಿತ ಶಾಲೆ" ಎಂದರೆ, ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿರುವ ಮತ್ತು ಪ್ರಾಥಮಿಕ ಶಿಕ್ಷಣ ನೀಡುತ್ತಿರುವ ಹಾಗೂ -

(ಎ) ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಆಡಳಿತದ ಅಧೀನದಲ್ಲಿರುವ ಯಾವುದೇ ಶಾಲೆ; ಅಥವಾ

(ಬಿ) ಯಾವುದೇ ಇತರ ಆಡಳಿತ ವರ್ಗದ ಅಧೀನದಲ್ಲಿದ್ದು ರಾಜ್ಯ ಸರ್ಕಾರದ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯಿಂದ ಅಥವಾ ಶಾಲಾ ಮಂಡಲಿಯಿಂದ ಈ ಅಧಿನಿಯಮದ ಉದ್ದೇಶಗಳಿಗಾಗಿ ಅನುಮೋದಿತ ಶಾಲೆಯೆಂಬುದಾಗಿ ಮನ್ನಣೆ ಪಡೆದಿರುವ ಯಾವುದೇ ಶಾಲೆ;

(4) "ಹಾಜರಾತಿ ಪ್ರಾಧಿಕಾರಿ" ಎಂದರೆ ನಿಯಮಿಸಲಾದ ಅರ್ಹತೆಗಳನ್ನು ಹೊಂದಿದವನಾಗಿದ್ದು 13ನೇ ಪ್ರಕರಣದ ಮೇರೆಗೆ ಹಾಜರಾತಿ ಪ್ರಾಧಿಕಾರಿಯೆಂದು ನೇಮಕಗೊಂಡ ಯಾವನೇ ವ್ಯಕ್ತಿ;

(5) "ಹಿಂದುಳಿದ ವರ್ಗಗಳು" ಎಂದರೆ, ಭಾರತ ಸಂವಿಧಾನದ (15)ನೇ ಅನುಚ್ಛೇದದ (4)ನೇ ಖಂಡದ ಅಥವಾ ಸಂದರ್ಭಾನುಸಾರ 16ನೇ ಅನುಚ್ಛೇದದ (4)ನೇ ಖಂಡದ ಉದ್ದೇಶಗಳಿಗಾಗಿ ಸರ್ಕಾರವು ಮನ್ನಣೆ ನೀಡಿದ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಯಾವುದೇ ನಾಗರೀಕ ವರ್ಗಗಳು;

(6) "ಮಗು" ಎಂದರೆ, ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಸಾರ್ವತ್ರಿಕವಾಗಿ ಅಥವಾ ಯಾವುದೇ ನಿರ್ದಿಷ್ಟ ಪ್ರದೇಶಕ್ಕೆ ಸಂಬಂಧಿಸಿ ನಿರ್ದಿಷ್ಟಪಡಿಸಬಹುದಾದಂತೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಆರು ವರ್ಷಗಳಿಗೆ ಕಡಿಮೆಯಲ್ಲದ ಅಥವಾ ಹದಿನಾಲ್ಕು ವರ್ಷಗಳಿಗೆ ಹೆಚ್ಚಲ್ಲದ ವಯೊ ಗುಂಪಿನ ಬಾಲಕ ಅಥವಾ ಬಾಲಕಿ;

(7) "ಸಕ್ಷಮ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳ ಮೇರೆಗೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕಾಗಿ ಅಥವಾ ಅಂಥ ಉದ್ದೇಶಗಳಿಗಾಗಿ ಅಥವಾ ಸಂಸ್ಥೆಗಳ ಅಂಥ ವರ್ಗಗಳಿಗಾಗಿ ಸಕ್ಷಮ ಪ್ರಾಧಿಕಾರದ ಪ್ರಕಾರ್ಯಗಳನ್ನು

ನೆರವೇರಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಅಧಿಕೃತಗೊಳಿಸಿದ ಯಾವನೇ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರ;

(8) "ವಾಣಿಜ್ಯ ಶಿಕ್ಷಣ" ಎಂದರೆ, ಬೆರಳಚ್ಚು, ಶೀಘ್ರಲಿಪಿ, ಜಮಾ ಖರ್ಚು ಲೆಕ್ಕ ಇಡುವುದು ಮತ್ತು ಲೇಖಾಪಾಲನ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ಕಛೇರಿ ವ್ಯವಹಾರ ಹಾಗೂ ಕಾರ್ಯವಿಧಾನ, ವ್ಯಾಪಾರ ಕೌಶಲ ಮತ್ತು ಮಾರಾಟ ವ್ಯವಹಾರ, ಬ್ಯಾಂಕಿಂಗ್ ವ್ಯವಹಾರ, ವಿಮಾ ವ್ಯವಹಾರ ಹಾಗೂ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ವಿಷಯಗಳಲ್ಲಿ ಶಿಕ್ಷಣ;

(9) "ವಾಣಿಜ್ಯ ಸಂಸ್ಥೆ" ಎಂದರೆ, ವಾಣಿಜ್ಯ ಶಿಕ್ಷಣ ನೀಡುತ್ತಿರುವ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯು ನಡೆಸುತ್ತಿರುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಹಾಜರುಪಡಿಸುತ್ತಿರುವ ಯಾವುದೇ ಸಂಸ್ಥೆ;

(10) "ಜಿಲ್ಲೆ" ಎಂದರೆ ರೆವಿನ್ಯೂ ಜಿಲ್ಲೆ;

(11) "ಜಿಲ್ಲಾ ಶಿಕ್ಷಣ ಅಧಿಕಾರಿ" ಎಂದರೆ, ಜಿಲ್ಲೆಯಲ್ಲಿ ಅಥವಾ ಜಿಲ್ಲೆಯ ಭಾಗದಲ್ಲಿ ಪ್ರಾಥಮಿಕ ಶಿಕ್ಷಣದ ಆಡಳಿತ ನಿರ್ವಹಣೆಗೆ ಅಂಥ ಅಧಿಕಾರಿಯಾಗಿ ನೇಮಿಸಲಾದಂಥ ಅಧಿಕಾರಿ;

(12) "ನಿರ್ದೇಶಕ, ಕಡ್ಡಾಯ ಪ್ರಾಥಮಿಕ ಶಿಕ್ಷಣ" ಎಂದರೆ ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಅಥವಾ ನಿರ್ದೇಶಕ, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಇವರ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಮತ್ತು ಅಧಿಕಾರಗಳನ್ನು ಚಲಾಯಿಸುತ್ತಿರುವ ಯಾರೇ ಇತರ ಅಧಿಕಾರಿ;

(13) ಖಾಸಗಿ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ, "ಶಿಕ್ಷಣ ಏಜೆನ್ಸಿ" ಎಂದರೆ ಅಂಥ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಮತ್ತು ಅದರ ಆಡಳಿತ ನಡೆಸುತ್ತಿರುವ ಅಥವಾ ಅದನ್ನು ಸ್ಥಾಪಿಸಲು ಮತ್ತು ಅದರ ಆಡಳಿತ ನಡೆಸಲು ಉದ್ದೇಶಿಸಿರುವ ಅಥವಾ ಅಂಥ ಶಿಕ್ಷಣ ಸಂಸ್ಥೆಯ ಸ್ಥಾಪನೆ, ವ್ಯವಸ್ಥಾಪನೆ, ಆಡಳಿತ ಮತ್ತು ನಿರ್ವಹಣೆಯನ್ನು ವಹಿಸಿಕೊಂಡ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ;

(14) "ಶಿಕ್ಷಣ ಸಂಸ್ಥೆ" ಎಂದರೆ 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಶಿಕ್ಷಣ ನೀಡುತ್ತಿರುವ ಯಾವುದೇ ಸಂಸ್ಥೆ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಯೂ ಇದರಲ್ಲಿ ಒಳಗೊಳ್ಳುತ್ತದೆ. ಆದರೆ ವಿಶ್ವವಿದ್ಯಾನಿಲಯದ ಅಥವಾ ಕೇಂದ್ರ ಸರ್ಕಾರದ ನೇರ ವ್ಯವಸ್ಥಾಪನೆಗೆ ಒಳಪಟ್ಟಿರುವ ಸಂಸ್ಥೆಗಳು ಅಥವಾ ಟ್ಯುಟೋರಿಯಲ್ ಸಂಸ್ಥೆಗಳು ಇದರಲ್ಲಿ ಒಳಗೊಳ್ಳುವುದಿಲ್ಲ;

(15) "ನೌಕರ" ಎಂದರೆ ಶಿಕ್ಷಣ ಸಂಸ್ಥೆಯಲ್ಲಿ ನೇಮಕಗೊಂಡ ಯಾವನೇ ವ್ಯಕ್ತಿ;

(16) "ಸಾಮಾನ್ಯ ಶಿಕ್ಷಣ" ಎಂದರೆ ಧಾರ್ಮಿಕ, ವೃತ್ತಿಪರ, ವೈದ್ಯಕೀಯ, ತಾಂತ್ರಿಕ ಅಥವಾ ವಿಶೇಷ ಶಿಕ್ಷಣ ಇವುಗಳ ಹೊರತಾಗಿ ಶಿಕ್ಷಣದ ಪ್ರತಿಯೊಂದು ಶಾಖೆ;

(17) "ಆಡಳಿತ ಪರಿಷತ್ತು" ಎಂದರೆ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಅಥವಾ ವಾಣಿಜ್ಯ ಶಿಕ್ಷಣ ಸಂಸ್ಥೆಯನ್ನು ಅಥವಾ ಟ್ಯುಟೋರಿಯಲ್ ಸಂಸ್ಥೆಯನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು ಈ ಅಧಿನಿಯಮದ ಮೇರೆಗೆ ಅನುಮತಿಸಲಾದ ಅಥವಾ ಅನುಮತಿಸಲಾಗಿದೆಯೆಂದು ಭಾವಿಸಲಾದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ ಮತ್ತು ಸದರಿ ಶಿಕ್ಷಣ ಸಂಸ್ಥೆಯ ವ್ಯವಹಾರಗಳನ್ನು ಯಾವ ಆಡಳಿತ ನಿಕಾಯಕ್ಕೆ ವಹಿಸಿಕೊಡಲಾಗಿದೆಯೋ ಅದನ್ನು ಯಾವುದೇ ಹೆಸರಿನಿಂದ ಕರೆಯಲಿ ಆ ಆಡಳಿತ ನಿಕಾಯ ಇದರಲ್ಲಿ ಒಳಗೊಳ್ಳುತ್ತದೆ;

(18) "ಅನುದಾನ" ಅಥವಾ "ಸಹಾಯಾನುದಾನ" ಎಂದರೆ ಯಾವುದೇ ಶಿಕ್ಷಣ ಸಂಸ್ಥೆಗೆ ರಾಜ್ಯ ನಿಧಿಯಿಂದ ಸಹಾಯವಾಗಿ ಸಂದಾಯ ಮಾಡಲಾದ ಯಾವುದೇ ಮೊತ್ತ;

(19) “ವ್ಯವಸ್ಥಾಪಕ ಸಮಿತಿ” ಎಂದರೆ, ಖಾಸಗಿ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪನೆಯನ್ನು ಮತ್ತು ಆಡಳಿತವನ್ನು ಯಾರಿಗೆ ವಹಿಸಲಾಗಿದೆಯೋ ಅಥವಾ ಅದರ ಹೊಣೆ ಯಾರಿಗೆ ವಹಿಸಲಾಗಿದೆಯೋ ಆ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ ಮತ್ತು ಯಾವುದೇ ಸಂಘ, ನ್ಯಾಸ ಅಥವಾ ಸಂಸ್ಥೆಯು ಒಂದಕ್ಕಿಂತ ಹೆಚ್ಚು ಅಂಥ ಸಂಸ್ಥೆಗಳ ವ್ಯವಸ್ಥಾಪನೆಯನ್ನು ನಿರ್ವಹಿಸುತ್ತಿದ್ದಲ್ಲಿ ಅಂಥ ಪ್ರತಿಯೊಂದು ಸಂಸ್ಥೆಯ ವ್ಯವಸ್ಥಾಪಕ ಸಮಿತಿಯೂ ಇದರಲ್ಲಿ ಒಳಗೊಳ್ಳುತ್ತದೆ;

(20) “ವೈದ್ಯಕೀಯ ಶಿಕ್ಷಣ”ವು ಆಧುನಿಕ ವೈದ್ಯ ವಿಜ್ಞಾನದ ಎಲ್ಲ ವಿಭಾಗಗಳು, ಆಯುರ್ವೇದ ವೈದ್ಯ ಪದ್ಧತಿ, ಯುನಾನಿ ವೈದ್ಯ ಪದ್ಧತಿ, ಸಂಯೋಜಿತ ವೈದ್ಯ ಪದ್ಧತಿ, ದೇಶೀ ವೈದ್ಯ ಪದ್ಧತಿ, ಪ್ರಕೃತಿ ಚಿಕಿತ್ಸಾ ಪದ್ಧತಿ, ಸಿದ್ಧ ಅಥವಾ ಹೋಮಿಯೋಪತಿ-ಈ ಮುಂತಾದುವುಗಳ ಶಿಕ್ಷಣವನ್ನು ಒಳಗೊಳ್ಳುತ್ತದೆ;

(21) “ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆ” ಎಂದರೆ, ಭಾರತ ಸಂವಿಧಾನದ 30ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಧರ್ಮವನ್ನು ಅಥವಾ ಭಾಷೆಯನ್ನು ಆಧರಿಸಿ ತಮ್ಮ ಇಷ್ಟಾನುಸಾರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಲು ಹಕ್ಕುಳ್ಳಂಥ ಅಲ್ಪಸಂಖ್ಯಾತರು ಹಾಗೆ ಸ್ಥಾಪಿಸಿ ನಿರ್ವಹಿಸುವಂಥ ಖಾಸಗಿ ಶಿಕ್ಷಣ ಸಂಸ್ಥೆ;

(22) “ಅನೌಪಚಾರಿಕ ಶಿಕ್ಷಣ” ಎಂದರೆ ಈ ಹಿಂದೆ ಯಾವುದೇ ಕಾಲದಲ್ಲಿ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಹಾಜರಾಗಿಲ್ಲದ ಅಥವಾ ಸಂದರ್ಭಾನುಸಾರ ಒಂದು ಶಿಕ್ಷಣ ಸಂಸ್ಥೆಯಲ್ಲಿನ ವ್ಯಾಸಂಗದ ಯಾವುದೇ ಹಂತದಲ್ಲಿ ಶಾಲೆ ಬಿಟ್ಟು ಬಿಟ್ಟ ವ್ಯಕ್ತಿಗೆ, ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಸೂಕ್ತ ಹಂತದಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗುವಂತೆ ಅವನಿಗೆ ಹದಿನೈದು ವರ್ಷವಾಗುವವರೆಗೆ ನೀಡುವ ಶಿಕ್ಷಣ;

(23) ಮಗುವಿನ ಸಂಬಂಧದಲ್ಲಿ “ತಂದೆ/ತಾಯಿ” ಎಂಬುದು ಮಗುವಿನ ಪೋಷಕನನ್ನು ಮತ್ತು ಮಗುವಿನ ಕಾನೂನುಬದ್ಧ ಅಭಿರಕ್ಷೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(24) “ನಿಯಮಿಸಲಾದುದು” ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(25) “ಪ್ರಾಥಮಿಕ ಶಿಕ್ಷಣ” ಎಂದರೆ ಈ ಅಧಿನಿಯಮದ ಮೇರೆಗೆ ನಿಯಮಿಸಲಾದಂಥ ವರ್ಗಗಳಲ್ಲಿ ಮತ್ತು ತರಗತಿಗಳಲ್ಲಿ ಮತ್ತು ಅಂಥ ವರ್ಗಗಳ ಮತ್ತು ತರಗತಿಗಳವರೆಗಿನ ಶಿಕ್ಷಣ;

(26) “ಪ್ರಾಥಮಿಕ ಶಾಲೆ” ಎಂದರೆ ಯಾವ ಶಾಲೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ನೀಡಲಾಗುವುದೋ ಅಂಥ ಶಾಲೆ ಅಥವಾ ಅದರ ಭಾಗ;

(27) “ಖಾಸಗಿ ಶಿಕ್ಷಣ ಸಂಸ್ಥೆ” ಎಂದರೆ, ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳ ನಿಕಾಯವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಅಥವಾ ನಿರ್ವಹಿಸಿಕೊಂಡು ಬರುವ ಮತ್ತು 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಶಿಕ್ಷಣವನ್ನು ನೀಡುವ ಯಾವುದೇ ಶಿಕ್ಷಣ ಸಂಸ್ಥೆ, ಆದರೆ ಇದರಲ್ಲಿ,-

(ಎ) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಅಥವಾ ಪ್ರಾಯೋಜಿಸಿದ ಯಾವುದೇ ಇತರ ಪ್ರಾಧಿಕಾರವು ಸ್ಥಾಪಿಸಿದ, ಆಡಳಿತ ನಡೆಸುವ ಮತ್ತು ನಿರ್ವಹಿಸುವ ಶಿಕ್ಷಣ ಸಂಸ್ಥೆ;

(ಬಿ) ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಶಿಕ್ಷಣ ಸಂಸ್ಥೆ;

(ಸಿ) ಯಾವುದೇ ಇತರ ಶಿಕ್ಷಣವನ್ನು ನೀಡದೆ, ಧಾರ್ಮಿಕ ಬೋಧನೆಯನ್ನು ಮಾತ್ರವೇ ಕೊಡುವ, ಒದಗಿಸುವ ಅಥವಾ ನೀಡುವ ಶಿಕ್ಷಣ ಸಂಸ್ಥೆ;

(ಡಿ) ಅನುಮೋದಿತ ಪಠ್ಯ ವಿಷಯ ಅಥವಾ ವ್ಯಾಸಂಗ ಕ್ರಮ ಅಥವಾ ಸರ್ಕಾರದ ಇಲ್ಲವೇ ವಿಶ್ವವಿದ್ಯಾಲಯದ ಪರೀಕ್ಷೆಗಳಿಲ್ಲದ ಶಿಕ್ಷಣವನ್ನು ನೀಡುವ ಶಿಕ್ಷಣ ಸಂಸ್ಥೆಗಳು

-ಇದರಲ್ಲಿ ಒಳಗೊಳ್ಳುವುದಿಲ್ಲ;

(28) "ಖಾಸಗಿ ಪಾಠ" ಎಂದರೆ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಯ ನೌಕರನು ಆ ಸಂಸ್ಥೆಯ ಆವರಣದ ಹೊರಗೆ ವಿದ್ಯಾರ್ಥಿಗಳಿಗೆ ಬೋಧನೆ ನೀಡುವುದು ಅಥವಾ ಪಾಠ ಹೇಳಿಕೊಡುವುದು;

[1][“(28ಎ) "ಸಾರ್ವಜನಿಕ ಹಿತಾಸಕ್ತಿ" ಎಂಬುವಲ್ಲಿ ಸಾರ್ವಜನಿಕ ಸುವ್ಯವಸ್ಥೆ, ಜನಾರೋಗ್ಯ, ಸಾರ್ವಜನಿಕ ನೈತಿಕತೆ ಮತ್ತು ಅಂಥದೇ ಇತರೆ ಉದ್ದೇಶಗಳು ಒಳಗೊಳ್ಳುತ್ತವೆ."][1]

1. 1998ರ ಅಧಿನಿಯಮ ಸಂಖ್ಯೆ 8ರ, ಪ್ರಕರಣ 3ರ ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. ಕರ್ನಾಟಕ ವಿಶೇಷ ರಾಜ್ಯಪತ್ರ ದಿನಾಂಕ 11-4-1998

(29) "ರ್‍ಯಾಗಿಂಗ್" ಎಂದರೆ, ಯಾವನೇ ವಿದ್ಯಾರ್ಥಿಗೆ ಕ್ರಿಯಾಪೂರ್ಣ ತಮಾಷೆಯಾಗಿ ಅಥವಾ ಇತರ ರೀತಿಯಲ್ಲಿ ಬೆದರಿಕೆ ಒಡ್ಡುವ, ಅಕ್ರಮವಾಗಿ ನಿಗ್ರಹಿಸುವ, ಅಕ್ರಮವಾಗಿ ಬಂಧನದಲ್ಲಿಡುವ ಅಥವಾ ಅವನಿಗೆ ಗಾಯವನ್ನುಂಟುಮಾಡುವ ಅಥವಾ ಅವನ ಮೇಲೆ ಆಪರಾಧಿಕ ಬಲ ಪ್ರಯೋಗ ಮಾಡುವ ಮೂಲಕ ಅಥವಾ ಹಾಗೆ ಬೆದರಿಕೆ ಒಡ್ಡುವ, ಅಕ್ರಮವಾಗಿ ಬಂಧನದಲ್ಲಿಡುವ, ಗಾಯಗೊಳಿಸುವ ಅಥವಾ ಆಪರಾಧಿಕ ಬಲ ಪ್ರಯೋಗ ಮಾಡುವ, ಬೆದರಿಕೆ ಒಡ್ಡುವ ಮೂಲಕ ಮಾನವನ ಘನತೆಗೆ ಕುಂದುಂಟು ಮಾಡುವ ಅಥವಾ ಅವನ ಶರೀರವನ್ನು ಹಿಂಸೆಗೊಳಪಡಿಸುವ ಅಥವಾ ಅವನನ್ನು ಅಪಹಾಸ್ಯಕ್ಕೀಡಾಗುವಂತೆ ಮಾಡುವ ಯಾವುದೇ ಕೃತ್ಯವನ್ನು ಮಾಡುವಂತೆ ಅಥವಾ ಯಾವುದೇ ಕಾನೂನುಬದ್ಧ ಕಾರ್ಯವನ್ನು ಮಾಡದಂತೆ ಮಾಡುವುದು, ಪ್ರೇರೇಪಿಸುವುದು, ಒತ್ತಾಯ ಮಾಡುವುದು ಅಥವಾ ಬಲವಂತ ಮಾಡುವುದು;

(30) "ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ" ಎಂದರೆ ಈ ಅಧಿನಿಯಮದ ಮೇರೆಗೆ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ ಮತ್ತು ಸದರಿ ಅಧಿನಿಯಮದ ಮೇರೆಗೆ ಮಾನ್ಯತೆ ಪಡೆದಿದೆ ಎಂದು ಭಾವಿಸಲಾದ ಸಂಸ್ಥೆಯನ್ನು ಒಳಗೊಳ್ಳುತ್ತದೆ;

(31) "ನೋಂದಣಿ ಪ್ರಾಧಿಕಾರ" ಎಂದರೆ ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕಾಗಿ ಅಥವಾ ಅಂಥ ಉದ್ದೇಶಕ್ಕಾಗಿ ಅಥವಾ ಅಂಥ ಸಂಸ್ಥೆಗಳ ವರ್ಗಕ್ಕಾಗಿ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳ ಮೇರೆಗೆ ನೋಂದಣಿ ಪ್ರಾಧಿಕಾರದ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ಅಧಿಕೃತನಾದ ಯಾವನೇ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರ;

(32) "ಪ್ರೌಢ ಶಿಕ್ಷಣ" ಎಂದರೆ ನಿಯಮಿಸಬಹುದಾದಂಥ ತರಗತಿಯಲ್ಲಿ ಅಥವಾ ದರ್ಜೆಯಲ್ಲಿ ಮತ್ತು ಆ ತರಗತಿಯ ಅಥವಾ ಆ ದರ್ಜೆಯ ವರೆಗಿನ ಶಿಕ್ಷಣ;

(33) ಖಾಸಗಿ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ "ಕಾರ್ಯದರ್ಶಿ" ಎಂದರೆ, ಅವನನ್ನು ಯಾವ ಹೆಸರಿನಿಂದಲಾದರೂ ಕರೆದರೂ ಸರಿಯೆ, ಖಾಸಗಿ ಶಿಕ್ಷಣ ಸಂಸ್ಥೆಯ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ, ಸಂಸ್ಥೆಯ ವ್ಯವಹಾರಗಳ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಮುಖ್ಯ ಕಾರ್ಯನಿರ್ವಾಹಕನಾಗಿರುವಂಥ ಯಾವನೇ ವ್ಯಕ್ತಿ;

(34) "ಸಂಘ" ಎಂಬುದು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (ಕರ್ನಾಟಕ ಅಧಿನಿಯಮ 1960ರ 17) ಅಥವಾ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಮೇರೆಗೆ ನೋಂದಣಿಯಾದ ಸಂಘವನ್ನು ಅಥವಾ ಮುಂಬೈ ನ್ಯಾಸಗಳ ಅಧಿನಿಯಮ, 1950ರ ಮೇರೆಗೆ

ನೋಂದಾಯಿತವಾದ ನ್ಯಾಸವನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತವಾದ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ;

(35) "ವಿಶೇಷ ಶಿಕ್ಷಣ" ಎಂದರೆ ಅಂಗವಿಕಲರಿಗಾಗಿ ಶಿಕ್ಷಣ, ಸಂಗೀತಶಿಕ್ಷಣ, ನೃತ್ಯ, ನಾಟಕ ಮತ್ತು ಲಲಿತಕಲೆಗಳ ಶಿಕ್ಷಣ, ಆಟಗಳು ಹಾಗೂ ಕ್ರೀಡೆಗಳೂ ಸೇರಿದಂತೆ ದೈಹಿಕ ಶಿಕ್ಷಣ ಹಾಗೂ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆ ಹೊರಡಿಸಿ ನಿರ್ದಿಷ್ಟಪಡಿಸಬಹುದಾದಂಥ ಶಿಕ್ಷಣದ ಇತರೆ ಯಾವುದೇ ಪ್ರಕಾರಗಳು;

(36) "ನಿರ್ದಿಷ್ಟಪಡಿಸಿದ ಪ್ರದೇಶ" ಎಂದರೆ ಯಾವ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿರತಕ್ಕುದೆಂದು 11ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಧಿಸೂಚಿಸುವುದೋ ಆ ಯಾವುದೇ ಪ್ರದೇಶ;

(37) "ತಾಂತ್ರಿಕ ಶಿಕ್ಷಣ" ಎಂದರೆ ಇಂಜಿನಿಯರಿಂಗ್, ತಾಂತ್ರಿಕ ವಿಜ್ಞಾನ, ವಾಸ್ತುಶಿಲ್ಪ, ಕುಂಭಕಲೆ, ಔದ್ಯಮಿಕ ತರಬೇತಿ, ಗಣಿಗಾರಿಕೆ ಇವುಗಳ ಅಥವಾ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾಂಥ ಯಾವುದೇ ಇತರ ವಿಷಯಗಳ ವ್ಯಾಸಂಗಕ್ರಮ;

(38) "ನ್ಯಾಯಾಧಿಕರಣ" ಎಂದರೆ 96ನೇ ಪ್ರಕರಣದ ಮೇರೆಗೆ ರಚಿತವಾದ ಶಿಕ್ಷಣ ಅಪೀಲು ನ್ಯಾಯಾಧಿಕರಣ;

(39) "ಟ್ಯುಟೋರಿಯಲ್ ಸಂಸ್ಥೆ" ಎಂದರೆ ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ರಾಜ್ಯ ಸರ್ಕಾರದ ಅಥವಾ ಯಾವುದೇ ನಿಕಾಯದ ಅಥವಾ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯದ ಅಥವಾ ಪ್ರಾಧಿಕಾರದ ಮೂಲಕ ರಾಜ್ಯದಲ್ಲಿ ಯಾವುದೇ ಶಿಕ್ಷಣ ವಿಭಾಗದಲ್ಲಿ ಯಾವುದೇ ವಿಷಯದ ಬಗ್ಗೆ ನಡೆಸಲಾಗುವ ಅಥವಾ ಮನ್ನಣೆ ನೀಡಲಾದ ಪರೀಕ್ಷೆಗೆ ಇಪ್ಪತ್ತು ಅಥವಾ ಹೆಚ್ಚು ವ್ಯಕ್ತಿಗಳನ್ನು ಸಿದ್ಧಗೊಳಿಸುವ ದೃಷ್ಟಿಯಿಂದ ಕ್ರಮಬದ್ಧವಾಗಿ ಶಿಕ್ಷಣ ನೀಡಲು ಅಥವಾ ಬೋಧನೆ ಮಾಡಲು ಇಬ್ಬರಿಗಿಂತ ಕಡಿಮೆಯಲ್ಲದ ವ್ಯಕ್ತಿಗಳು ಸ್ಥಾಪಿಸಿರುವ, ಅಥವಾ ನಡೆಸುತ್ತಿರುವ ಸರ್ಕಾರದ ಮನ್ನಣೆ ಪಡೆಯದ ಒಂದು ಸಂಸ್ಥೆ.

**3. ಶಿಕ್ಷಣದ ವಿನಿಯಮನ.–** (1) ರಾಜ್ಯ ಸರ್ಕಾರವು, 1ನೇ ಪ್ರಕರಣದ (3)ನೇ ಉಪಪ್ರಕರಣಕ್ಕೊಳಪಟ್ಟು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ, ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ವಿಶೇಷ ಶಿಕ್ಷಣ ಇವುಗಳನ್ನು ಎಲ್ಲ ಹಂತಗಳಲ್ಲಿ ವಿನಿಯಮಿಸಬಹುದು.

(2) ರಾಜ್ಯ ಸರ್ಕಾರವು ಆ ಉದ್ದೇಶಕ್ಕಾಗಿ,–

(ಎ) ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಬಹುದು;

(ಬಿ) ನಿಯಮಿಸಬಹುದಾದಂಥ ವಿಶಿಷ್ಟ ವಿವರಣೆಗನುಸಾರವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಲು ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಖಾಸಗಿ ವ್ಯಕ್ತಿಗಳ ನಿಕಾಯಕ್ಕೆ ಅನುಮತಿ ನೀಡಬಹುದು;

(ಸಿ) ಟ್ಯುಟೋರಿಯಲ್ ಸಂಸ್ಥೆಗಳೂ ಸೇರಿದಂತೆ ಶಿಕ್ಷಣ ಸಂಸ್ಥೆಗಳ ನೋಂದಣಿಯನ್ನು ಅಗತ್ಯಪಡಿಸಬಹುದು;

(ಡಿ) ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡಬಹುದು;

(ಇ) ಈ ಅಧಿನಿಯಮದ ಉದ್ದೇಶಗಳ ಈಡೇರಿಕೆಗಾಗಿ ಮಾನ್ಯತೆ ಪಡೆದ ಯಾವುದೇ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ನೀಡಬಹುದು;

(ಎಫ್) ಶಿಕ್ಷಣ ಸಂಸ್ಥೆಯ ಅಥವಾ ಅಂಥ ಸಂಸ್ಥೆಗಳ ವರ್ಗದ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡುವ ವ್ಯಕ್ತಿಗಳ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆಯೂ ಸೇರಿದಂತೆ ಪ್ರವೇಶವನ್ನು ಮತ್ತು ಅಂಥ ಪ್ರವೇಶಕ್ಕೆ ಕನಿಷ್ಠ ವಯೋಮಿತಿಯನ್ನು ವಿನಿಯಮಿಸಬಹುದು;

(ಜಿ) ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಅಂಥ ಸಂಸ್ಥೆಗಳ ವರ್ಗದ ಸಂಬಂಧದಲ್ಲಿ ಅರ್ಹತೆ ಹಾಗೂ ಪ್ರವೇಶದ ಬಗ್ಗೆ ಷರತ್ತುಗಳನ್ನು ನಿಯಮಿಸಬಹುದು;

(ಎಚ್) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬಹುದು ಅಥವಾ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡಬಹುದು ಮತ್ತು ಮಾನ್ಯತೆ ಪಡೆದ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುದಾನ ನೀಡುವ ಬಗ್ಗೆ ನಿಯಮಗಳನ್ನು ರಚಿಸಬಹುದು;

(ಐ) ಕಲೆ, ಕುಶಲಕಲೆ, ಸಂಗೀತ, ನೃತ್ಯ, ನಾಟಕ ಅಥವಾ ಅಂಥ ಇತರ ಲಲಿತ ಕಲೆಗಳ ಮತ್ತು ಕ್ರೀಡೆಗಳೂ ಸೇರಿದಂತೆ ದೈಹಿಕ ಶಿಕ್ಷಣ-ಇವುಗಳಲ್ಲಿ ಶಿಕ್ಷಣ ನೀಡಲು ಸಂಸ್ಥೆಗಳಿಗೆ ಅನುಮತಿ ನೀಡಬಹುದು ಇಲ್ಲವೆ ಅವುಗಳನ್ನು ಸ್ಥಾಪಿಸಬಹುದು;

(ಜೆ) ಪ್ರಾಥಮಿಕ ಪೂರ್ವ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣ ಸಂಸ್ಥೆಗಳಿಗೆ ಅಥವಾ ಕೇಂದ್ರಗಳ ಸ್ಥಾಪನೆಗೆ ಅನುಮತಿ ನೀಡಬಹುದು ಅಥವಾ ಅವುಗಳನ್ನು ಸ್ಥಾಪಿಸಬಹುದು; ಮತ್ತು,

(ಕೆ) ಕಾಲಕಾಲಕ್ಕೆ ಅವಶ್ಯ ಅಥವಾ ಜರೂರು ಎಂದು ತಾನು ಪರಿಗಣಿಸಬಹುದಾದಂಥ ಯಾವುದೇ ಇತರ ಕ್ರಮಗಳನ್ನು ಕೈಗೊಳ್ಳಬಹುದು.

**4. ಖಾಸಗಿ ಪಾಠವನ್ನು ನಿಷೇಧಿಸುವುದು.–** ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಯಾವ ಸಂಸ್ಥೆಯೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ಆ ತರುವಾಯ, ತನ್ನ ಯಾವುದೇ ನೌಕರನಿಗೆ ಖಾಸಗಿ ಪಾಠ ಹೇಳಿಕೊಡುವುದಕ್ಕೆ ಅನುಮತಿಸತಕ್ಕುದಲ್ಲ ಅಥವಾ ಅಂಥ ನೌಕರನೂ ಯಾವುದೇ ವ್ಯಕ್ತಿಗೆ ಹಾಗೆ ಖಾಸಗಿ ಪಾಠವನ್ನು ಹೇಳಿಕೊಡತಕ್ಕುದಲ್ಲ.

**5. ದುರ್ಬಲ ವರ್ಗಗಳ ಮತ್ತು ಅಂಗವಿಕಲರ ಶಿಕ್ಷಣಕ್ಕೆ ಉತ್ತೇಜನ ನೀಡುವುದು.–** ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗದವರೂ ಸೇರಿದಂತೆ ಹಾಗೂ ವಿಶೇಷವಾಗಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಜನರ ಶಿಕ್ಷಣಕ್ಕೆ ವಿಶೇಷ ಗಮನ ನೀಡಿ ಸೂಕ್ತವೆನಿಸಬಹುದಾದ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಸಮಾಜದ ದುರ್ಬಲ ವರ್ಗಗಳ ಮತ್ತು ಅಂಗವಿಕಲರ ಶಿಕ್ಷಣಕ್ಕೆ ಉತ್ತೇಜನ ನೀಡಲು ರಾಜ್ಯ ಸರ್ಕಾರವು ಪ್ರಯತ್ನಿಸತಕ್ಕದು.

**6. ಶಿಕ್ಷಣ ಸಂಸ್ಥೆಗಳು ಈ ಅಧಿನಿಯಮಕ್ಕನುಗುಣವಾಗಿ ಇರುವುದು.–** ಯಾವುದೇ ಶಿಕ್ಷಣ ಸಂಸ್ಥೆಯನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ಬೇರೆ ರೀತಿಯಲ್ಲಿ ಸ್ಥಾಪಿಸತಕ್ಕುದಲ್ಲ ಇಲ್ಲವೇ ನಿರ್ವಹಿಸತಕ್ಕುದಲ್ಲ.

**7. ಪಾಠಕ್ರಮ, ಇತ್ಯಾದಿಗಳನ್ನು ಸರ್ಕಾರ ಗೊತ್ತುಪಡಿಸುವುದು.–** (1) ರಾಜ್ಯ ಸರ್ಕಾರವು, ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಶಿಕ್ಷಣ ಸಂಸ್ಥೆಗಳ ಸಂಬಂಧದಲ್ಲಿ ಆದೇಶದ ಮೂಲಕ ಕೆಳಕಂಡವುಗಳನ್ನು ನಿರ್ದಿಷ್ಟಪಡಿಸಬಹುದು:-

(ಎ) ಯಾವುದೇ ಬೋಧನ ಕ್ರಮಕ್ಕಾಗಿ ಪಾಠ ಕ್ರಮ, ಪಠ್ಯವಸ್ತು ಹಾಗೂ ಪಠ್ಯ ಪುಸ್ತಕಗಳು;

(ಬಿ) ಅಂಥ ಬೋಧನ ಕ್ರಮದ ಅವಧಿ;

(ಸಿ) ಶಿಕ್ಷಣ ಮಾಧ್ಯಮ;

(ಡಿ) ಪರೀಕ್ಷಾ ಹಾಗೂ ಮೌಲ್ಯ ಮಾಪನದ ಪದ್ಧತಿ;

(ಇ) ಶೈಕ್ಷಣಿಕ ವರ್ಷದಲ್ಲಿನ ಕೆಲಸದ ದಿನಗಳ ಮತ್ತು ಕೆಲಸದ ಘಂಟೆಗಳ ಸಂಖ್ಯೆ;

(ಎಫ್) ಪಾಠದ ಮತ್ತು ಇತರ ಫೀಜುಗಳು, ಕಟ್ಟಡ ನಿಧಿ ಅಥವಾ ಯಾವುದೇ ಹೆಸರಿಂದಲಾದರೂ ಕರೆಯುವ ಇತರ ಮೊಬಲಗು-ಅವನ್ನು ವಿದ್ಯಾರ್ಥಿಗಳಿಂದ ಅಥವಾ ವಿದ್ಯಾರ್ಥಿಗಳ ಪರವಾಗಿ ಯಾವ ದರಗಳಲ್ಲಿ ವಸೂಲು ಮಾಡಬಹುದು;

(ಜಿ) (ಬೋಧಕ ಮತ್ತು ಬೋಧಕೇತರ) ಸಿಬ್ಬಂದಿ ವರ್ಗದ ವ್ಯವಸ್ಥೆ ಮತ್ತು ವಿವಿಧ ಹುದ್ದೆಗಳಿಗೆ ಇರತಕ್ಕ ಶೈಕ್ಷಣಿಕ ಹಾಗೂ ಇತರ ಅರ್ಹತೆಗಳು;

(ಎಚ್) ಕಟ್ಟಡಗಳು, ನೈರ್ಮಲ್ಯ ವ್ಯವಸ್ಥೆಗಳು, ಆಟದ ಮೈದಾನ, ಪೀಠೋಪಕರಣ, ಸಾಧನ ಸಾಮಗ್ರಿ, ಗ್ರಂಥಾಲಯ, ಬೋಧನಾ ಸಹಾಯಕ ಸಾಮಗ್ರಿ, ಪ್ರಯೋಗ ಶಾಲೆ ಹಾಗೂ ಕಾರ್ಯಾಗಾರ ಮುಂತಾಗಿ ಒದಗಿಸಬೇಕಾದ ಸೌಕರ್ಯಗಳು;

(ಐ) ಅವಶ್ಯವೆಂದು ಪರಿಗಣಿಸುವಂಥ ಇತರ ವಿಷಯಗಳು;

(2) (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ಪಾಠಕ್ರಮಗಳಲ್ಲಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟ ಯೋಜನೆಗಳೂ ಸಹ ಒಳಗೊಳ್ಳಬಹುದು;

(ಎ) ನೀತಿ ಪಾಠ ಹಾಗೂ ಸದಾಚಾರ ಶಿಕ್ಷಣ;

(ಬಿ) ಜನಸಂಖ್ಯಾ ಶಿಕ್ಷಣ, ದೈಹಿಕ ಶಿಕ್ಷಣ, ಆರೋಗ್ಯ ಶಿಕ್ಷಣ ಹಾಗೂ ಕ್ರೀಡೆಗಳು;

(ಸಿ) ಸಾಮಾಜಿಕವಾಗಿ ಉಪಯುಕ್ತವಾದ ಲಾಭದಾಯಕ ಕೆಲಸ, ಪ್ರತ್ಯಕ್ಷ ಅನುಭವ ಹಾಗೂ ಸಮಾಜ ಸೇವೆ;

(ಡಿ) ನವೀನಾತ್ಮಕ, ರಚನಾತ್ಮಕ ಹಾಗೂ ಸಂಶೋಧನಾ ಚಟುವಟಿಕೆಗಳು;

(ಇ) ರಾಷ್ಟ್ರೀಯ ಐಕ್ಯತೆಯ ಸಂವರ್ಧನೆ;

(ಎಫ್) ನಾಗರೀಕ ಪ್ರಜ್ಞೆಯನ್ನು ಹೆಚ್ಚಿಸುವುದು; ಮತ್ತು

(ಜಿ) ಸಂವಿಧಾನದಲ್ಲಿ ಹೇಳಲಾಗಿರುವ ಈ ಮುಂದಿನ ನಾಗರೀಕ ಕರ್ತವ್ಯ ಪ್ರಜ್ಞೆಯನ್ನು ಬೋಧಿಸುವುದು, ಎಂದರೆ:-

(i) ಸಂವಿಧಾನವನ್ನು ಅನುಸರಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಹಾಗೂ ರಾಷ್ಟ್ರ ಗೀತೆಯನ್ನು ಗೌರವಿಸುವುದು;

(ii) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಗೌರವಿಸುವುದು ಮತ್ತು ಅನುಸರಿಸುವುದು;

(iii) ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು;

(iv) ದೇಶವನ್ನು ರಕ್ಷಿಸುವುದು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಹಾಗೆ ಮಾಡುವುದು;

(v) ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾಜ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು ಮತ್ತು ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟುಬಿಡುವುದು;

(vi) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(vii) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳೂ ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು ಮತ್ತು ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(viii) ವೈಜ್ಞಾನಿಕ ಮನೋಭಾವನೆ, ಮಾವವೀಯತೆ, ಜೆಜ್ಞಾಸೆಯ ಮತ್ತು ಸುಧಾರಣೆಯ ಪ್ರವೃತ್ತಿ – ಇವುಗಳನ್ನು ಅಭಿವೃದ್ಧಿಗೊಳಿಸುವುದು;

(ix) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(x) ರಾಷ್ಟ್ರವು ನಿರಂತರವಾಗಿ ಸಾಧನೆಯ ಮತ್ತು ಸಿದ್ಧಿಯ ಉನ್ನತ ಮಟ್ಟಗಳನ್ನು ತಲುಪಲು ವೈಯುಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಯ ಎಲ್ಲ ಕಾರ್ಯ ಕ್ಷೇತ್ರಗಳಲ್ಲಿ ಉನ್ನತಿಗಾಗಿ ಶ್ರಮಿಸುವುದು.

(3) (1)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ನಿಯಮಗಳು ಶಿಕ್ಷಣ ಸಂಸ್ಥೆಗಳ ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆಯಾಗಿರಬಹುದು.

(4) (ಎ) ಕೆಳಕಂಡ ಮೂಲಭೂತ ಉದ್ದೇಶಗಳ ಸಂಬಂಧದಲ್ಲಿ ಅಗತ್ಯ ಮಟ್ಟವನ್ನು ಸಾಧಿಸುವಲ್ಲಿ ಮಕ್ಕಳಿಗೆ ನೆರವು ನೀಡಲು ಔಪಚಾರಿಕ ಶಿಕ್ಷಣ ಹಾಗೂ ಅನೌಪಚಾರಿಕ ಶಿಕ್ಷಣ ಈ ಎರಡೂ ವಿಧಾನಗಳಿಗೆ ಸಮಗ್ರ ಅವಕಾಶವನ್ನು ಒದಗಿಸಿ ಆ ಮೂಲಕ ವ್ಯಾಸಂಗ ಕ್ರಮ ಅಭಿವೃದ್ಧಿಪಡಿಸುವ ಮತ್ತು ಶಿಕ್ಷಕರ ಶಿಕ್ಷಣದ ಮೂಲಕ ಉಳಿಸುವ ಮತ್ತು ಪೂರ್ತಿಗೊಳಿಸುವ ಪ್ರಮಾಣಗಳನ್ನು ಸುಧಾರಿಸಿ ಪ್ರಾಥಮಿಕ ಹಂತದ ಶಿಕ್ಷಣವನ್ನು ಸರ್ವ ವ್ಯಾಪಿಯಾಗಿ ಮಾಡುವುದು ಪ್ರಾಥಮಿಕ ಮಟ್ಟದ ಶಿಕ್ಷಣದ ಉದ್ದೇಶವಾಗಿರತಕ್ಕುದು:

(i) ಕನ್ನಡದಲ್ಲಿ ಮತ್ತು ಮಾತೃಭಾಷೆಯಲ್ಲಿ (ಕನ್ನಡ ಮಾತೃಭಾಷೆಯಾಗಿರದ ಸಂದರ್ಭದಲ್ಲಿ) ಅಕ್ಷರ ಜ್ಞಾನ, ಅಂಕಿ ಜ್ಞಾನ ಮತ್ತು ಸಂವಾದ ಇಂಥ ಮೂಲ ನೈಪುಣ್ಯತೆಗಳನ್ನು ಬೆಳೆಸುವುದು;

(ii) ಭಾರತೀಯ ಸಂಸ್ಕೃತಿ ಮತ್ತು ಇತಿಹಾಸ, ವಿಜ್ಞಾನ, ಆರೋಗ್ಯ ಮತ್ತು ಪೌಷ್ಠಿಕ ಆಹಾರದ ಅಧ್ಯಯನವೂ ಸೇರಿದಂತೆ, ಪ್ರಾಕೃತಿಕ ಹಾಗೂ ಸಾಮಾಜಿಕ ಪರಿಸರದ ಬಗ್ಗೆ ತಿಳಿವಳಿಕೆ ನೀಡುವುದಕ್ಕಾಗಿ ಮತ್ತು ಅವುಗಳೊಂದಿಗೆ ಅರ್ಥ ಪೂರ್ಣವಾಗಿ ಸ್ಪಂದಿಸುವ ಸಲುವಾಗಿ ಜೀವನ ನೈಪುಣ್ಯತೆಗಳನ್ನು ಬೆಳೆಸುವುದು;

(iii) ಮಕ್ಕಳಿಗೆ ಸ್ವಯಂ ಸಹಾಯ ಮಾಡಿಕೊಳ್ಳುವ ಶಕ್ತಿ ಒದಗಿಸಲು, ಕಾರ್ಯ ಚಟುವಟಿಕೆಗೆ ತಮ್ಮನ್ನು ಹೊಂದಿಸಿಕೊಳ್ಳಲು ಮತ್ತು ಶಕ್ತಿ ನೀಡಲು ಹಾಗೂ ಕೆಲಸ ಮಾಡುವ ಬಗ್ಗೆ ಸರಿಯಾದ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳಲು "ಕಾರ್ಯಾನುಭವ" ಅಥವಾ "ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದಕ ಕಾರ್ಯ" ಇವುಗಳ ಕಲಿಕೆಯನ್ನು ಪ್ರಾರಂಭಿಸುವುದು;

(iv) ನೈತಿಕ ಮೌಲ್ಯಗಳೂ ಸೇರಿದಂತೆ ಮೌಲ್ಯಗಳ ಸಂವರ್ಧನೆಗೊಳಿಸುವುದು;

(v) ಹೆಚ್ಚಿನ ಕಲಿಕೆ ಸಂಬಂಧದಲ್ಲಿ ಉತ್ತಮ ಪ್ರವೃತ್ತಿಗಳನ್ನು ಬೆಳೆಸುವುದು;

(ಬಿ) ವಿದ್ಯಾರ್ಥಿಯನ್ನು ಉನ್ನತ ಶಿಕ್ಷಣದ ಅಧ್ಯಯನಕ್ಕೆ ಅಥವಾ ಉದ್ಯೋಗಾಧಾರಿತ ವೃತ್ತಿ ವ್ಯಾಸಂಗ ಕ್ರಮಗಳಿಗೆ ಯೋಗ್ಯರನ್ನಾಗಿ ಮಾಡಲು ನಿಯಮಿಸಬಹುದಾದಂಥ ಸಾಮಾನ್ಯ ಶಿಕ್ಷಣ ನೀಡುವುದು ಪ್ರೌಢ ಶಿಕ್ಷಣದ ಮಟ್ಟದಲ್ಲಿ ಶಿಕ್ಷಣದ ಮುಖ್ಯ ಉದ್ದೇಶವಾಗಿರತಕ್ಕುದು ; ಹಾಗೆ ನೀಡಲಾಗುವ ಸಾಮಾನ್ಯ ಶಿಕ್ಷಣವು ಇತರ ವಿಷಯಗಳೊಂದಿಗೆ ಕೆಳಕಂಡವುಗಳನ್ನು ಒಳಗೊಂಡಿರತಕ್ಕುದು:

(i) ಪ್ರಾದೇಶಿಕ ಭಾಷೆಯಲ್ಲಿ ಭಾಷಾ ನಿಪುಣತೆ ಮತ್ತು ಸಾಹಿತ್ಯದ ಅಭಿರುಚಿಯನ್ನು ಬೆಳೆಸುವುದು;

(ii) ಪ್ರಾಚೀನ ಭಾಷೆಗಳಲ್ಲಿ ಅಥವಾ ಹಿಂದಿ ಮತ್ತು ಇಂಗ್ಲೀಷ್ ಸೇರಿದಂತೆ ಭಾರತದ ಆಧುನಿಕ ಭಾಷೆಗಳಲ್ಲಿ ಆಯ್ಕೆ ಮಾಡಿದ ಯಾವುದೇ ಎರಡು ಭಾಷೆಗಳಲ್ಲಿ ನಿಯಮಿಸಿದ ಪ್ರವೀಣತೆಯ ಮಟ್ಟವನ್ನು ಪಡೆದುಕೊಳ್ಳುವುದು;

(iii) ಗಣಿತದಲ್ಲಿ ಮತ್ತು ವಿದ್ಯಾರ್ಥಿಯ ಸುತ್ತಲಿನ ಪ್ರಾಕೃತಿಕ ಪರಿಸರವನ್ನು ವಿಶೇಷವಾಗಿ ಗಮನದಲ್ಲಿರಿಸಿ ಪ್ರಾಕೃತಿಕ ಹಾಗೂ ಜೀವ ವಿಜ್ಞಾನಗಳಲ್ಲಿ ಅಗತ್ಯ ಜ್ಞಾನವನ್ನು ಪಡೆದುಕೊಳ್ಳುವುದು;

(iv) ರಾಜ್ಯ, ದೇಶ ಮತ್ತು ವಿಶ್ವಕ್ಕೆ ಸಂಬಂಧಪಟ್ಟಂತೆ ಅಗತ್ಯವಾದ ಕನಿಷ್ಠ ಜ್ಞಾನವನ್ನು ಪಡೆದುಕೊಳ್ಳುವುದಕ್ಕಾಗಿ, ಇತಿಹಾಸ, ಭೂಗೋಳ ಹಾಗೂ ಪೌರ ನೀತಿಗೆ ವಿಶೇಷ ಗಮನ ನೀಡಿ ಸಮಾಜ ವಿಜ್ಞಾನ ಅಧ್ಯಯನ ಮಾಡುವುದು;

(v) ಪಠ್ಯ ವಿಷಯದ ಅವಿಭಾಜ್ಯ ಅಂಗವಾಗಿ "ಕಾರ್ಯಾನುಭವ" ಅಥವಾ "ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದಕ ಕಾರ್ಯ" ಇವುಗಳ ಕಲಿಕೆಯನ್ನು ಪ್ರಾರಂಭಿಸುವುದು;

(vi) ಕ್ರೀಡೆಗಳು, ಆಟಗಳು, ವ್ಯಾಯಾಮ ಮತ್ತು ಇತರ ಕಲೆಗಳಲ್ಲಿ ತರಬೇತಿ.

(5) ಮಾನ್ಯತೆ ಪಡೆದಿರುವ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ,-

(ಎ) ಬೋಧನೆಯ ಪಠ್ಯ ಕ್ರಮವು ಪಠ್ಯ ವಿಷಯಕ್ಕೆ ಮತ್ತು (i) ನೇ ಉಪಪ್ರಕರಣದ ಮೇರೆಗಿನ ಇತರ ಷರತ್ತುಗಳಿಗೆ ಅನುಸಾರವಾಗಿರತಕ್ಕುದು; ಮತ್ತು

(ಬಿ) ನಿಯಮಿಸಲಾದ ಕೆಲಸದ ಸಮಯದ ಯಾವುದೇ ಭಾಗವನ್ನು ಪಠ್ಯ ವಿಷಯಕ್ಕನುಸಾರವಾದ ಬೋಧನೆಯ ಹೊರತಾಗಿ ಇತರ ಯಾವುದೇ ಉದ್ದೇಶಕ್ಕೆ ಉಪಯೋಗಿಸತಕ್ಕುದಲ್ಲ.

## ಅಧ್ಯಾಯ-II
## ಶಿಕ್ಷಣ ಪ್ರಾಧಿಕಾರಗಳು

**8. ಅಧಿಕಾರಿಗಳ ನೇಮಕಾತಿ.-** (1) ರಾಜ್ಯ ಸರ್ಕಾರವು, ಶಿಕ್ಷಣದ ವಿವಿಧ ಅಂಶಗಳ ಬಗ್ಗೆ ವ್ಯವಹರಿಸಲು ಅವಶ್ಯವೆಂದು ತಾನು ಭಾವಿಸುವಷ್ಟು ಇಲಾಖೆಗಳನ್ನು ರಚಿಸತಕ್ಕುದು ಮತ್ತು ಪ್ರತಿ ಇಲಾಖೆಗೆ ಅಥವಾ ಇಲಾಖೆಗಳ ಗುಂಪಿಗೆ ನಿರ್ದೇಶಕನನ್ನು ಅಥವಾ ಕಮೀಷನರನನ್ನು ನೇಮಕ ಮಾಡತಕ್ಕುದು.

(2) ರಾಜ್ಯ ಸರ್ಕಾರವು, ಅಂಥ ಪ್ರತಿಯೊಬ್ಬ ನಿರ್ದೇಶಕನಿಗೆ ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ವಹಿಸಿಕೊಡಲಾದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡಲು ಪ್ರತಿ ಇಲಾಖೆಗೆ ಅಥವಾ ಇಲಾಖೆಗಳ ಒಂದು ಗುಂಪಿಗೆ ಹೆಚ್ಚುವರಿ ನಿರ್ದೇಶಕ, ಜಂಟಿ ನಿರ್ದೇಶಕ ಹಾಗೂ ಉಪನಿರ್ದೇಶಕ ಎಂಬ ಪದನಾಮದ ಅಥವಾ ಅನ್ಯಥಾ ಪದನಾಮವುಳ್ಳ ಅವಶ್ಯವಿರಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ನೇಮಕ ಮಾಡಬಹುದು.

(3) ಈ ಅಧಿನಿಯಮದ ಮತ್ತು ಈ ಸಂಬಂಧದಲ್ಲಿ ಮಾಡಲಾದ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಉಪಬಂಧಗಳಿಗೆ ಒಳಪಟ್ಟು, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕನು ಅಥವಾ ಕಮೀಷನರನು, ಅವರು ನಿರ್ದೇಶಕ ಅಥವಾ ಕಮೀಷನರನಾಗಿರುವ ಇಲಾಖೆ ಅಥವಾ ಇಲಾಖೆಗಳ ಗುಂಪಿಗೆ, ರಾಜ್ಯ ಸರ್ಕಾರವು ಇದಕ್ಕೆ

ಸಂಬಂಧಪಟ್ಟ ಆದೇಶದ ಮೂಲಕ ರಾಜ್ಯದಲ್ಲಿನ ಶಿಕ್ಷಣದ ಅಂಥ ಭಾಗದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ ಮುಖ್ಯ ನಿಯಂತ್ರಣಾಧಿಕಾರಿಯಾಗಿರತಕ್ಕುದು.

(4) ಈ ಅಧಿನಿಯಮದ ಹಾಗೂ ಅದರ ಮೇರೆಗಿನ ನಿಯಮಗಳ ಉಪಬಂಧಗಳ ಸರಿಯಾದ ಅನುಷ್ಠಾನಕ್ಕಾಗಿ ನಿಯಮಿಸಲಾದಂಥ ಕರ್ತವ್ಯಗಳನ್ನು ಹಾಗೂ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ರಾಜ್ಯ ಸರ್ಕಾರವು, ರಾಜ್ಯ, ವಿಭಾಗ ಹಾಗೂ ಜಿಲ್ಲಾ ಮಟ್ಟಗಳಲ್ಲಿ ತಾನು ಉಚಿತವೆಂದು ಯೋಚಿಸಬಹುದಾದಷ್ಟು ಸಂಖ್ಯೆಯ ಜಾಗೃತ ಘಟಕಗಳನ್ನು ರಚಿಸಬಹುದು ಹಾಗೂ ಪ್ರತಿ ಇಲಾಖೆಯಲ್ಲಿ ಪ್ರತಿ ಘಟಕದಲ್ಲಿ ತಾನು ಸೂಕ್ತವೆಂದು ಯೋಚಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ನೇಮಕ ಮಾಡಬಹುದು.

(5) ಈ ಅಧಿನಿಯಮವನ್ನು ಜಾರಿಗೆ ತರುವ ಸಲುವಾಗಿ ನಿಯೋಜಿತರಾದ ಎಲ್ಲ ವ್ಯಕ್ತಿಗಳೂ ರಾಜ್ಯ ಸರ್ಕಾರದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು ಮತ್ತು ಪ್ರತಿಯೊಬ್ಬ ಅಧಿಕಾರಿಯೂ ಯಾವ ಅಧಿಕಾರಿ ಅಥವಾ ಅಧಿಕಾರಿಗಳಿಗೆ ಅಧೀನನಾಗಿರತಕ್ಕುದು ಎಂಬುದನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕುದು.

**9. ಜಿಲ್ಲಾ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ.–** (1) ರಾಜ್ಯ ಸರ್ಕಾರವು, ಪ್ರತಿ ಜಿಲ್ಲೆಗೆ ಒಬ್ಬ ಅಥವಾ ಹೆಚ್ಚು ಜಿಲ್ಲಾ ಶಿಕ್ಷಣಾಧಿಕಾರಿಗಳನ್ನು ನೇಮಕ ಮಾಡಬಹುದು ಮತ್ತು ಅಂಥ ಪ್ರತಿಯೊಬ್ಬ ಜಿಲ್ಲಾ ಶಿಕ್ಷಣಾಧಿಕಾರಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಆತನಿಗೆ ವಹಿಸಲಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕುದು.

(2) ಜಿಲ್ಲಾ ಶಿಕ್ಷಣಾಧಿಕಾರಿಗೆ ಸಹಾಯ ನೀಡಲು ಅವಶ್ಯವಾದಷ್ಟು ಸಂಖ್ಯೆಯಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದ ನೇಮಕಾತಿಗೆ ರಾಜ್ಯ ಸರ್ಕಾರವು ಮಂಜೂರಾತಿ ನೀಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಮಂಜೂರಾದ ಹುದ್ದೆಗಳಿಗೆ ನೇಮಕಾತಿಯನ್ನು, ನಿಯಮಿಸಬಹುದಾದಂಥ ಪ್ರಾಧಿಕಾರವು ಅಂಥ ರೀತಿಯಲ್ಲಿ ಮಾಡತಕ್ಕುದು.

(4) ಈ ಪ್ರಕರಣದ ಮೇರೆಗೆ ನೇಮಕ ಮಾಡಿಕೊಳ್ಳಲಾದ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದವರ ಅಧಿಕಾರಗಳು ಮತ್ತು ಕರ್ತವ್ಯಗಳು ನಿಯಮಿಸಬಹುದಾದಂತೆ ಇರತಕ್ಕುದು.

**10. ಮಂಡಲಿಗಳ ರಚನೆ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ "ಕರ್ನಾಟಕ ಪ್ರೌಢ ಶಿಕ್ಷಣ ಮಂಡಲಿ," ಎಂದು ಕರೆಯಲಾಗುವ ಒಂದು ಪ್ರೌಢ ಶಿಕ್ಷಣ ಮಂಡಲಿಯನ್ನು ಸ್ಥಾಪಿಸತಕ್ಕುದು, ಮತ್ತು ಅದರ ರಚನೆ ಹಾಗೂ ಅಧಿಕಾರಗಳು ಮತ್ತು ಪ್ರಕಾರ್ಯಗಳು ನಿಯಮಿಸಬಹುದಾದಂತೆ ಇರತಕ್ಕುದು, ಮಂಡಳಿಯ ಪ್ರಕಾರ್ಯಗಳು ಕೆಳಕಂಡವುಗಳನ್ನು ಒಳಗೊಳ್ಳತಕ್ಕುದು:–

(ಎ) ರಾಜ್ಯದಲ್ಲಿ ಪ್ರೌಢ ಶಿಕ್ಷಣದ ಸಮನ್ವಯಿತ ಅಭಿವೃದ್ಧಿಯನ್ನು ಕುರಿತು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡುವುದು ; ಮತ್ತು

(ಬಿ) ನಿಯಮಿಸಬಹುದಾದಂಥ ಕನಿಷ್ಠ ಗುಣಮಟ್ಟಕ್ಕೆ ಅನುಸಾರವಾಗಿ ಪರೀಕ್ಷೆಗಳನ್ನು ನಡೆಸುವುದು ಮತ್ತು ಪ್ರಮಾಣ ಪತ್ರಗಳನ್ನು ನೀಡುವುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, 'ಉಪಾಧ್ಯಾಯರ ಶಿಕ್ಷಣ ಮಂಡಲಿ, ಕರ್ನಾಟಕ' ಎಂದು ಕರೆಯಲಾಗುವ ಒಂದು ಉಪಾಧ್ಯಾಯರ ಶಿಕ್ಷಣ ಮಂಡಲಿಯನ್ನು ಸ್ಥಾಪಿಸತಕ್ಕುದು ಮತ್ತು ಅದರ ರಚನೆ ಮತ್ತು ಅಧಿಕಾರಗಳು ನಿಯಮಿಸಬಹುದಾದಂತೆ ಇರತಕ್ಕುದು. ವ್ಯಾಸಂಗ ಕ್ರಮ, ಉಪಾಧ್ಯಾಯರ ಸೇವಾ ಪೂರ್ವ ಹಾಗೂ ಸೇವಾವಧಿಯಲ್ಲಿನ ತರಬೇತಿ ಹಾಗೂ ಉಪಾಧ್ಯಾಯರ

ಶಿಕ್ಷಣಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ಮಂಡಲಿಯ ಪ್ರಕಾರ್ಯವಾಗಿರತಕ್ಕುದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, "ತಾಂತ್ರಿಕ ಶಿಕ್ಷಣ ಮಂಡಲಿ, ಕರ್ನಾಟಕ" ಎಂದು ಕರೆಯಲಾಗುವ ಒಂದು ತಾಂತ್ರಿಕ ಶಿಕ್ಷಣ ಮಂಡಲಿಯನ್ನು ಸ್ಥಾಪಿಸತಕ್ಕುದು ಮತ್ತು ಅದರ ರಚನೆ ಮತ್ತು ಅಧಿಕಾರಗಳು ನಿಯಮಿಸಬಹುದಾದಂತೆ ಇರತಕ್ಕುದು.

(2) ಮಂಡಲಿಯ ಪ್ರಕಾರ್ಯಗಳು ಕೆಳಕಂಡಂತಿರತಕ್ಕುದು:-

(ಎ) ರಾಜ್ಯದಲ್ಲಿ ಎಲ್ಲ ಹಂತಗಳಲ್ಲಿ ತಾಂತ್ರಿಕ ಶಿಕ್ಷಣದ ಸಮನ್ವಯಿತ ಅಭಿವೃದ್ಧಿಯ ಯೋಜನೆಗಳ ಸಂಬಂಧದಲ್ಲಿ, ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ಅಥವಾ ಅಂಥ ಯೋಜನೆಗಳನ್ನು ಪ್ರಸ್ತಾವಿಸುವುದು;

(ಬಿ) ನಿಯತಕಾಲಿಕವಾಗಿ ಸಂಸ್ಥೆಗಳ ತಪಾಸಣೆ ಮಾಡುವುದು ಮತ್ತು ಪಠ್ಯಕ್ರಮಗಳ ಗುಣಮಟ್ಟ ಹಾಗೂ ಒದಗಿಸಲಾದ ಸಾಂಸ್ಥಿಕ ಸೌಲಭ್ಯಗಳು ತೃಪ್ತಿಕರವಾಗಿವೆಯೇ ಹೇಗೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ಸಿ) ಪರೀಕ್ಷೆಗಳನ್ನು ನಡೆಸುವುದು ಮತ್ತು ಡಿಪ್ಲೊಮಾಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ನೀಡುವುದು;

(ಡಿ) ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳೊಂದಿಗೆ ಸಹಕಾರ ಸಂಬಂಧವನ್ನು ನೆಲೆಗೊಳಿಸುವುದು ಹಾಗೂ ಅಭಿವೃದ್ಧಿಪಡಿಸುವುದು;

(ಇ) ನಿಯಮಿಸಬಹುದಾದ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ (1) ರಿಂದ (3)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದಂಥ ಮಂಡಲಿಗಳಲ್ಲದೆ, ನಿಯಮಿಸಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸಲು ಹಾಗೂ ಅಧಿಕಾರಗಳನ್ನು ಚಲಾಯಿಸಲು ಇತರ ಮಂಡಲಿಗಳನ್ನೂ ಸ್ಥಾಪಿಸಬಹುದು.

## ಅಧ್ಯಾಯ-III
## ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜಾರಿ

**11. ನಿರ್ದಿಷ್ಟ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕೆಂದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸುವುದು.-** (1) ರಾಜ್ಯ ಸರ್ಕಾರವು, ಆದೇಶವನ್ನು ಹೊರಡಿಸಿ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಲಾದಂಥ ಶೈಕ್ಷಣಿಕ ವರ್ಷದ ಪ್ರಾರಂಭದಿಂದ ಜಾರಿಗೆ ಬರುವಂತೆ ಹಾಗೂ ಅದರಲ್ಲಿ ನಿರ್ದಿಷ್ಟಪಡಿಸಲಾದ ವಯೋವರ್ಗದ ಮಕ್ಕಳಿಗೆ, ನಿರ್ದಿಷ್ಟಪಡಿಸಬಹುದಾದ ಯಾವುದೇ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗತಕ್ಕುದೆಂದು ನಿರ್ದೇಶಿಸಬಹುದು:

ಪರಂತು, ಐದು ವರ್ಷ ತುಂಬಿದ ಮಗುವಿಗೆ ಶಾಲೆಯಲ್ಲಿ ಪ್ರವೇಶವನ್ನು ನಿರಾಕರಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಆದೇಶವನ್ನು,-

(ಎ) ಸರ್ಕಾರಿ ಗೆಜೆಟ್ಟಿನಲ್ಲಿ ಹಾಗೂ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸತಕ್ಕುದು;

(ಬಿ) ಆದೇಶದ ಪ್ರಕಟಣೆಯ ದಿನಾಂಕ ಹಾಗೂ ನಿರ್ದಿಷ್ಟಪಡಿಸಲಾದ ಶೈಕ್ಷಣಿಕ ವರ್ಷದ ಮೊದಲ ದಿನದ ನಡುವೆ ಮೂವತ್ತು ದಿನಗಳಿಗೆ ಕಡಿಮೆಯಿಲ್ಲದ ಅಂತರವಿರುವ ಹಾಗೆ ಆ ಆದೇಶವನ್ನು ಮಾಡತಕ್ಕುದು.

(3) ಯಾವ ಪ್ರದೇಶದ ಮಕ್ಕಳಿಗೆ (1)ನೇ ಉಪಪ್ರಕರಣದ ಮೇರೆಗಿನ ಆದೇಶವು ಅನ್ವಯವಾಗಬೇಕೆಂದು ಉದ್ದೇಶಿಸಲಾಗಿದೆಯೋ ಆ ಪ್ರದೇಶದ ಎಲ್ಲ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡಲು ಅವಶ್ಯವಾದ ಸೌಲಭ್ಯಗಳನ್ನು ಒದಗಿಸಲಾಗಿದೆಯೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದ ಹೊರತು ಆ ಪ್ರದೇಶದ ಸಂಬಂಧದಲ್ಲಿ ಅಂಥ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

**12. ಪ್ರಾಥಮಿಕ ಶಿಕ್ಷಣಕ್ಕಾಗಿ ಯೋಜನೆಗಳು.–** (1) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಗೊಳಪಡುವಂಥ ಪ್ರದೇಶದ ಪೈಕಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸುವ ಅದು ನಿರ್ಧಿಷ್ಟಪಡಿಸಬಹುದಾದಂಥ ವಯೋ ವರ್ಗದ ಮಕ್ಕಳಿಗಾಗಿ ಅಂಥ ತರಗತಿಯವರೆಗಿನ ಕಡ್ಡಾಯ ಶಿಕ್ಷಣಕ್ಕಾಗಿ ಒಂದು ಯೋಜನೆಯನ್ನು, ಸರ್ಕಾರವು ನಿರ್ದಿಷ್ಟಗೊಳಿಸಬಹುದಾದ ಅವಧಿಯೊಳಗೆ ಸಲ್ಲಿಸತಕ್ಕುದೆಂದು ಆ ಸ್ಥಳೀಯ ಪ್ರಾಧಿಕಾರವನ್ನು ರಾಜ್ಯ ಸರ್ಕಾರವು ಕೇಳಿಕೊಂಡಾಗ ಪ್ರಾಧಿಕಾರವು ಹಾಗೆ ಯೋಜನೆಯನ್ನು ಒಪ್ಪಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಯೋಜನೆಯು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿರತಕ್ಕುದು ಮತ್ತು ಅದು ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕುದು, ಎಂದರೆ:–

(ಎ) ಯಾವ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗತಕ್ಕುದೋ ಆ ಪ್ರದೇಶ;

(ಬಿ) ವಯಸ್ಸು ಮತ್ತು ಮಾತೃಭಾಷೆಗನುಗುಣವಾಗಿ ವರ್ಗೀಕರಿಸಲಾದ ಎಷ್ಟು ಜನ ಮಕ್ಕಳಿಗೆ ಯೋಜನೆಯು ಅನ್ವಯವಾಗುವುದೋ ಅವರ ಸರಿ ಸುಮಾರು ಸಂಖ್ಯೆ;

(ಸಿ) ಯಾವ ಭಾಷೆಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೋ ಅಥವಾ ನೀಡಬೇಕೆಂದು ಉದ್ದೇಶಿಸಲಾಗಿದೆಯೋ ಅವುಗಳಿಗನುಸಾರ ವರ್ಗೀಕರಿಸಲಾದ ಅಸ್ತಿತ್ವದಲ್ಲಿರುವ ಮನ್ನಣೆ ಪಡೆದ ಶಾಲೆಗಳ ಪಟ್ಟಿ ಮತ್ತು ಪ್ರಾರಂಭಿಸಬೇಕೆಂದು ಉದ್ದೇಶಿಸಲಾದ ಶಾಲೆಗಳೇನಾದರೂ ಇದ್ದರೆ ಅವುಗಳ ಪಟ್ಟಿ;

(ಡಿ) ಈಗಾಗಲೇ ನಿಯೋಜಿತರಾದ ಉಪಾಧ್ಯಾಯರ ಹಾಗೂ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾದ ಹೆಚ್ಚಿನ ಸಿಬ್ಬಂದಿಯ ಸಂಖ್ಯೆ;

(ಇ) ಯೋಜನೆಯ ಆವರ್ತಕ ಹಾಗೂ ಅನಾವರ್ತಕ ವೆಚ್ಚ ; ಮತ್ತು

(ಎಫ್) ನಿಯಮಿಸಬಹುದಾದಂಥ ಇತರ ಯಾವುದೇ ವಿವರಗಳು.

(3) ರಾಜ್ಯ ಸರ್ಕಾರವು, ತಾನು ಅವಶ್ಯವೆಂದು ಪರಿಗಣಿಸಬಹುದಾದ ವಿಚಾರಣೆಯ ಅನಂತರ, (1)ನೇ ಉಪಪ್ರಕರಣದ ಮೇರೆಗೆ ಸ್ಥಳೀಯ ಪ್ರಾಧಿಕಾರವು ಸಲ್ಲಿಸಿದ ಯೋಜನೆಗೆ ಮಾರ್ಪಾಟು ಮಾಡಿ ಇಲ್ಲವೆ ಮಾರ್ಪಾಟಿಲ್ಲದೆ ಮಂಜೂರಾತಿ ನೀಡಬಹುದು, ಹಾಗೆ ಮಂಜೂರು ಮಾಡಲಾದ ಯೋಜನೆಯ ಜಾರಿಯು ರಾಜ್ಯ ಸರ್ಕಾರದ ಸಾಮಾನ್ಯ ನಿಯಂತ್ರಣಕ್ಕೆ ಹಾಗೂ ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರತಕ್ಕುದು.

(4) ಈ ಯೋಜನೆಯು ಅನ್ವಯವಾಗುವ ಎಲ್ಲ ಮಕ್ಕಳಿಗೂ, ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವುದಕ್ಕಾಗಿ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು ನಿಯಮಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದ ಹೊರತು, ಯಾವುದೇ ಯೋಜನೆಯ ಸಂಬಂಧದಲ್ಲಿ (3)ನೇ ಉಪಪ್ರಕರಣದ ಮೇರೆಗೆ ಮಂಜೂರಾತಿಯನ್ನು ನೀಡತಕ್ಕುದಲ್ಲ.

(5) (3)ನೇ ಉಪಪ್ರಕರಣದ ಮೇರೆಗೆ ಮಂಜೂರಾತಿಯನ್ನು ಪಡೆದ ತರುವಾಯ ಸ್ಥಳೀಯ ಪ್ರಾಧಿಕಾರವು ಘೋಷಣೆ ಹೊರಡಿಸಿ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಯೋವರ್ಗದೊಳಗಿನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅಂಥ ವರ್ಗದ ಅಥವಾ ತರಗತಿಯವರೆಗಿನ ಪ್ರಾಥಮಿಕ ಶಿಕ್ಷಣವು

ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದ ದಿನಾಂಕದಿಂದ ನಿರ್ದಿಷ್ಟಪಡಿಸಬಹುದಾದ ಯಾವುದೇ ಪ್ರದೇಶದಲ್ಲಿ ಕಡ್ಡಾಯವಾಗತಕ್ಕುದೆಂದು ಆ ಮೂಲಕ ಘೋಷಿಸಿ, ಹಾಗೆ ಮಂಜೂರಾದ ಯೋಜನೆಯನ್ನು ಜಾರಿಗೊಳಿಸತಕ್ಕುದು.

(6) (5)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಘೋಷಣೆಯನ್ನು ಶೈಕ್ಷಣಿಕ ವರ್ಷದ ನಿಕಟ ಪೂರ್ವದ ಪ್ರತಿಯೊಂದು ವರ್ಷದ ಏಪ್ರಿಲ್ ಒಂದನೇ ದಿನಕ್ಕೆ ಮುಂಚೆ, ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕುದು ಮತ್ತು ಸ್ಥಳೀಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರ ಕಡ್ಡಾಯ ಪ್ರಾಥಮಿಕ ಶಿಕ್ಷಣದ ನಿರ್ದೇಶಕನು ನಿರ್ಧರಿಸಬಹುದಾದ ಇತರ ರೀತಿಯಲ್ಲಿ ಅದನ್ನು ಪ್ರಕಟಿಸತಕ್ಕುದು:

ಪರಂತು, ರಾಜ್ಯ ಸರ್ಕಾರವು, ಉಚಿತ ಮತ್ತು ಸಾಕಷ್ಟು ಕಾರಣಗಳಿದ್ದಾಗ ಯಾವುದೇ ವರ್ಷದಲ್ಲಿ ಅಂಥ ಘೋಷಣೆಯ ಪ್ರಕಟಣೆಯಲ್ಲಿ ಆದ ವಿಳಂಬವನ್ನು ಮನ್ನಾ ಮಾಡಬಹುದು.

(7) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಯೋಜನೆಯನ್ನು ಒಪ್ಪಿಸುವಂತೆ ಅಥವಾ (5)ನೇ ಉಪಪ್ರಕರಣದ ಮೇರೆಗೆ ಮಂಜೂರಾದ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ತೃಪ್ತಿಯಾಗುವ ಹಾಗೆ ಜಾರಿಗೊಳಿಸುವಂತೆ ಕೋರಿದಾಗ ಸ್ಥಳೀಯ ಪ್ರಾಧಿಕಾರವು ಹಾಗೆ ಮಾಡಲು ತಪ್ಪಿದಲ್ಲಿ ತಾನು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಯ ಅಥವಾ ಪ್ರಾಧಿಕಾರದ ಮೂಲಕ ಆ ಯೋಜನೆಯನ್ನು ಒಪ್ಪಿಸುವಂತೆ ಅಥವಾ ಸಂದರ್ಭಾನುಸಾರ ಮಂಜೂರಾದ ಯೋಜನೆಯನ್ನು ಕಾರ್ಯಗತಗೊಳಿಸುವಂತೆ ಮಾಡಬಹುದು. ರಾಜ್ಯ ಸರ್ಕಾರವು ಮಂಜೂರಾದ ಯೋಜನೆಯನ್ನು ಜಾರಿಗೊಳಿಸುವ ಕಾರ್ಯವನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಯಾವುದೇ ಕಾಲದಲ್ಲಿ ವಹಿಸಿಕೊಡಬಹುದು.

**13. ಹಾಜರಾತಿ ಪ್ರಾಧಿಕಾರಿಗಳು ಮತ್ತು ಅವರ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಸಂದರ್ಭದಲ್ಲಿ, ಸ್ಥಳೀಯ ಪ್ರಾಧಿಕಾರವು, ಮತ್ತು ಇತರ ಸಂದರ್ಭಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ನಿರ್ದೇಶಕನು, ಈ ಅಧಿನಿಯಮದ ಉದ್ದೇಶಕ್ಕಾಗಿ, ಅದು ಅಥವಾ ಅವನು ಸೂಕ್ತವೆಂದು ಯೋಚಿಸಬಹುದಾದಷ್ಟು ವ್ಯಕ್ತಿಗಳನ್ನು ಹಾಜರಾತಿ ಪ್ರಾಧಿಕಾರಿಗಳೆಂದು ನೇಮಕ ಮಾಡಬಹುದು ಮತ್ತು ಹಾಜರಾತಿ ಪ್ರಾಧಿಕಾರಿಗಳಿಗೆ ತಮ್ಮ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸಹಾಯ ಮಾಡಲು ಅವಶ್ಯವೆಂದು ಪರಿಗಣಿಸಬಹುದಾದಷ್ಟು ವ್ಯಕ್ತಿಗಳನ್ನು ಸಹ ನೇಮಕ ಮಾಡಬಹುದು.

(2) ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ, 11ನೇ ಪ್ರಕರಣದ ಮೇರೆಗಿನ ಆದೇಶದಲ್ಲಿ ಅಥವಾ 12ನೇ ಪ್ರಕರಣದ ಮೇರೆಗಿನ ಯೋಜನೆಯಲ್ಲಿ ನಿರ್ದಿಷ್ಟಪಡಿಸಲಾದ ವಯೋವರ್ಗದೊಳಗಿನ ಮಕ್ಕಳ ಪಟ್ಟಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಾಧ್ಯವಾದಷ್ಟು ಬೇಗನೆ ಸಿದ್ಧಪಡಿಸುವಂತೆ ಮಾಡುವುದು ಸ್ಥಳೀಯ ಪ್ರಾಧಿಕಾರದ ಮತ್ತು ಇತರ ಸಂದರ್ಭಗಳಲ್ಲಿ ಹಾಜರಾತಿ ಪ್ರಾಧಿಕಾರಿಗಳ ಕರ್ತವ್ಯವಾಗಿರತಕ್ಕುದು. ನಿರ್ದಿಷ್ಟಪಡಿಸಿದ ಪ್ರತಿಯೊಂದು ಪ್ರದೇಶದಲ್ಲಿ, ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ರೀತಿಯಲ್ಲಿ ಪ್ರತಿ ವರ್ಷವೂ ಕೂಡ ಅಂಥ ಪಟ್ಟಿಗಳನ್ನು ಸಿದ್ಧಪಡಿಸತಕ್ಕುದು.

(3) ಹಾಜರಾತಿ ಪ್ರಾಧಿಕಾರಿಯು ಅಥವಾ ಹಾಜರಾತಿ ಪ್ರಾಧಿಕಾರಿಗೆ ನೆರವು ನೀಡಲು ನೇಮಕಗೊಂಡ ಯಾವನೇ ವ್ಯಕ್ತಿಯು, ಮಗುವಿನ ತಂದೆ ತಾಯಿಯನ್ನು ಅವರ ಮಗುವನ್ನು ಕುರಿತಂತೆ ಅಥವಾ ಯಾವನೇ ವ್ಯಕ್ತಿಯನ್ನು ಆ ಮಗುವಿನ ಸಂಬಂಧದಲ್ಲಿ, ಅವನು ಅವಶ್ಯವೆಂದು ಭಾವಿಸುವಂಥ ಪ್ರಶ್ನೆಯನ್ನು ಕೇಳಬಹುದು ಅಥವಾ ಅವಶ್ಯವೆಂದು ಭಾವಿಸುವಂಥ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಬಹುದು, ಮತ್ತು ಅಂಥ ಪ್ರತಿಯೊಬ್ಬ ತಂದೆ ತಾಯಿಯು ತಮಗೆ ತಿಳಿದಿರುವಷ್ಟರ ಮಟ್ಟಿಗೆ ಅಥವಾ ತಾವು ನಂಬಿರುವಷ್ಟರ ಮಟ್ಟಿಗೆ ಅಂಥ ಪ್ರಶ್ನೆಗಳಿಗೆ ಉತ್ತರಿಸಲು ಅಥವಾ ಸಂದರ್ಭಾನುಸಾರ ಮಾಹಿತಿಯನ್ನು ಒದಗಿಸಲು ಬದ್ಧರಾಗಿರತಕ್ಕುದು.

(4) ಯಾವ ಮಗುವಿಗೆ 11ನೇ ಪ್ರಕರಣದ ಮೇರೆಗಿನ ಆದೇಶವು ಅನ್ವಯವಾಗುವುದೋ, ಆದರೆ, 17ನೇ ಪ್ರಕರಣದ ಮೇರೆಗೆ ಯಾರ ವಿರುದ್ಧ ಹಾಜರಾತಿ ಆದೇಶವನ್ನು ಹೊರಡಿಸಿಲ್ಲವೋ, ಆ ಪ್ರತಿಯೊಂದು ಮಗುವಿನ ತಂದೆ ತಾಯಿಗೆ, ನಿರ್ದಿಷ್ಟಪಡಿಸಿದ ಶೈಕ್ಷಣಿಕ ವರ್ಷದ ಪ್ರಾರಂಭದಿಂದ ಮಗುವನ್ನು ಅನುಮೋದಿತ ಶಾಲೆಗೆ ಹಾಜರಾಗುವಂತೆ ಮಾಡುವುದು ಅವನ ಹೊಣೆಯಾಗಿದೆ ಎಂಬುದನ್ನು ತಿಳಿಸುವುದು ಹಾಜರಾತಿ ಪ್ರಾಧಿಕಾರಿಯ ಕರ್ತವ್ಯವಾಗಿರತಕ್ಕುದು.

**14. ತನ್ನ ಮಗುವನ್ನು ಶಾಲೆಗೆ ಹಾಜರಾಗುವಂತೆ ಮಾಡುವ ಬಗ್ಗೆ ತಂದೆ/ತಾಯಿಯ ಜವಾಬ್ದಾರಿ.–** ಅನುಮೋದಿತ ಶಾಲೆಗೆ ಹಾಜರಾಗದಿರುವುದಕ್ಕೆ 15ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ, ಪ್ರತಿಯೊಂದು ಮಗುವು ಯುಕ್ತ ಕಾರಣಗಳಿದ್ದ ಹೊರತು, ಆ ಪ್ರತಿಯೊಂದು ಮಗುವನ್ನು ಶಾಲೆಗೆ ಹಾಜರಾಗುವಂತೆ ಮಾಡುವುದು ಆ ಮಗುವಿನ ತಂದೆ/ತಾಯಿಯ ಕರ್ತವ್ಯವಾಗಿರತಕ್ಕುದು.

**15. ಶಾಲೆಗೆ ಹಾಜರಾಗದಿರುವುದಕ್ಕೆ ಯುಕ್ತ ಕಾರಣ.–** ಈ ಅಧಿನಿಯಮದ ಉದ್ದೇಶಕ್ಕಾಗಿ, ಕೆಳಕಂಡ ಸಂದರ್ಭಗಳಲ್ಲಿ ಯಾವುದೇ ಸಂದರ್ಭವು, ಒಂದು ಮಗು ಅನುಮೋದಿತ ಶಾಲೆಗೆ ಹಾಜರಾಗದಿರುವುದಕ್ಕೆ ಯುಕ್ತ ಕಾರಣವೆಂಬುದಾಗಿ ಭಾವಿಸತಕ್ಕುದು, ಎಂದರೆ:–

(ಎ) ಮಗುವಿನ ನಿವಾಸ ಸ್ಥಳದಿಂದ ನಿಯಮಿಸಲಾದ ದೂರದೊಳಗೆ ಯಾವುದೇ ಅನುಮೋದಿತ ಶಾಲೆ ಇಲ್ಲದಿರುವುದು;

(ಬಿ) ಮಗುವು, ಪ್ರವೇಶ ಪಡೆಯಬಹುದಾದ ಅನುಮೋದಿತವಾದ ಒಂದೇ ಒಂದು ಶಾಲೆಯು, ಅದರ ನಿವಾಸ ಸ್ಥಳದಿಂದ ನಿಯಮಿಸಲಾದ ಅಂತರದೊಳಗೆ ಇದ್ದರೂ, ಆ ಶಾಲೆಯಲ್ಲಿ ಮಗುವಿನ ತಂದೆ/ತಾಯಿಗೆ ಸಮ್ಮತಿಯಿಲ್ಲದ ಸ್ವರೂಪದ ಧಾರ್ಮಿಕ ಬೋಧನೆ ಕಡ್ಡಾಯವಾಗಿರುವುದು;

(ಸಿ) ಮಗುವು ಇತರ ರೀತಿಯಲ್ಲಿ ಶಿಕ್ಷಣ ಪಡೆಯುತ್ತಿದ್ದು, ಅದನ್ನು ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು ತೃಪ್ತಿಕರವಾಗಿದೆ ಎಂದು ಘೋಷಿಸಿರುವುದು;

(ಡಿ) ಮಗುವು 11ನೇ ಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ತರಗತಿಯವರೆಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಈಗಾಗಲೇ ಪೂರ್ಣಗೊಳಿಸಿರುವುದು;

(ಇ) ಮಗುವು ಶಾಲೆಗೆ ಹಾಜರಾಗಲು ಸಾಧ್ಯವಾಗದಂಥ ದೈಹಿಕ ಅಥವಾ ಮಾನಸಿಕ ನ್ಯೂನತೆಯಿಂದ ಬಳಲುತ್ತಿರುವುದು;

(ಎಫ್) ನಿಯಮಿಸಲಾದ ಪ್ರಾಧಿಕಾರಿಯು, ಅಥವಾ ಈ ಸಂಬಂಧದಲ್ಲಿ ನಿಯಮಿಸಲಾದ ಪ್ರಾಧಿಕಾರಿಯು ಅಧಿಕೃತಗೊಳಿಸಿದ ಯಾವನೇ ಇತರ ವ್ಯಕ್ತಿಯು, ಮಗುವಿಗೆ ನಿಯಮಿಸಲಾದ ಅವಧಿಯನ್ನು ಮೀರದಂತೆ ತಾತ್ಕಾಲಿಕ ಗೈರು ರಜೆಯನ್ನು ಮಂಜೂರು ಮಾಡಿರುವುದು;

(ಜಿ) ಮಗುವು ಶಾಲೆಗೆ ಹಾಜರಾಗದಂತೆ ಪ್ರತಿಬಂಧಿಸುವ ಇತರ ಯಾವುದೇ ಅನಿವಾರ್ಯ ಸನ್ನಿವೇಶ ಇದ್ದು, ಅದನ್ನು ಹಾಜರಾತಿ ಪ್ರಾಧಿಕಾರಿಯು ಹಾಗೆಂದು ಪ್ರಮಾಣೀಕರಿಸಿರುವುದು; ಮತ್ತು

(ಎಚ್) ನಿಯಮಿಸಬಹುದಾದಂಥ ಇತರ ಸಂದರ್ಭಗಳು.

**16. ದೈಹಿಕ ಅಥವಾ ಮಾನಸಿಕ ನ್ಯೂನತೆ ಇರುವ ಮಕ್ಕಳಿಗಾಗಿ ವಿಶೇಷ ಶಾಲೆಗಳು.–** ದೈಹಿಕ ಅಥವಾ ಮಾನಸಿಕ ನ್ಯೂನತೆಯಿಂದ ಬಳಲುತ್ತಿರುವ ಮಗುವಿನ ವಾಸಸ್ಥಳದಿಂದ ನಿಯಮಿಸಲಾದ ದೂರದೊಳಗೆ ವಿಶೇಷ ಶಾಲೆಯು ಇದ್ದರೆ, ಹಾಜರಾತಿ ಪ್ರಾಧಿಕಾರವು ತಾನು ತೃಪ್ತಿಕರವೆಂದು ಪರಿಗಣಿಸುವ ಇತರ ರೀತಿಯಲ್ಲಿ ಯಾವುದೇ ಶಿಕ್ಷಣವನ್ನು ಆ ಮಗುವು ಪಡೆಯುತ್ತಿಲ್ಲವೆಂದು ಮನದಟ್ಟು ಮಾಡಿಕೊಂಡರೆ ಮಗುವು, ಆ ವಿಶೇಷ ಶಾಲೆಗೆ ಹಾಜರಾಗುವಂತೆ ಆದೇಶದ ಮೂಲಕ ಅಗತ್ಯಪಡಿಸಬಹುದು; ಮತ್ತು ಆ ಮಗುವು 15ನೇ ಪ್ರಕರಣದ (ಎಫ್) ಖಂಡದ ಅರ್ಥ ವ್ಯಾಪ್ತಿಯೊಳಗೆ ಶಾಲೆಗೆ ಹಾಜರಾಗದಿರುವುದಕ್ಕೆ

ಯುಕ್ತ ಕಾರಣಗಳಿದ್ದ ಹೊರತು, ಆ ವಿಶೇಷ ಶಾಲೆಗೆ ಆ ಮಗು ಹಾಜರಾಗುವಂತೆ ಮಾಡವುದು ಅಂಥ ಮಗುವಿನ ತಂದೆ/ತಾಯಿಯ ಕರ್ತವ್ಯವಾಗಿರತಕ್ಕುದು.

**17. ಹಾಜರಾತಿ ಆದೇಶಗಳು.–** (1) ಮಗುವಿನ ತಂದೆ/ತಾಯಿಯು ಮಗುವನ್ನು ಅನುಮೋದಿತ ಶಾಲೆಗೆ ಹಾಜರಾಗುವಂತೆ ಮಾಡಲು ತಪ್ಪಿದ್ದಾರೆಂದು ಹಾಜರಾತಿ ಪ್ರಾಧಿಕಾರವು ನಂಬಲು ಕಾರಣವಿದ್ದರೆ, ಮತ್ತು 15ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಮಗುವು ಶಾಲೆಗೆ ಹಾಜರಾಗದಿರುವುದಕ್ಕೆ ಯುಕ್ತ ಕಾರಣಗಳಿಲ್ಲದಿದ್ದರೆ, ನಿಯಮಿಸಲಾದ ರೀತಿಯಲ್ಲಿ ಅದು ವಿಚಾರಣೆ ನಡೆಸತಕ್ಕುದು.

(2) ಈ ಅಧಿನಿಯಮದ ಮೇರೆಗೆ ಮಗುವು ಅನುಮೋದಿತ ಶಾಲೆಗೆ ಹಾಜರಾಗಲು ಬದ್ಧವಾಗಿದೆ ಎಂದು, ಮತ್ತು 15ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ, ಆ ಮಗುವು ಶಾಲೆಗೆ ಹಾಜರಾಗದಿರಲು ಯುಕ್ತ ಕಾರಣಗಳಿಲ್ಲವೆಂದು, ಹಾಜರಾತಿ ಪ್ರಾಧಿಕಾರಕ್ಕೆ ವಿಚಾರಣೆಯ ಫಲಿತಾಂಶವಾಗಿ ಮನದಟ್ಟಾದರೆ ಅದು ನಿಯಮಿಸಲಾದ ನಮೂನೆಯಲ್ಲಿ ಹಾಜರಾತಿ ಆದೇಶವನ್ನು ಹೊರಡಿಸಿ ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಅನುಮೋದಿತ ಶಾಲೆಗೆ ಆ ಮಗು ಹಾಜರಾಗುವಂತೆ ಮಾಡತಕ್ಕುದೆಂದು ಆ ವ್ಯಕ್ತಿಗೆ ನಿರ್ದೇಶನ ನೀಡಬಹುದು.

(3) ಈ ಪ್ರಕರಣದ ಮೇರೆಗೆ, ಆ ಮಗುವಿನ ಸಂಬಂಧದಲ್ಲಿ ಅದರ ತಂದೆ/ತಾಯಿಗೆ ನೀಡಿದ ಹಾಜರಾತಿ ಆದೇಶವು (6)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮವು ಆ ಮಗುವಿಗೆ ಅನ್ವಯವಾಗುತ್ತಿರುವವರೆಗೂ ಜಾರಿಯಲ್ಲಿರತಕ್ಕುದು.

(4) ಯಾವ ತಂದೆ/ತಾಯಿಗೆ ಅವರ ಮಗುವಿನ ಸಂಬಂಧದಲ್ಲಿ (2)ನೇ ಉಪಪ್ರಕರಣದ ಮೇರೆಗೆ ಹಾಜರಾತಿಯ ಆದೇಶವನ್ನು ಹೊರಡಿಸಲಾಗಿದೆಯೋ ಆ ತಂದೆ/ತಾಯಿಯು, ಆ ಹಾಜರಾತಿ ಆದೇಶವು ಜಾರಿಯಲ್ಲಿರುವ ಅವಧಿಯಲ್ಲಿ ಆ ಮಗುವಿನ ಅಭಿರಕ್ಷೆಯನ್ನು ಯಾವನೇ ಇತರ ವ್ಯಕ್ತಿಗೆ ವರ್ಗಾಯಿಸಿದರೆ, ಅಂಥ ತಂದೆ/ತಾಯಿಯು ಅಂಥ ವರ್ಗಾವಣೆಯ ಬಗ್ಗೆ ಹಾಜರಾತಿ ಪ್ರಾಧಿಕಾರಕ್ಕೆ ಆ ಕೂಡಲೇ ಲಿಖಿತದಲ್ಲಿ ತಿಳಿಸಲು ಬದ್ಧರಾಗಿರತಕ್ಕುದು.

(5) ಈ ಪ್ರಕರಣದ ಮೇರೆಗೆ, ಯಾರೇ ತಂದೆ/ತಾಯಿಗೆ ಅವರ ಮಗುವಿನ ಸಂಬಂಧದಲ್ಲಿ ಹಾಜರಾತಿ ಆದೇಶವನ್ನು ಹೊರಡಿಸಲಾಗಿರುವಲ್ಲಿ ಅಂಥ ಆದೇಶವು, ಮೂಲತಃ ಯಾವ ವ್ಯಕ್ತಿಯ ವಿರುದ್ಧ ಅದನ್ನು ಹೊರಡಿಸಲಾಗಿತ್ತೋ ಆ ವ್ಯಕ್ತಿಯ ಸಂಬಂಧದಲ್ಲಿ ಯಾವ ಪರಿಣಾಮವನ್ನು ಹೊಂದಿತ್ತೋ ಅದೇ ರೀತಿ, ಆ ಹಾಜರಾತಿ ಆದೇಶವು ಜಾರಿಯಲ್ಲಿರುವ ಅವಧಿಯಲ್ಲಿ, ಆ ಮಗುವಿನ ಅಭಿರಕ್ಷೆಯನ್ನು ಯಾವ ಇತರ ವ್ಯಕ್ತಿಗೆ ವರ್ಗಾಯಿಸಲಾಗಿದೆಯೋ ಆ ಯಾವನೇ ಇತರ ವ್ಯಕ್ತಿಯ ಸಂಬಂಧದಲ್ಲಿ ಪರಿಣಾಮ ಹೊಂದಿರತಕ್ಕುದು.

(6) ಯಾರೇ ತಂದೆ/ತಾಯಿಯು,–

(ಎ) ತಾನು ಆ ಮಗುವಿನ ಪಾಲಕನಾಗಿ ಅಥವಾ ಅದರ ವಾಸ್ತವಿಕ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಯಾಗಿ ಉಳಿದಿಲ್ಲವೆಂಬ ಕಾರಣದ ಮೇಲೆ; ಅಥವಾ

(ಬಿ) ಹಾಜರಾಗದಿರುವುದಕ್ಕೆ ಯುಕ್ತ ಕಾರಣವಿರುವ ಪರಿಸ್ಥಿತಿ ಉಂಟಾಗಿದೆ ಎಂಬ ಕಾರಣದ ಮೇಲೆ

–ಹಾಜರಾತಿ ಆದೇಶವನ್ನು ರದ್ದುಗೊಳಿಸುವಂತೆ ಕೋರಿ, ಹಾಜರಾತಿ ಪ್ರಾಧಿಕಾರಕ್ಕೆ ಯಾವುದೇ ಸಮಯದಲ್ಲಿ ಅರ್ಜಿ ಸಲ್ಲಿಸಬಹುದು.

–ಮತ್ತು ಆ ತರುವಾಯ ಹಾಜರಾತಿ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ ವಿಚಾರಣೆ ನಡೆಸಿದ ತರುವಾಯ ಆ ಹಾಜರಾತಿ ಆದೇಶವನ್ನು ರದ್ದುಪಡಿಸಬಹುದು ಅಥವಾ ಮಾರ್ಪಡಿಸಬಹುದು.

**18. ಮಕ್ಕಳು ಶಾಲೆಗೆ ಹಾಜರಾಗುವುದಕ್ಕೆ ಅಡ್ಡಿಯಾಗುವ ಹಾಗೆ ಅವರನ್ನು ಕೆಲಸಕ್ಕೆ ತೊಡಗಿಸದಿರುವುದು.–** ಯಾವನೇ ವ್ಯಕ್ತಿಯು, ಅನುಮೋದಿತ ಶಾಲೆಗೆ ಮಗುವು ಹಾಜರಾಗುವುದನ್ನು ಅಡ್ಡಿಪಡಿಸುವ ರೀತಿಯಲ್ಲಿ ಅದನ್ನು ಕೆಲಸಕ್ಕೆ ತೊಡಗಿಸತಕ್ಕುದಲ್ಲ.

**19. ಪ್ರಾಥಮಿಕ ಶಿಕ್ಷಣವು ಉಚಿತವಾಗಿರತಕ್ಕುದು.–** (1) ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರದ ಅಥವಾ ಶಾಲಾ ಮಂಡಲಿಯ ಆಡಳಿತದಲ್ಲಿರುವ ಅನುಮೋದಿತ ಶಾಲೆಗೆ ಹಾಜರಾಗುವ ಮಗುವಿನ ಸಂಬಂಧದಲ್ಲಿ ಯಾವುದೇ ಶುಲ್ಕವನ್ನು ವಿಧಿಸತಕ್ಕುದಲ್ಲ.

(2) 17ನೇ ಪ್ರಕರಣದ ಮೇರೆಗೆ ಯಾವುದೇ ಮಗುವಿನ ಸಂಬಂಧದಲ್ಲಿ ಹಾಜರಾತಿ ಆದೇಶವನ್ನು ಹೊರಡಿಸಿರುವಲ್ಲಿ ಮತ್ತು ಅದು ಹಾಜರಾಗಬಹುದಾದ ಶಾಲೆಯು 2ನೇ ಪ್ರಕರಣದ (3)ನೇ ಖಂಡದ (ಬಿ) ಉಪಖಂಡದ ವ್ಯಾಪ್ತಿಯೊಳಗೆ ಬರುವ ಖಾಸಗಿ ಆಡಳಿತದ ಅಧೀನದಲ್ಲಿರುವ ಅನುಮೋದಿತ ಶಾಲೆಯಾಗಿರುವಲ್ಲಿ, ಶಾಲಾ ಮಂಡಲಿಯು ಅಥವಾ ಕಡ್ಡಾಯ ಪ್ರಾಥಮಿಕ ಶಿಕ್ಷಣ ನಿರ್ದೇಶಕನು, ಆ ಮಗು ಅಲ್ಲಿ ಪಡೆಯುವ ಪ್ರಾಥಮಿಕ ಶಿಕ್ಷಣವು ಉಚಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಯೋಚಿಸುವಂಥ ಕ್ರಮ ಕೈಗೊಳ್ಳಬಹುದು.

**20. ಮಗುವಿನ ವಯಸ್ಸನ್ನು ಲೆಕ್ಕ ಹಾಕುವುದು.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ಮಗುವಿನ ವಯಸ್ಸನ್ನು, ಶೈಕ್ಷಣಿಕ ವರ್ಷದ ಪ್ರಾರಂಭದ ದಿನದಂದು ಅಥವಾ ಅದಕ್ಕೆ ಮುಂಚೆ, ಆ ಮಗುವಿಗೆ ತುಂಬುವ ಪೂರ್ಣ ವರ್ಷಗಳನ್ನು ಆಧರಿಸಿ ಲೆಕ್ಕ ಹಾಕತಕ್ಕುದು:

ಪರಂತು, ಮಗುವಿನ ಜನ್ಮ ದಿನವು, ಶೈಕ್ಷಣಿಕ ವರ್ಷದ ಮೊದಲನೇ ದಿನಾಂಕದಿಂದ ಅರವತ್ತು ದಿನಗಳೊಳಗೆ ಬರುವಲ್ಲಿ ಮಗುವಿನ ವಯಸ್ಸನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ, ಅದರ ಜನ್ಮ ದಿನಾಂಕವು ಶೈಕ್ಷಣಿಕ ವರ್ಷದ ಮೊದಲನೇ ದಿನಾಂಕದಂದು ಬರುವುದಾಗಿ ಭಾವಿಸತಕ್ಕುದು.

## ಅಧ್ಯಾಯ–IV
## ಪರೀಕ್ಷೆಗಳು ಮತ್ತು ದುರಾಚರಣೆಗಳು ಇತ್ಯಾದಿಗಳನ್ನು ತಡೆಯುವುದು

**21. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ, 22ನೇ ಪ್ರಕರಣವನ್ನು ಹೊರತುಪಡಿಸಿ,–

(ಎ) "ಶಿಕ್ಷಣ ಸಂಸ್ಥೆಗಳು" ಎಂದರೆ, ಯಾವುದೇ ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಅಥವಾ ಅವರು ನಿರ್ವಹಿಸುವ ಯಾವುದೇ ಕಾಲೇಜು, ಯಾವುದೇ ಜ್ಯೂನಿಯರ್ ಕಾಲೇಜು, ಪ್ರಾಥಮಿಕ, ಪ್ರೌಢ ಅಥವಾ ತಾಂತ್ರಿಕ ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಶಾಲೆ ಅಥವಾ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ, ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಮಂಡಲಿ, ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಲಿ ಮತ್ತು ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಸೂಚಿಸಬಹುದಾದಂಥ ಇತರ ಸಂಸ್ಥೆ ಅಥವಾ ಸಂಸ್ಥೆಗಳ ವರ್ಗ;

(ಬಿ) "ಪರೀಕ್ಷೆ" ಎಂದರೆ, ತತ್ಕಾಲದಲ್ಲಿ ಅನುಸೂಚಿ ಖಖರಲ್ಲಿ ನಿರ್ದಿಷ್ಟಪಡಿಸಿರುವ ಪರೀಕ್ಷೆ ಮತ್ತು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚಿಸಬಹುದಾದಂಥ ಇತರ ಪರೀಕ್ಷೆ ಮತ್ತು ಇದರಲ್ಲಿ ಮೌಲ್ಯಮಾಪನ, ಅಂಕಪಟ್ಟಿ ತಯಾರಿಕೆ, ಫಲಿತಾಂಶಗಳ ಪ್ರಕಟಣೆ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳು ಒಳಗೊಳ್ಳುತ್ತವೆ;

(ಸಿ) ಯಾವ ವ್ಯಕ್ತಿಗೆ ಯಾವುದೇ ಪರೀಕ್ಷೆಗೆ ಸಂಬಂಧಪಟ್ಟ ಕೆಲಸವನ್ನು ವಹಿಸಲಾಗಿದೆಯೋ ಆ ವ್ಯಕ್ತಿಯ ಸಂಬಂಧದಲ್ಲಿ "ಕೆಲಸ ಮಾಡಲು ನಿರಾಕರಿಸುವುದು" ಎಂದರೆ, ಅನುಮತಿ ನೀಡಲು ಸಕ್ಷಮವಾದ ಪ್ರಾಧಿಕಾರದ ಅಂಥ ಅನುಮತಿ ಇಲ್ಲದೆ, ಕೆಲಸದ ದಿನದಂದು ಮತ್ತು ಕೆಲಸದ ವೇಳೆಯಲ್ಲಿ ಕೆಲಸದ ಸ್ಥಳದಲ್ಲಿ ಹಾಜರಾಗಲು ತಪ್ಪುವುದು ಅಥವಾ ಆ ಸ್ಥಳದಿಂದ ಗೈರುಹಾಜರಾಗುವುದು ಅಥವಾ

ಕೆಲಸ ನಿಂತು ಹೋಗುವಂತೆ ಅಥವಾ ಕೆಲಸವು ಗಮನಾರ್ಹವಾಗಿ ನಿಧಾನವಾಗುವಂತೆ ಅಥವಾ ಹಾಗೆ ಆಗುವ ಸಂಭವವಿರುವಂತೆ ಆತ ಕೆಲಸ ಮಾಡಲು ನಿರಾಕರಿಸುವುದು ಅಥವಾ ಅವನು ಇನ್ನಾವುದೇ ರೀತಿಯಲ್ಲಿ ನಡೆದುಕೊಳ್ಳುವುದು ಮತ್ತು "ಕೆಲಸ ಮಾಡಲು ನಿರಾಕರಿಸುವುದು" ಎಂಬ ಪದಗಳನ್ನು ಅವುಗಳ ಎಲ್ಲ ವ್ಯಾಕರಣ ವ್ಯತ್ಯಾಸಗಳೊಂದಿಗೆ ಹಾಗೂ ಸಜಾತೀಯ ಪದಾವಳಿಗಳೊಂದಿಗೆ ತದನುಸಾರವಾಗಿ ಅರ್ಥೈಸತಕ್ಕದು; ಮತ್ತು

(ಡಿ) ಯಾವುದೇ ಪರೀಕ್ಷೆಗೆ ಸಂಬಂಧಿಸಿದಂತೆ "ದುರಾಚರಣೆ" ಎಂದರೆ ಬರೆದ, ಧ್ವನಿ ಮುದ್ರಿಸಿದ, ಬೆರಳಚ್ಚು ಮಾಡಿದ ಅಥವಾ ಮುದ್ರಿಸಿದ ಯಾವುದೇ ಸಾಮಗ್ರಿಯಿಂದ ಅಥವಾ ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಯಿಂದ ಸಹಾಯವನ್ನು ತೆಗೆದುಕೊಳ್ಳುವುದು ಅಥವಾ ಯಾವನೇ ವ್ಯಕ್ತಿಗೆ ಸಹಾಯ ಮಾಡುವುದು ಅಥವಾ ತೆಗೆದುಕೊಳ್ಳಲು ಅಥವಾ ನೀಡಲು ಪ್ರಯತ್ನಿಸುವುದು.

**22. ಪರೀಕ್ಷೆಗಳು.–** (1) ಆಂತರಿಕ ಮೌಲ್ಯಮಾಪನವಿರುವ ಅಥವಾ ಬಾಹ್ಯ ಮೌಲ್ಯ ಮಾಪನವಿರುವ ಅಥವಾ ಭಾಗಶಃ ಆಂತರಿಕ ಮತ್ತು ಭಾಗಶಃ ಬಾಹ್ಯವಾಗಿರುವ, ಪರೀಕ್ಷಾ ಪದ್ಧತಿಯನ್ನು ವಿದ್ಯಾರ್ಥಿ ಮೌಲ್ಯ ಮಾಪನ ಪದ್ಧತಿಯು ವಿಶ್ವಾಸಾರ್ಹವಾದ ಮತ್ತು ಪರಿಣಾಮಕಾರಿಯಾದ ಪದ್ಧತಿಯಾಗುವ ಹಾಗೆ ಅದನ್ನು ಸಕ್ಷಮ ಪ್ರಾಧಿಕಾರವು ವಿನಿಯಮಿಸತಕ್ಕದು.

(2) ಪರೀಕ್ಷಾ ಪದ್ಧತಿಯನ್ನು ಜಾರಿಗೊಳಿಸುವುದು ಮತ್ತು ಪರೀಕ್ಷೆಗಳನ್ನು ನಡೆಸುವುದು ಮತ್ತು ಶಿಕ್ಷಣ ಸಂಸ್ಥೆಗಳ ವಿವಿಧ ವರ್ಗಗಳು ಯಾವ ಪರೀಕ್ಷಾ ಪದ್ಧತಿಯ ಕ್ರಮವನ್ನು ಅನುಸರಿಸಬೇಕೋ ಆ ಪರೀಕ್ಷಾ ಪದ್ಧತಿಯ ಕ್ರಮ ಇವುಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಸರ್ಕಾರವು ನಿಯಮಗಳನ್ನು ರಚಿಸಬಹುದು.

**23. ಪರೀಕ್ಷಾ ಕೆಲಸವನ್ನು ವಹಿಸಿಕೊಡಲಾದ ಕೆಲವು ವ್ಯಕ್ತಿಗಳ ಕರ್ತವ್ಯಗಳು.–** ಯಾವನೇ ವ್ಯಕ್ತಿಯು,-

(ಎ) ಯಾವುದೇ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವವನಾಗಿ ಅವನನ್ನು ನೇಮಕ ಮಾಡಿರುವಲ್ಲಿ ಯಾವನೇ ವ್ಯಕ್ತಿಯು ಈ ಸಂಬಂಧದಲ್ಲಿ ನೇಮಕ ಪ್ರಾಧಿಕಾರಿಯು ಅವನಿಗೆ ಲಿಖಿತವಾಗಿ ಕೊಟ್ಟಿರುವ ಸೂಚನೆಗಳ ಹೊರತಾಗಿ, ತಾನು ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಯನ್ನು ಅಥವಾ ಅದರ ಪ್ರತಿಯನ್ನು ಯಾವ ವ್ಯಕ್ತಿಗೂ ಒದಗಿಸತಕ್ಕದಲ್ಲ ಅಥವಾ ಒದಗಿಸುವಂತೆ ಮಾಡತಕ್ಕದಲ್ಲ ಅಥವಾ ಅಂಥ ಪತ್ರಿಕೆಯ ವಿಷಯಗಳನ್ನು ತಿಳಿಸತಕ್ಕದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದರ ಬಗ್ಗೆ ಪ್ರಚಾರ ಮಾಡತಕ್ಕದಲ್ಲ; ಅಥವಾ

(ಬಿ) ಪರೀಕ್ಷೆಯ ಉದ್ದೇಶಕ್ಕಾಗಿ ಸಿದ್ಧಪಡಿಸಿದ ಯಾವುದೇ ಪ್ರಶ್ನೆಪತ್ರಿಕೆಯನ್ನು ಮುದ್ರಿಸುವ, ಸೈಕ್ಲೋಸ್ಟೈಲ್ ಮಾಡುವ, ಬೆರಳಚ್ಚು ಮಾಡುವ ಅಥವಾ ಇತರ ರೀತಿಯಲ್ಲಿ ಅದರ ಪ್ರತಿ ಮಾಡುವ ಕೆಲಸವನ್ನು ಅವನಿಗೆ ವಹಿಸಿಕೊಟ್ಟಿರುವಲ್ಲಿ, ಆ ಕೆಲಸವನ್ನು ಅವನಿಗೆ ವಹಿಸಿಕೊಟ್ಟ ಪ್ರಾಧಿಕಾರಿಯು ನೀಡಿದ ಲಿಖಿತ ಸೂಚನೆಗಳಿಗೆ ಅನುಸಾರವಾಗಿ ಹೊರತಾಗಿ, ಯಾವ ವ್ಯಕ್ತಿಗೂ ಅದರ ಪ್ರತಿಯನ್ನು ಒದಗಿಸತಕ್ಕದಲ್ಲ ಅಥವಾ ಒದಗಿಸುವಂತೆ ಮಾಡತಕ್ಕದಲ್ಲ ಅಥವಾ ಅದರ ಒಳಾಂಶಗಳನ್ನು ತಿಳಿಸತಕ್ಕದಲ್ಲ ಅಥವಾ ಅದರ ಬಗ್ಗೆ ಪ್ರಚಾರ ಮಾಡತಕ್ಕದಲ್ಲ; ಅಥವಾ

(ಸಿ) ಯಾವುದೇ ಪರೀಕ್ಷೆಯ ಉದ್ದೇಶಕ್ಕಾಗಿ ಸಿದ್ಧಪಡಿಸಲಾದ ಯಾವುದೇ ಪ್ರಶ್ನೆಪತ್ರಿಕೆಯ ಅಭಿರಕ್ಷೆಯನ್ನು ವಹಿಸಲಾಗಿರುವ ಅಥವಾ ಅನ್ಯಥಾ ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯು, ಅವುಗಳ ಅಭಿರಕ್ಷೆಯನ್ನು ಅಥವಾ ಸ್ವಾಧೀನತೆಯನ್ನು ಅವನಿಗೆ ವಹಿಸಿಕೊಟ್ಟ ಪ್ರಾಧಿಕಾರದ ಲಿಖಿತ ಸೂಚನೆಗಳಿಗೆ ಅನುಸಾರವಾಗಿ ಹೊರತು, ಯಾವ ವ್ಯಕ್ತಿಗೂ ಅದರ ಪ್ರತಿಯನ್ನು ಒದಗಿಸತಕ್ಕದಲ್ಲ ಅಥವಾ ಹಂಚತಕ್ಕದಲ್ಲ ಅಥವಾ ಒದಗಿಸುವಂತೆ ಅಥವಾ ಹಂಚುವಂತೆ ಮಾಡತಕ್ಕದಲ್ಲ ಅಥವಾ ಅದರ ಒಳಾಂಶವನ್ನು ತಿಳಿಸತಕ್ಕದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಪ್ರಚಾರ ನೀಡತಕ್ಕದಲ್ಲ.

**24. ಪರೀಕ್ಷೆಗಳಲ್ಲಿ ಕಾಪಿ, ಇತ್ಯಾದಿಗಳನ್ನು ಮಾಡುವುದಕ್ಕೆ ನಿಷೇಧ.–** ಯಾವ ವ್ಯಕ್ತಿಯು ಪರೀಕ್ಷಾ ಭವನದಲ್ಲಿ, ಅಥವಾ ಅದರ ಹತ್ತಿರದಲ್ಲಿ ಯಾವುದೇ ಪುಸ್ತಕದಿಂದ, ಪಾಠ ಟಿಪ್ಪಣಿಗಳಿಂದ ಅಥವಾ ಇತರ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳಿಂದ, ಪರೀಕ್ಷೆಗಾಗಿ ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಗಳಿಗೆ ಉತ್ತರಗಳನ್ನು ಕಾಪಿ ಮಾಡತಕ್ಕುದಲ್ಲ ಅಥವಾ ಯಾವುದೇ ಇತರ ಅಕ್ರಮ ವಿಧಾನವನ್ನು ಅನುಸರಿಸತಕ್ಕುದಲ್ಲ:

ಪರಂತು, ಅಂಥ ಪರೀಕ್ಷೆಗೆ ಸಂಬಂಧಿಸಿದ ನಿಯಮಗಳ ಮೇರೆಗೆ ಅನುಮತಿಸಲಾದ ಪುಸ್ತಕಗಳಿಂದ ಅಥವಾ ಸಾಮಗ್ರಿಗಳಿಂದ ಆ ರೀತಿ ಸಹಾಯವನ್ನು ಅಂಥ ವ್ಯಕ್ತಿಯು ಪಡೆಯುವುದಕ್ಕೆ ಈ ಪ್ರಕರಣದಲ್ಲಿರುವುದು ಯಾವುದೂ ಅಡ್ಡಿಪಡಿಸತಕ್ಕುದಲ್ಲ.

**25. ಬೇರೊಬ್ಬನಂತೆ ನಟಿಸಿ ಪರೀಕ್ಷೆಗಳಲ್ಲಿ ಹಾಜರಾಗುವುದಕ್ಕೆ ನಿಷೇಧ.–** ಯಾವ ವ್ಯಕ್ತಿಯೂ, ಯಾವ ಇತರ ವ್ಯಕ್ತಿಗಾಗಿ ಅಥವಾ ಪರವಾಗಿ ಪರೀಕ್ಷೆಗೆ ಹಾಜರಾಗತಕ್ಕುದಲ್ಲ ಅಥವಾ ಅದರಲ್ಲಿ ಬರೆಯತಕ್ಕುದಲ್ಲ.

**26. ಪರೀಕ್ಷಾ ಕೇಂದ್ರದ ಸಮೀಪ ಅಲೆದಾಡುವುದಕ್ಕೆ ಪ್ರತಿಬಂಧ.–** ಯಾವ ವ್ಯಕ್ತಿಯೂ, ತನ್ನ ಕರ್ತವ್ಯಗಳ ನಿರ್ವಹಣೆಗಾಗಿ ಹೊರತು, ಅಥವಾ ತನ್ನ ಮೇಲಾಧಿಕಾರಿಗಳ ಆದೇಶದ ಪಾಲನೆಯ ಸಂದರ್ಭದಲ್ಲಿ ಹೊರತು, ಪರೀಕ್ಷೆ ನಡೆದಿರುವಾಗ ಅಥವಾ ಯಾವುದೇ ಪರೀಕ್ಷೆ ಸಂಬಂಧದಲ್ಲಿ ಮೌಲ್ಯ ಮಾಪನ ಅಥವಾ ಅಂಕಪಟ್ಟಿ ತಯಾರಿಕೆ ಕಾರ್ಯ ನಡೆದಿರುವಾಗ ಮತ್ತು ಅಂಥ ಪರೀಕ್ಷೆಯ ಮೌಲ್ಯ ಮಾಪನದ ಅಥವಾ ಅಂಕಪಟ್ಟಿ ತಯಾರಿಕೆ ಕಾರ್ಯವು ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮೊದಲು, ಪರೀಕ್ಷೆಯ ಮೌಲ್ಯ ಮಾಪನ ಅಥವಾ ಅಂಕಪಟ್ಟಿಯ ತಯಾರಿಕೆ ಕಾರ್ಯವು ನಡೆಯುತ್ತಿರುವ ಕಟ್ಟಡದೊಳಗೆ ಅಥವಾ ಅಂಥ ಕಟ್ಟಡದಿಂದ ಒಂದು ನೂರು ಮೀಟರ್ ಅಂತರದೊಳಗಿರುವ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದೊಳಗೆ ಅಲೆದಾಡತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಅಂಥ ವ್ಯಕ್ತಿಯ ಪ್ರಾಮಾಣಿಕ ಚಟುವಟಿಕೆಗಳಿಗೆ ಅನ್ವಯವಾಗತಕ್ಕುದಲ್ಲ.

**27. ಪರೀಕ್ಷೆಯಲ್ಲಿ ಬರೆದ ಉತ್ತರಗಳು, ಮುಂತಾದುವುಗಳ ಬದಲಾವಣೆ.–** ಯಾವ ವ್ಯಕ್ತಿಯೂ,–

(ಎ) ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದ ನಿಯಮಗಳು ಅಥವಾ ಆದೇಶಗಳ ಅನುಸಾರವಾಗಿ ಹೊರತು,–

(i) ಅಂಥ ಪರೀಕ್ಷೆಯಲ್ಲಿ ಪರೀಕ್ಷಾರ್ಥಿ ಬರೆದ ಉತ್ತರಗಳನ್ನು ಬದಲಾವಣೆ ಮಾಡತಕ್ಕುದಲ್ಲ, ಅದನ್ನು ಮಾರ್ಪಾಟು ಮಾಡತಕ್ಕುದಲ್ಲ, ವ್ಯತ್ಯಾಸ ಮಾಡತಕ್ಕುದಲ್ಲ ಅಥವಾ ತಿದ್ದುಪಡಿ ಮಾಡತಕ್ಕುದಲ್ಲ; ಅಥವಾ

(ii) ಉತ್ತರ ಪತ್ರಿಕೆಗೆ ಅಥವಾ ಅದರ ಯಾವುದೇ ಭಾಗಕ್ಕೆ ಹೆಚ್ಚುವರಿ ಉತ್ತರ ಪುಸ್ತಕಗಳನ್ನು ಅಥವಾ ಹಾಳೆಗಳನ್ನು ಸೇರಿಸತಕ್ಕುದಲ್ಲ ಅಥವಾ ಅದರಿಂದ ತೆಗೆಯತಕ್ಕುದಲ್ಲ ಅಥವಾ ಬೇರೊಂದು ಉತ್ತರ ಪತ್ರಿಕೆಯನ್ನು ಅದರ ಬದಲಿಯಾಗಿ ಹಾಕತಕ್ಕುದಲ್ಲ; ಅಥವಾ

(ಬಿ) ಉದ್ದೇಶಪೂರ್ವಕವಾಗಿ ಅಥವಾ ಗೊತ್ತಿದ್ದೂ,–

ಪರೀಕ್ಷಾರ್ಥಿಗೆ ಪರೀಕ್ಷೆಯಲ್ಲಿ ನೀಡಲಾದ ಅಥವಾ ನೀಡಲು ಉದ್ದೇಶಿಸಲಾದ ಅಂಕಗಳನ್ನು ಅಕ್ರಮವಾಗಿ ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಉದ್ದೇಶದಿಂದ–

(i) ಉತ್ತರ ಪತ್ರಿಕೆಯಲ್ಲಿ ಅಥವಾ ಅಂಕಗಳ ರಿಜಿಸ್ಟರಿನಲ್ಲಿ ಅಥವಾ ಅಂಥ ಪಟ್ಟಿಯಲ್ಲಿ ತಪ್ಪು ನಮೂದನೆಗಳನ್ನು ಮಾಡತಕ್ಕುದಲ್ಲ; ಅಥವಾ

(ii) ಯಾವನೇ ಅಭ್ಯರ್ಥಿಯು ಪಡೆದುಕೊಂಡ ಅಂಕಗಳನ್ನು ತಪ್ಪಾಗಿ ಕೂಡಿಸತಕ್ಕುದಲ್ಲ ಅಥವಾ ಪುನಃ ಕೂಡಿಸತಕ್ಕುದಲ್ಲ;

(iii) ಕಂಪ್ಯೂಟರಿಗೆ ತಪ್ಪು ಅಂಕಿ ಅಂಶಗಳನ್ನು ಒದಗಿಸತಕ್ಕುದಲ್ಲ.

**28. ಪರೀಕ್ಷೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದು ಶಿಕ್ಷಣ ಸಂಸ್ಥೆಗಳ ನೌಕರರ ಕರ್ತವ್ಯವಾಗಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಅಥವಾ ನ್ಯಾಯಧಿಕರಣದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ಪರೀಕ್ಷೆಯ ಸಂಬಂಧದಲ್ಲಿ ತನಗೆ ವಹಿಸಿಕೊಡಲಾದ ಯಾವುದೇ ಕೆಲಸ ಮಾಡುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಅಧಿಕಾರಿಯ, ಉಪಾಧ್ಯಾಯನ ಅಥವಾ ಇತರ ನೌಕರನ ಮತ್ತು ಯಾವುದೇ ಶಿಕ್ಷಣ ಸಂಸ್ಥೆಯ ಸೇವೆಯಲ್ಲಿರುವ ಅಥವಾ ಅದರಿಂದ ವೇತನ ಅಥವಾ ಸಂಭಾವನೆಯನ್ನು ಪಡೆಯುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕುದು.

## ಅಧ್ಯಾಯ-V

## ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ ಮತ್ತು ನೋಂದಣಿ

**29. ಶಿಕ್ಷಣ ಸಂಸ್ಥೆಗಳ ವರ್ಗೀಕರಣ.–** ಶಿಕ್ಷಣ ಸಂಸ್ಥೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸತಕ್ಕುದು:

(ಎ) ರಾಜ್ಯ ಸಂಸ್ಥೆಗಳು, ಎಂದರೆ, ರಾಜ್ಯ ಸರ್ಕಾರದ ಮೂಲಕ ಸ್ಥಾಪಿತವಾದ ಅಥವಾ ಅದರ ನಿರ್ವಹಣೆಯಲ್ಲಿ ಮತ್ತು ಆಡಳಿತದಲ್ಲಿರುವ ಶಿಕ್ಷಣ ಸಂಸ್ಥೆಗಳು;

(ಬಿ) ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಎಂದರೆ, ಸ್ಥಳೀಯ ಪ್ರಾಧಿಕಾರದ ಮೂಲಕ ಸ್ಥಾಪಿತವಾದ ಅಥವಾ ಅದರ ನಿರ್ವಹಣೆಯಲ್ಲಿ ಮತ್ತು ಆಡಳಿತದಲ್ಲಿರುವ ಶಿಕ್ಷಣ ಸಂಸ್ಥೆಗಳು; ಮತ್ತು

(ಸಿ) ಖಾಸಗಿ ಶಿಕ್ಷಣ ಸಂಸ್ಥೆಗಳು, ಎಂದರೆ, ನಿಯಮಿಸಲಾದ ರೀತಿಯಲ್ಲಿ ನೋಂದಾಯಿಸಲಾದ ಹಾಗೂ ಒಬ್ಬ ವ್ಯಕ್ತಿಯ ಅಥವಾ ವ್ಯಕ್ತಿಗಳ ನಿಕಾಯದ ಮೂಲಕ ಸ್ಥಾಪಿತವಾದ ಅಥವಾ ಅವನ ಅಥವಾ ಅದರ ನಿರ್ವಹಣೆಯಲ್ಲಿ ಮತ್ತು ಆಡಳಿತದಲ್ಲಿರುವ ಶಿಕ್ಷಣ ಸಂಸ್ಥೆಗಳು.

**30. ಶಿಕ್ಷಣ ಸಂಸ್ಥೆಗಳ ನೋಂದಣಿ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸ್ಥಾಪಿತವಾದ ಅಥವಾ ಆ ತರುವಾಯ ಸ್ಥಾಪಿಸಲು ಉದ್ದೇಶಿಸಿರುವ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ ಸಂಸ್ಥೆಯು ಮತ್ತು ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮತ್ತು ಅದರ ಮೇರೆಗಿನ ನಿಯಮಗಳಿಗನುಸಾರವಾಗಿ ನೋಂದಾಯಿತವಾಗತಕ್ಕುದು.

(2) ಯಾವನೇ ವ್ಯಕ್ತಿಯು ಅಥವಾ ಸ್ಥಳೀಯ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ನೋಂದಾಯಿತವಾಗತಕ್ಕ ಶಿಕ್ಷಣ ಸಂಸ್ಥೆಯು ಹಾಗೆ ನೋಂದಾಯಿತವಾದ ಹೊರತು ಅದನ್ನು ಸ್ಥಾಪಿಸತಕ್ಕುದಲ್ಲ ಅಥವಾ ಸಂದರ್ಭಾನುಸಾರ ನಡೆಸತಕ್ಕುದಲ್ಲ ಅಥವಾ ನಿರ್ವಹಿಸತಕ್ಕುದಲ್ಲ.

**31. ಶಿಕ್ಷಣ ಸಂಸ್ಥೆಯನ್ನು ನೋಂದಾಯಿಸುವ ಕಾರ್ಯವಿಧಾನ.–** (1) ಈ ಕೆಳಕಂಡಂತೆ ಉದ್ದೇಶಿಸುವ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವನೇ ವ್ಯಕ್ತಿಯು ಅಥವಾ ನೋಂದಾಯಿತವಾದ ವ್ಯಕ್ತಿಗಳ ನಿಕಾಯವು, ನಿಯಮಿಸಬಹುದಾದಂಥ ಫೀಜಿನೊಂದಿಗೆ, ಅಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ, ನೋಂದಣಿ ಪ್ರಾಧಿಕಾರಕ್ಕೆ ಅಂಥ ಸಂಸ್ಥೆಯ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕುದು:

(ಎ) ಶಿಕ್ಷಣ ನೀಡುವ ಸಂಸ್ಥೆಯನ್ನು ಸ್ಥಾಪಿಸಲು; ಅಥವಾ

(ಬಿ) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೂ ಮೊದಲು ಸ್ಥಾಪಿತವಾದ ಮತ್ತು ಅಂಥ ದಿನಾಂಕದಂದು ಅಸ್ತಿತ್ವದಲ್ಲಿರುವ ಶಿಕ್ಷಣವನ್ನು ನೀಡುವ ಸಂಸ್ಥೆಯನ್ನು ನಿರ್ವಹಿಸಲು.

(2) (1)ನೇ ಉಪಪ್ರಕರಣದ ಮೇರೆಗೆ ಒಂದು ಸಂಸ್ಥೆಯ ನೋಂದಣಿಯನ್ನು ಮಾಡಿಕೊಳ್ಳುವಾಗ, ನೋಂದಣಿ ಪ್ರಾಧಿಕಾರವು,–

(ಎ) ಆ ಸ್ಥಳದ ಜನರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದೆ ಅಥವಾ ಆ ಸಂಸ್ಥೆಯು ಒದಗಿಸಲು ಉದ್ದೇಶಿಸಿರುವ ಬಗೆಯ ಶಿಕ್ಷಣದ ಅಗತ್ಯವಿದೆ ಎಂಬ ಬಗ್ಗೆ;

(ಬಿ) ಸಕ್ಷಮ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ ಸಂಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿ ಮುಂದುವರೆಸಿಕೊಂಡು ಹೋಗಲು ಸಾಕಷ್ಟು ಹಣಕಾಸಿನ ಏರ್ಪಾಡು ಇದೆ ಎಂಬ ಬಗ್ಗೆ;

(ಸಿ) ಸಂಸ್ಥೆಯನ್ನು ನಿರ್ಮಲ ಮತ್ತು ಆರೋಗ್ಯಕರವಾದ ಪರಿಸರದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ;

(ಡಿ) ಒದಗಿಸಲು ಉದ್ದೇಶಿಸಲಾದ ಕಟ್ಟಡದ ನಿವೇಶನ, ಆಟದ ಮೈದಾನ ಹಾಗೂ ಉದ್ಯಾನವನ ಮತ್ತು ಸಂಸ್ಥೆಯನ್ನು ಪ್ರಾರಂಭಿಸಲು ಉದ್ದೇಶಿಸಲಾದ ಕಟ್ಟಡ – ಇವು ಆ ಬಗ್ಗೆ ನಿಯಮಿಸಲಾದ ನಿಯಮಗಳಿಗನುಸಾರವಾಗಿವೆ ಎಂಬ ಬಗ್ಗೆ;

(ಇ) ರಾಜ್ಯ ಸರ್ಕಾರವು ವಿದ್ಯಾರ್ಹತೆಯ ಬಗ್ಗೆ ರಚಿಸಿದ ನಿಯಮಗಳಿಗನುಸಾರ ಅರ್ಹರಾದ ಬೋಧಕ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಕೊಳ್ಳಲಾಗಿದೆ ಅಥವಾ ಮಾಡಿಕೊಳ್ಳಲಾಗುವುದು ಎಂಬ ಬಗ್ಗೆ; ಮತ್ತು

(ಎಫ್) ಅರ್ಜಿಯಲ್ಲಿ ಒದಗಿಸಿದ ವಿವರಗಳು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಮೂಲಕ ಗೊತ್ತುಪಡಿಸಿದ ಅವಶ್ಯಕತೆಗಳಿಗೆ ಅನುಗುಣವಾಗಿವೆ ಎಂಬ ಬಗ್ಗೆ

– ಯುಕ್ತ ಗಮನವನ್ನು ನೀಡತಕ್ಕದ್ದು,

(3) ನೋಂದಣಿ ಪ್ರಾಧಿಕಾರವು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ,–

(ಎ) ನೋಂದಣಿ ಬಗ್ಗೆ ನಿರ್ದಿಷ್ಟಪಡಿಸಿದ ಅಥವಾ ನಿಯಮಿಸಿದ ಷರತ್ತುಗಳನ್ನು ಪೂರೈಸಿದ್ದ ಸಂದರ್ಭದಲ್ಲಿ ಆ ಸಂಸ್ಥೆಯನ್ನು ನೋಂದಾಯಿಸತಕ್ಕುದು ಮತ್ತು ನಿಯಮಿಸಿದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನೀಡತಕ್ಕುದು; ಅಥವಾ

(ಬಿ) ಅಂಥ ಷರತ್ತುಗಳ ಪಾಲನೆಯ ಸಂಬಂಧದಲ್ಲಿನ ಅವಧಿಯನ್ನು ಕಾಲಕಾಲಕ್ಕೆ ನಿರ್ದಿಷ್ಟಪಡಿಸತಕ್ಕುದು ಅಥವಾ ವಿಸ್ತರಿಸತಕ್ಕುದು:

ಪರಂತು, ನೋಂದಣಿ ಪ್ರಾಧಿಕಾರವು ಅವಶ್ಯಕವೆಂದು ಭಾವಿಸಿದಲ್ಲಿ, ನೋಂದಾಯಿಸುವುದಕ್ಕೆ ಅಥವಾ ನೋಂದಾಯಿಸಲು ನಿರಾಕರಿಸುವುದಕ್ಕೆ ಮೊದಲು, 37ನೇ ಪ್ರಕರಣದ ಮೇರೆಗೆ ರಚಿತವಾದ ತಜ್ಞರ ಮಂಡಲಿಯಿಂದ ಅಂಥ ಸಂಸ್ಥೆಯ ಅಗತ್ಯವಿದೆಯೇ ಹೇಗೆ ಎಂಬ ಬಗ್ಗೆ ವರದಿಯನ್ನು ತರಿಸಿಕೊಂಡು ಪರಿಶೀಲಿಸಬಹುದು.

(4) (3)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಅವಧಿಯನ್ನು ನಿರ್ದಿಷ್ಟಪಡಿಸಿರುವಾಗ ಅಥವಾ ವಿಸ್ತರಿಸಿರುವಾಗ, ನೋಂದಣಿಯ ಸಲುವಾಗಿ ನಿಯಮಿಸಿದ ಅಥವಾ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಅಂಥ ಅವಧಿಯೊಳಗೆ ಈಡೇರಿಸಿದಲ್ಲಿ ನೋಂದಣಿ ಪ್ರಾಧಿಕಾರವು ಆ ಸಂಸ್ಥೆಯನ್ನು ನೋಂದಾಯಿಸಬಹುದು ಮತ್ತು ನಿಯಮಿಸಿದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನೀಡಬಹುದು, ಆದರೆ, ಹಾಗೆ ಈಡೇರಿಸದಿದ್ದಲ್ಲಿ ನೋಂದಣಿಯನ್ನು ನಿರಾಕರಿಸತಕ್ಕುದು. ಪ್ರತಿಯೊಂದು ನಿರಾಕರಣೆ ಆದೇಶವು ಬರಹದಲ್ಲಿರತಕ್ಕುದು ಮತ್ತು ಆ ಕುರಿತು ಸಂಬಂಧಪಟ್ಟ ಅರ್ಜಿದಾರನಿಗೆ ತಿಳಿಸತಕ್ಕುದು.

(5) ಈ ಪ್ರಕರಣದ ಮೇರೆಗೆ ನೋಂದಣಿಯಾದ ಶೈಕ್ಷಣಿಕ ಸಂಸ್ಥೆಯ ವ್ಯವಸ್ಥಾಪಕ ವರ್ಗವು, (1)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ಯಾವುದೇ ವಿವರಗಳಲ್ಲಿ ಮಾಡಿದ ಯಾವುದೇ ಮಾರ್ಪಾಡಿನ ಬಗ್ಗೆ ಅಥವಾ ಸಂಸ್ಥೆಯನ್ನು ಮುಚ್ಚಿರುವುದರ ಬಗ್ಗೆ ನಿಯಮಿಸಬಹುದಾದಂಥ ಪ್ರಪತ್ರದಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಸಮಯದೊಳಗೆ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕುದು ಮತ್ತು ನೋಂದಣಿ ಪ್ರಾಧಿಕಾರವು ಅಂಥ ತಿಳಿವಳಿಕೆಯನ್ನು ಸ್ವೀಕರಿಸಿದ ತರುವಾಯ ರಿಜಿಸ್ಟರಿನಲ್ಲಿ ಮತ್ತು ನೋಂದಣಿ ಪ್ರಮಾಣ ಪತ್ರದಲ್ಲಿ ಅವಶ್ಯವಿರುವಲ್ಲೆಲ್ಲಾ ತಿದ್ದುಪಡಿ ಮಾಡತಕ್ಕುದು ಅಥವಾ ಸಂದರ್ಭಾನುಸಾರ ಆ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು.

**32. ಶೈಕ್ಷಣಿಕ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದು ಇತ್ಯಾದಿ.–** (1) ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವನೇ ವ್ಯಕ್ತಿ ಅಥವಾ ನೋಂದಾಯಿತ ವ್ಯಕ್ತಿಗಳ ನಿಕಾಯವು,–

(ಎ) ಈ ಅಧಿನಿಯಮದ ಮೇರೆಗೆ ನೋಂದಣಿಯಾದ ಶಿಕ್ಷಣ ನೀಡುವ ಸಂಸ್ಥೆಯಲ್ಲಿ ಉನ್ನತ ತರಗತಿಗಳನ್ನು ಪ್ರಾರಂಭಿಸಲು; ಅಥವಾ

(ಬಿ) ಅಂಥ ಯಾವುದೇ ಸಂಸ್ಥೆಯನ್ನು ಮೇಲ್ದರ್ಜೆಗೇರಿಸಲು

–ಉದ್ದೇಶಿಸಿದಲ್ಲಿ, ನೋಂದಣಿ ಪ್ರಾಧಿಕಾರಕ್ಕೆ ಆ ಬಗ್ಗೆ ಮಂಜೂರಾತಿ ಅಥವಾ ಅನುಮತಿ ಕೋರಿ ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ಶುಲ್ಕದೊಡನೆ ಅಂಥ ಪ್ರಪತ್ರದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು 31ನೇ ಪ್ರಕರಣದ (2) ರಿಂದ (3)ರ ವರೆಗಿನ ಉಪಪ್ರಕರಣಗಳ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಥ ಅರ್ಜಿಯ ಮೇಲೆ ಅನುಮತಿ ನೀಡುವುದಕ್ಕೆ ಅನ್ವಯವಾಗತಕ್ಕುದು.

(3) ಈ ಪ್ರಕರಣದ ಮೇರೆಗೆ ಅನುಮತಿಯನ್ನು ನೀಡಿರುವಲ್ಲಿ ಆ ಸಂಸ್ಥೆಗೆ ನೀಡಿದ ನೋಂದಣಿ ಪ್ರಮಾಣ ಪತ್ರವನ್ನು ತದನುಸಾರವಾಗಿ ಬದಲಾಯಿಸತಕ್ಕದ್ದು ಅಥವಾ ವ್ಯತ್ಯಾಸಗೊಳಿಸತಕ್ಕುದು.

**33. ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಯ ನೋಂದಣಿ.–** (1) 30ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸ್ಥಳೀಯ ಪ್ರಾಧಿಕಾರದ ಶಿಕ್ಷಣ ಸಂಸ್ಥೆಗೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗೆ ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮೊದಲು ಮನ್ನಣೆಗೆ ಅನ್ವಯಿಸಬಹುದಾದ ನಿಯಮಗಳಿಗೆ ಮತ್ತು ಆದೇಶಗಳಿಗೆ ಅನುಸಾರವಾಗಿ ರಾಜ್ಯ ಸರ್ಕಾರವು ಅಥವಾ ಅಂಥ ಮನ್ನಣೆಯನ್ನು ನೀಡಲು ಸಕ್ಷಮವಾದ ಪ್ರಾಧಿಕಾರವು ಅಂಥ ಮನ್ನಣೆ ನೀಡಿರುವಲ್ಲಿ ಮತ್ತು ಸಂದರ್ಭಾನುಸಾರವಾಗಿ ಆ ಸ್ಥಳೀಯ ಪ್ರಾಧಿಕಾರವು ಅಥವಾ ವ್ಯವಸ್ಥಾಪಕ ವರ್ಗವು ಅಂಥ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ನಿಯಮಿಸಲಾದ ನಮೂನೆಯಲ್ಲಿ ನೋಂದಣಿ ಪ್ರಾಧಿಕಾರಕ್ಕೆ ನಿರೂಪಣೆಯನ್ನು ಸಲ್ಲಿಸಿದಲ್ಲಿ ಅಂಥ ನೋಂದಣಿ ಪ್ರಾಧಿಕಾರವು ಅಂಥ ಸಂಸ್ಥೆಯನ್ನು ನೋಂದಣಿ ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ, ಶಿಕ್ಷಣ ಸಂಸ್ಥೆಯ ನೋಂದಣಿ ಬಗ್ಗೆ ಯಾವುದೇ ಫೀಜು ಸಂದಾಯವಾಗತಕ್ಕುದಲ್ಲ.

(3) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸ್ಥಳೀಯ ಪ್ರಾಧಿಕಾರ ಸಂಸ್ಥೆಯು ಅಥವಾ ಖಾಸಗಿ ಶಿಕ್ಷಣ ಸಂಸ್ಥೆಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಲಾದ ಉಪಬಂಧಗಳಿಗನುಸಾರವಾಗಿಲ್ಲವೆಂದು ನೋಂದಣಿ ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರವಾಗಿ, ಖಾಸಗಿ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ವರ್ಗಕ್ಕೆ ಅದು ಅನುಮತಿಸಬಹುದಾದಂಥ ಅವಧಿಯೊಳಗೆ ಅಥವಾ ವಿಸ್ತರಿತ ಅವಧಿಯೊಳಗೆ ಆ ಸಂಸ್ಥೆಯು ಆ ಉಪಬಂಧಗಳಿಗೆ ಅನುಸಾರವಾಗಿರುವಂತೆ ಮಾಡಲು ನಿರ್ದೇಶಿಸಬಹುದು.

**34. ನೋಂದಣಿ ರದ್ದಿಯಾತಿ.–** (1) ನೋಂದಣಿ ಪ್ರಾಧಿಕಾರಕ್ಕೆ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಅಥವಾ ಸ್ಥಳೀಯ ಪ್ರಾಧಿಕಾರ ಸಂಸ್ಥೆಯ ಸಂಬಂಧದಲ್ಲಿ,–

(ಎ) 31ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ನಿಯಮಿಸಲಾದ ಅಥವಾ ನಿರ್ದಿಷ್ಟಪಡಿಸಲಾದ ಯಾವುದೇ ಷರತ್ತನ್ನು ಅಥವಾ ನೋಂದಣಿಗೆ ಸಂಬಂಧಪಟ್ಟ ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಉಲ್ಲಂಘಿಸಲಾಗಿದೆಯೆಂದು; ಅಥವಾ

(ಬಿ) 33ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ವ್ಯವಸ್ಥಾಪಕ ವರ್ಗಕ್ಕೆ ನೀಡಿದ ನಿರ್ದೇಶನವನ್ನು ಅದು ಉಲ್ಲಂಘಿಸಿದೆ ಎಂದು

–ಕಂಡುಬಂದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಅಂಥ ಸಂಸ್ಥೆಯ ನೋಂದಣಿಯನ್ನು ರದ್ದುಗೊಳಿಸುವ ಬಗ್ಗೆ ಶಿಫಾರಸ್ಸನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಬಹುದು.

(2) ಸಕ್ಷಮ ಪ್ರಾಧಿಕಾರವು, (1)ನೇ ಉಪ–ಪ್ರಕರಣದ ಮೇರೆಗಿನ ವರದಿಯನ್ನು ಸ್ವೀಕರಿಸಿದ ತರುವಾಯ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ವ್ಯವಸ್ಥಾಪಕ ವರ್ಗಕ್ಕೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಸಂಸ್ಥೆಯ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಲು ಮತ್ತು ರಿಜಿಸ್ಟರಿನಿಂದ ಅದರ ಹೆಸರನ್ನು ತೆಗೆದುಹಾಕಲು ಆದೇಶಿಸಬಹುದು. ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ವ್ಯವಸ್ಥಾಪಕ ವರ್ಗಕ್ಕೆ ಮತ್ತು ನೋಂದಣಿ ಪ್ರಾಧಿಕಾರಕ್ಕೆ ಅಂಥ ಪ್ರತಿಯೊಂದು ಆದೇಶವನ್ನು ಕುರಿತು ತಿಳಿಸತಕ್ಕುದು.

**35. ಟ್ಯುಟೋರಿಯಲ್ ಸಂಸ್ಥೆಗಳ ನೋಂದಣಿ.–** (1) (ಎ) ಈ ಅಧಿನಿಯಮದ ಪ್ರಾರಂಭದಂದು ಮತ್ತು ಆ ತರುವಾಯ, ಮುಂಚಿತವಾಗಿ ನೋಂದಣಿ ಮಾಡದೇ ಯಾವುದೇ ಟ್ಯುಟೋರಿಯಲ್ ಸಂಸ್ಥೆಯನ್ನು ಪ್ರಾರಂಭಿಸತಕ್ಕುದಲ್ಲ ಮತ್ತು ಅಂಥ ನೋಂದಣಿಗಾಗಿ ನಿಯಮಿಸಬಹುದಾದಂಥ ಫೀಜಿನೊಂದಿಗೆ, ಗೊತ್ತುಪಡಿಸಲಾದ ನೋಂದಣಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕುದು.

(ಬಿ) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿದ್ದ ಟ್ಯುಟೋರಿಯಲ್ ಸಂಸ್ಥೆಯ ಸಂದರ್ಭದಲ್ಲಿ, ಅಂಥ ಸಂಸ್ಥೆಯನ್ನು ನಿರ್ವಹಿಸುವ ಯಾವನೇ ವ್ಯಕ್ತಿಯ ಅಥವಾ ವ್ಯಕ್ತಿಗಳ ನಿಕಾಯವು ಅಂಥ ಪ್ರಾರಂಭದಿಂದ ತೊಂಭತ್ತು ದಿನಗಳೊಳಗೆ ನೋಂದಣಿ ಪ್ರಾಧಿಕಾರಕ್ಕೆ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕುದು ಮತ್ತು ಅಂಥ ಯಾವ ಅರ್ಜಿಯನ್ನು ಹಾಗೆ ಸಲ್ಲಿಸದಿದ್ದಲ್ಲಿ ಅಥವಾ ನೋಂದಣಿ ಪ್ರಾಧಿಕಾರವು (2)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ನೋಂದಣಿಯನ್ನು ನಿರಾಕರಿಸುವ ಆದೇಶವನ್ನು ಅವನಿಗೆ ತಿಳಿಸಿದಲ್ಲಿ, ಅಂಥ ಸಂಸ್ಥೆಯನ್ನು ನಿರ್ವಹಿಸುವ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯವು, ಮೇಲೆ ತಿಳಿಸಿದ ತೊಂಭತ್ತು ದಿನಗಳ ಅವಧಿಯು ಮುಕ್ತಾಯವಾದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ಅಂಥ ನಿರಾಕರಣೆಯ ಆದೇಶವನ್ನು ತಿಳಿಸಿದ ದಿನಾಂಕದಿಂದ ಸಂಸ್ಥೆಯನ್ನು ನಡೆಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ನೋಂದಣಿ ಪ್ರಾಧಿಕಾರವು ನಿಯಮಿಸಲಾದ ಎಲ್ಲ ವಿವರಗಳನ್ನು ಅರ್ಜಿಯು ಒಳಗೊಂಡಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮತ್ತು ಟ್ಯುಟೋರಿಯಲ್ ಸಂಸ್ಥೆಯು ಆವರಣಗಳ ನೈರ್ಮಲ್ಯಕ್ಕೆ ಸಂಬಂಧಪಟ್ಟ ಷರತ್ತಿನ ಬಗ್ಗೆ ನಿಯಮಿಸಲಾದ ಕನಿಷ್ಠ ಅವಶ್ಯಕತೆಗಳನ್ನು ಪಾಲಿಸಿದೆಯೇ ಎಂಬ ಬಗ್ಗೆ ಮತ್ತು ಬೋಧಕ ಸಿಬ್ಬಂದಿ ವರ್ಗದ ವಿದ್ಯಾರ್ಹತೆಗಳ ಬಗ್ಗೆ ಮನವರಿಕೆ ಮಾಡಿಕೊಂಡ ತರುವಾಯ, ನೋಂದಣಿ ಉದ್ದೇಶಕ್ಕಾಗಿ ನಿರ್ವಹಿಸತಕ್ಕ ಪ್ರತ್ಯೇಕ ರಿಜಿಸ್ಟರಿನಲ್ಲಿ ಟ್ಯುಟೋರಿಯಲ್ ಸಂಸ್ಥೆಯನ್ನು ನೋಂದಣಿ ಮಾಡಿಕೊಳ್ಳಬಹುದು ಅಥವಾ ನೋಂದಣಿಯನ್ನು ನಿರಾಕರಿಸಬಹುದು ಮತ್ತು ಸಂಸ್ಥೆಯನ್ನು ಹಾಗೆ ನೋಂದಣಿ

ಮಾಡಿಕೊಂಡಾಗ, ನಿಯಮಿಸಲಾದ ಪ್ರಪತ್ರದಲ್ಲಿ ಟ್ಯುಟೋರಿಯಲ್ ಸಂಸ್ಥೆಯ ಹೆಸರಿನಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕುದು.

(3) ಹಾಗೆ ನೋಂದಣಿಯಾದ ಪ್ರತಿಯೊಂದು ಟ್ಯುಟೋರಿಯಲ್ ಸಂಸ್ಥೆಯನ್ನು ನಿರ್ವಹಿಸುವ ವ್ಯಕ್ತಿಯು ಅಥವಾ ವ್ಯಕ್ತಿಗಳ ನಿಕಾಯವು, ಪ್ರತಿಯೊಂದು ಶೈಕ್ಷಣಿಕ ವರ್ಷದ ಮುಕ್ತಾಯದ ತರುವಾಯ ಎರಡು ತಿಂಗಳುಗಳೊಳಗೆ, ಶೈಕ್ಷಣಿಕ ವರ್ಷದಲ್ಲಿ ಅದು ಒದಗಿಸಿದ ಬೋಧನಾ ಸೌಲಭ್ಯಗಳ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸಿ ನೋಂದಣಿ ಪ್ರಾಧಿಕಾರಕ್ಕೆ ಒಪ್ಪಿಸತಕ್ಕುದು.

(4) ಹಾಗೆ ನೋಂದಣಿಯಾದ ಪ್ರತಿಯೊಂದು ಟ್ಯುಟೋರಿಯಲ್ ಸಂಸ್ಥೆಯನ್ನು ನಿರ್ವಹಿಸುವ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯವು (2)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ಯಾವುದೇ ವಿವರಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಿದಲ್ಲಿ ಅದರ ಬಗ್ಗೆ ಅಥವಾ ಸಂಸ್ಥೆಯನ್ನು ಮುಚ್ಚಿದ ಬಗ್ಗೆ ನಿಯಮಿಸಬಹುದಾದಂಥ ಪ್ರಪತ್ರದಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಸಮಯದೊಳಗೆ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕುದು ಮತ್ತು ನೋಂದಣಿ ಪ್ರಾಧಿಕಾರವು ಅಂಥ ಮಾಹಿತಿಯನ್ನು ಸ್ವೀಕರಿಸಿದ ಮೇಲೆ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ರಿಜಿಸ್ಟರಿನಲ್ಲಿ ಮತ್ತು ನೋಂದಣಿ ಪ್ರಮಾಣ ಪತ್ರದಲ್ಲಿ ಅವಶ್ಯಕವೆನಿಸಿದೆಡೆಯಲ್ಲೆಲ್ಲ ತಿದ್ದುಪಡಿ ಮಾಡತಕ್ಕುದು ಅಥವಾ ಸಂದರ್ಭಾನುಸಾರವಾಗಿ ಪ್ರಮಾಣ ಪತ್ರವನ್ನು ರದ್ದುಗೊಳಿಸತಕ್ಕುದು ಮತ್ತು ಆ ಬಗ್ಗೆ ಅಧಿಸೂಚಿಸಬಹುದು.

(5) ಯಾವುದೇ ಟ್ಯುಟೋರಿಯಲ್ ಸಂಸ್ಥೆಯನ್ನು ನಿರ್ವಹಿಸಿಕೊಂಡು ಹೋಗುವ ವ್ಯಕ್ತಿಯು ಅಥವಾ ವ್ಯಕ್ತಿಗಳ ನಿಕಾಯವು ಅಂಥ ಸಂಸ್ಥೆಯನ್ನು ನಿರ್ವಹಿಸುವಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಯಾವ ಷರತ್ತಿಗಳಿಗೊಳಪಟ್ಟು ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗಿದೆಯೋ ಅಂಥ ಷರತ್ತುಗಳನ್ನು ಉಲ್ಲಂಘಿಸಿರುವನೆಂದು ಅಥವಾ ಉಲ್ಲಂಘಿಸಿದೆಯೆಂದು ನೋಂದಣಿ ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಅದು ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಮನವಿಯನ್ನು ಮಾಡಿಕೊಳ್ಳುವ ಅವಕಾಶವನ್ನು ಕೊಟ್ಟ ತರುವಾಯ, ನೋಂದಣಿ ಪ್ರಾಧಿಕಾರವು ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು ಮತ್ತು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ರಿಜಿಸ್ಟರಿನಿಂದ ಸಂಸ್ಥೆಯ ಹೆಸರನ್ನು ತೆಗೆದುಹಾಕಬಹುದು ಮತ್ತು ಆ ಬಗ್ಗೆ ಅಧಿಸೂಚಿಸಬಹುದು.

## ಅಧ್ಯಾಯ - VI

## ಶಿಕ್ಷಣ ಸಂಸ್ಥೆಗಳಿಗೆ ಮನ್ನಣೆ ನೀಡುವುದು ಇತ್ಯಾದಿ

**36. ಮನ್ನಣೆ.–** (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳಿಗನುಸಾರವಾಗಿ ನೋಂದಣಿಯಾದ ಯಾವುದೇ ಶಿಕ್ಷಣ ಸಂಸ್ಥೆಗೆ ಈ ಅಧಿನಿಯಮದ ಮೇರೆಗೆ ಮನ್ನಣೆ ನೀಡಬಹುದು.

(2) ಈ ಕೆಳಕಂಡ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು ಮನ್ನಣೆ ನೀಡಲಾಗುವುದು, ಎಂದರೆ:

(ಎ) ನಿಯಮಿಸಲಾದ ಮೊಬಲಗಿನ ಭದ್ರತಾ ಠೇವಣಿಯನ್ನು ನಿರ್ದಿಷ್ಟಪಡಿಸಿದ ಸಮಯದೊಳಗೆ ಸಂದಾಯ ಮಾಡತಕ್ಕದ್ದು;

(ಬಿ) ಸಂಸ್ಥೆಯನ್ನು ಭದ್ರ ತಳಹದಿಯ ಮೇಲೆ ನಡೆಸಲು ಸಾಕಷ್ಟು ನಿಧಿಗಳನ್ನು ವ್ಯವಸ್ಥಾಪಕ ವರ್ಗವು ಹೊಂದಿರತಕ್ಕುದು ಅಥವಾ ಹೊಂದುವ ಭರವಸೆ ಅದಕ್ಕೆ ಇರತಕ್ಕುದು; ಮತ್ತು

(ಸಿ) ಬೋಧಕ ಮತ್ತು ಇತರ ಸಿಬ್ಬಂದಿ ವರ್ಗದ ವಸತಿ, ನೇಮಕಾತಿ ಮತ್ತು ವ್ಯವಸ್ಥಾಪಕ ವರ್ಗವು ಒಪ್ಪಿಕೊಳ್ಳಬೇಕಾದ ಹಾಗೂ ಅನುಸರಿಸಬೇಕಾದ ನೀತಿ ಸಂಹಿತೆ, ಪೀಠೋಪಕರಣ ಮತ್ತು ಸಲಕರಣೆಗಳು,

ಪಠ್ಯಕ್ರಮ, ಪಠ್ಯಪುಸ್ತಕಗಳು ಇವುಗಳ ಬಗ್ಗೆ ನಿಯಮಿಸಬಹುದಾದಂಥ ಇತರ ಸಾಮಾನ್ಯ ಅಥವಾ ವಿಶೇಷ ಷರತ್ತುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳು.

(3) ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಾಗಿ ಅಥವಾ ಸಂದರ್ಭಾನುಸಾರ ಖಾಸಗಿ ಶಿಕ್ಷಣ ಸಂಸ್ಥೆಗಾಗಿ ಮನ್ನಣೆ ಪಡೆಯಲು ಬಯಸುವ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ವ್ಯವಸ್ಥಾಪಕ ವರ್ಗವು ನಿಯಮಿಸಬಹುದಾದಂಥ ವಿವರಗಳೊಂದಿಗೆ ಅಂಥ ರೀತಿಯಲ್ಲಿ ಮತ್ತು ಅಂಥ ಫೀಜಿನೊಂದಿಗೆ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕುದು.

(4) ಸಕ್ಷಮ ಪ್ರಾಧಿಕಾರವು, ಅರ್ಜಿಯು ನಿಯಮಗಳಿಗನುಸಾರವಾಗಿದೆಯೆಂಬ ಬಗ್ಗೆ ತಾನು ಮನದಟ್ಟು ಮಾಡಿಕೊಂಡ ತರುವಾಯ, (6)ರಿಂದ (8)ರ ವರೆಗಿನ ಉಪಪ್ರಕರಣಗಳಿಗೆ ಅನುಸಾರವಾಗಿ ಅರ್ಜಿಯನ್ನು ವಿಲೆ ಮಾಡಬಹುದು ಅಥವಾ ತಾನು ಸೂಕ್ತವೆಂದು ಭಾವಿಸಿದಲ್ಲಿ, 37ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ತಜ್ಞ ಮಂಡಳಿಯಿಂದ ವರದಿಯನ್ನು ಪಡೆದುಕೊಳ್ಳುವುದಕ್ಕಾಗಿ ಅದಕ್ಕೆ ಅರ್ಜಿಯನ್ನು ಕಳುಹಿಸಿಕೊಡಬಹುದು.

(5) ತಜ್ಞಮಂಡಲಿಯು, (4)ನೇ ಉಪಪ್ರಕರಣದ ಮೇರೆಗೆ ಕಳುಹಿಸಿಕೊಡಲಾದ ಅರ್ಜಿಯನ್ನು ಸ್ವೀಕರಿಸಿದ ಅನಂತರ ನಿಯಮಿಸಬಹುದಾದಂಥ ಸಮಯದೊಳಗೆ ತನ್ನ ವರದಿಯ ಜೊತೆಗೆ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಹಿಂತಿರುಗಿಸತಕ್ಕುದು.

(6) ಸಕ್ಷಮ ಪ್ರಾಧಿಕಾರವು ತಜ್ಞ ಮಂಡಲಿಯಿಂದ ಸ್ವೀಕರಿಸಿದ ವರದಿಯೇನಾದರೂ ಇದ್ದಲ್ಲಿ ಅದನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಪರಿವೀಕ್ಷಣೆ ಅಥವಾ ತನಿಖೆಯನ್ನು ನಡೆಸಿದ ತರುವಾಯ, ಲಿಖಿತ ಆದೇಶದ ಮೂಲಕ,-

(ಎ) ಅಂಥ ಸಂಸ್ಥೆಗಳಿಗೆ ಮನ್ನಣೆ ನೀಡಲು ಅನ್ವಯವಾಗುವ ಎಲ್ಲ ಷರತ್ತುಗಳನ್ನು ಈಡೇರಿಸಿದ್ದರೆ ಅದಕ್ಕೆ ಮನ್ನಣೆ ನೀಡತಕ್ಕುದು;

(ಬಿ) ಅಂಥ ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಅಥವಾ ವಿಸ್ತರಿಸಿದ ಅವಧಿಯೊಳಗೆ ಮನ್ನಣೆ ನೀಡಲು ಇರುವ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು, ತಾತ್ಕಾಲಿಕವಾಗಿ ಅನುಮೋದನೆ ನೀಡತಕ್ಕುದು:

ಪರಂತು, ಹಾಗೆ ತಾತ್ಕಾಲಿಕವಾಗಿ ಅನುಮೋದನೆ ನೀಡಿದ ಅವಧಿಯಲ್ಲಿ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳ ಯಾವುದೇ ಹೊಸ ತಂಡವನ್ನು ಸೇರಿಸಿಕೊಳ್ಳತಕ್ಕುದಲ್ಲ.

(7) (6)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಅವಧಿಯನ್ನು ನಿರ್ದಿಷ್ಟಪಡಿಸಿದ್ದರೆ ಅಥವಾ ವಿಸ್ತರಿಸಿದ್ದರೆ ಸಕ್ಷಮ ಪ್ರಾಧಿಕಾರವು, ಅಂಥ ಅವಧಿಯು ಮುಕ್ತಾಯವಾದ ತರುವಾಯ, ಕೂಡಲೇ 37ನೇ ಪ್ರಕರಣದ ಮೇರೆಗೆ ತಜ್ಞ ಮಂಡಲಿಯಿಂದ ವರದಿಯನ್ನು ಅಥವಾ ಹೆಚ್ಚಿನ ವರದಿಯನ್ನು ಪಡೆಯತಕ್ಕುದು; ಸಕ್ಷಮ ಪ್ರಾಧಿಕಾರವು ವರದಿ ಅಥವಾ ಹೆಚ್ಚಿನ ವರದಿ ಯಾವುದಾದರೂ ಇದ್ದಲ್ಲಿ ಅದನ್ನು ಪರ್ಯಾಲೋಚಸಿ ಅಗತ್ಯವೆಂದು ಭಾವಿಸಬಹುದಾದಂಥ ಪರಿಶೀಲನೆಯನ್ನು ಅಥವಾ ವಿಚಾರಣೆಯನ್ನು ನಡೆಸಿದ ತರುವಾಯ, ಮಾನ್ಯತೆ ನೀಡಿಕೆಗೆ ಅಂಥ ಸಂಸ್ಥೆಗಳಿಗೆ ಅನ್ವಯವಾಗಬಹುದಾದ ಎಲ್ಲ ಷರತ್ತುಗಳನ್ನು ಆ ಸಂಸ್ಥೆಗಳು ಈಡೇರಿಸಿದ್ದರೆ ಲಿಖಿತ ಆದೇಶದ ಮೂಲಕ ಮಾನ್ಯತೆ ನೀಡತಕ್ಕುದು ಅಥವಾ ಅಂಥ ಸಂಸ್ಥೆಗಳು ಅಂಥ ಷರತ್ತುಗಳನ್ನು ಈಡೇರಿಸದೇ ಇದ್ದರೆ ಕಾರಣಗಳನ್ನು ದಾಖಲು ಮಾಡಿ ಮಾನ್ಯತೆಯನ್ನು ನಿರಾಕರಿಸತಕ್ಕುದು:

ಪರಂತು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಆ ಮಾನ್ಯತೆಯನ್ನು ಹಾಗೆ ನಿರಾಕರಿಸತಕ್ಕುದಲ್ಲ.

(8) ಈ ಪ್ರಕರಣದ ಮೇರೆಗೆ ಮಾನ್ಯತೆಯನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಬಗ್ಗೆ ಮಾಡಿದ ಪ್ರತಿಯೊಂದು ಆದೇಶವನ್ನು, ನೋಂದಣಿ ಪ್ರಾಧಿಕಾರಕ್ಕೆ ಮತ್ತು ಅರ್ಜಿದಾರನಿಗೆ ತಿಳಿಸತಕ್ಕುದು.

**37. ತಜ್ಞ ಮಂಡಲಿ.–** ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಕೆಳಕಂಡ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಭಾವಿಸಬಹುದಾದಷ್ಟು ತಜ್ಞ ಮಂಡಲಿಗಳನ್ನು ರಚಿಸತಕ್ಕುದು:–

(ಎ) ಸ್ಥಳೀಯ ಪ್ರದೇಶದಲ್ಲಿನ ಜನರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಅಥವಾ ಅಂಥ ಬಗೆಯ ಶಿಕ್ಷಣವನ್ನು ಒದಗಿಸುವ ಅಗತ್ಯತೆಯನ್ನು ಪರಿಶೀಲಿಸುವುದು;

(ಬಿ) ಮಾನ್ಯತೆ ನೀಡಿಕೆಗೆ ಯಾವುದೇ ಸಂಸ್ಥೆಗೆ ಅನ್ವಯವಾಗತಕ್ಕ ವಿಶೇಷ ಷರತ್ತುಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಅಂಥ ಸಂಸ್ಥೆಯು ಈಡೇರಿಸಿದೆಯೇ ಇಲ್ಲವೇ ಎಂಬುದನ್ನು ಪರ್ಯಾಲೋಚಿಸುವುದು;

(ಸಿ) ಮಾನ್ಯತೆ ನೀಡಿಕೆಯ ಷರತ್ತುಗಳಲ್ಲಿ ಮಾರ್ಪಾಟುಗಳನ್ನು ಅಥವಾ ಬದಲಾವಣೆಗಳನ್ನು ಕಾಲಕಾಲಕ್ಕೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು; ಮತ್ತು

(ಡಿ) ರಾಜ್ಯ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರವು ಅದಕ್ಕೆ ಕಳುಹಿಸಿ ಕೊಡಬಹುದಾದಂಥ ಇತರ ವಿಷಯಗಳ ಮೇಲೆ ರಾಜ್ಯ ಸರ್ಕಾರಕ್ಕೆ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸುಗಳನ್ನು ಮಾಡುವುದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ತಜ್ಞ ಮಂಡಲಿಯು, ಸದರಿ ಪ್ರಕರಣದ ಮೇರೆಗೆ ನಿಯಮಿಸಲಾದ ನಿಯಮಗಳಿಗನುಸಾರವಾಗಿ, ಸಂದರ್ಭಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ತನ್ನ ವರದಿಯನ್ನು ಅಥವಾ ಹೆಚ್ಚಿನ ವರದಿಯನ್ನು ಸಲ್ಲಿಸತಕ್ಕುದು.

**38. ಹಾಲಿ ಇರುವ ಸಂಸ್ಥೆಗಳಿಗೆ ಮನ್ನಣೆ, ಇತ್ಯಾದಿ.–** (1) 36ನೇ ಪ್ರಕರಣದಲ್ಲಿ ಏನೇ ಇದ್ದರೂ,–

(ಎ) ರಾಜ್ಯ ಸರ್ಕಾರವು ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಯಾವುದೇ ಪ್ರಾಧಿಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ ಅಥವಾ ನಡೆಸುತ್ತಿರುವ ಮತ್ತು ನಿಯಮಿಸಬಹುದಾದ ಷರತ್ತುಗಳಿಗನುಸಾರವಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾದ ಶಿಕ್ಷಣ ಸಂಸ್ಥೆಗಳು ಈ ಅಧಿನಿಯಮದ ಮೇರೆಗೆ ಮಾನ್ಯತೆ ಪಡೆದಿರುವ ಶೈಕ್ಷಣಿಕ ಸಂಸ್ಥೆಗಳೆಂದು ಭಾವಿಸತಕ್ಕುದು.

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಶೈಕ್ಷಣಿಕ ಸಂಸ್ಥೆಗಳ ಹೊರತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಸ್ಥಾಪಿಸಲಾದ ಮತ್ತು ಮಾನ್ಯತೆ ಪಡೆದ ಹಾಗೂ ಶಿಕ್ಷಣ ನೀಡುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಆ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳನ್ನು ನಿಯಮಿಸಬಹುದಾದಂಥ ಅವಧಿಯೊಳಗಾಗಿ ಮತ್ತು ವಿಧಾನಕ್ಕನುಸಾರವಾಗಿ ಪಾಲಿಸಿದರೆ ಅವುಗಳನ್ನು ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ಮತ್ತು ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳೆಂದು ಭಾವಿಸತಕ್ಕುದು.

(2) ಈ ಅಧಿನಿಯಮವು ಪ್ರಾರಂಭವಾದ ದಿನದಂದು ಅಸ್ತಿತ್ವದಲ್ಲಿದ್ದ ಆದರೆ ಅಂಥ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಮಾನ್ಯತೆ ಪಡೆಯದೆ ಇದ್ದ ಶಿಕ್ಷಣ ನೀಡುತ್ತಿರುವ ಯಾವುದೇ ಖಾಸಗಿ ಶೈಕ್ಷಣಿಕ ಸಂಸ್ಥೆಯು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳಿಗನುಸಾರವಾಗಿ ಅಂಥ ಪ್ರಾರಂಭದ ದಿನದಿಂದ ಆರವತ್ತು ದಿನಗಳೊಳಗಾಗಿ ಮಾನ್ಯತೆಗಾಗಿ ಅರ್ಜಿಯನ್ನು ಸಲ್ಲಿಸಿದ್ದ ಹೊರತು ಅಂಥ ಪ್ರಾರಂಭದ ದಿನದಿಂದ ಶಿಕ್ಷಣ ನೀಡುವುದನ್ನು ನಿಲ್ಲಿಸತಕ್ಕುದು ಮತ್ತು ಅಂಥ ಪ್ರತಿಯೊಂದು ಅರ್ಜಿಯನ್ನು ಸಕ್ಷಮ ಪ್ರಾಧಿಕಾರ ವರ್ಗವು

ಅದನ್ನು ಸ್ವೀಕರಿಸಿದ ಅರವತ್ತು ದಿನಗಳೊಳಗಾಗಿ ವಿಲೆ ಮಾಡತಕ್ಕುದು ಮತ್ತು ಮಾನ್ಯತೆಗಾಗಿ ಸಲ್ಲಿಸಿರುವ ಅರ್ಜಿಯನ್ನು ನಿರಾಕರಿಸಿದ ತರುವಾಯ ಯಾವುದೇ ಅಂಥ ಸಂಸ್ಥೆಯನ್ನು ಯಾವ ವ್ಯಕ್ತಿಯೇ ಆಗಲೀ ನಡೆಸತಕ್ಕುದಲ್ಲ.

**39. ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದು.–** (1) ಯಾವುದೇ ಸ್ಥಳೀಯ ಪ್ರಾಧಿಕಾರವು, ಅಥವಾ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು,-

(ಎ) ಮಾನ್ಯತೆ ನೀಡಿಕೆಯ ಎಲ್ಲ ಅಥವಾ ಯಾವುದೇ ಷರತ್ತುಗಳನ್ನು ಪಾಲಿಸಲು ತಪ್ಪಿದಲ್ಲಿ ಅಥವಾ ಸ್ಥಳಾವಕಾಶ, ಸಲಕರಣೆ, ಪಠ್ಯಕ್ರಮ, ಪಠ್ಯಪುಸ್ತಕ, ಉಪಾಧ್ಯಾಯರ ನೇಮಕಾತಿ, ಶಿಕ್ಷೆ ಮತ್ತು ವಜಾ ಇವುಗಳಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರದ ಆದೇಶಗಳನ್ನು ಪಾಲಿಸಲು ತಪ್ಪಿದಲ್ಲಿ;

(ಬಿ) ಮತ, ಜನಾಂಗ, ಜಾತಿ, ಭಾಷೆ ಇವುಗಳ ಆಧಾರದ ಮೇಲೆ ಅಥವಾ ಇವುಗಳ ಪೈಕಿ ಯಾವೊಂದರ ಆಧಾರದ ಮೇಲೆ ಯಾವನೇ ನಾಗರೀಕನಿಗೆ ಪ್ರವೇಶ ನೀಡಲು ನಿರಾಕರಿಸಿದಲ್ಲಿ;

(ಸಿ) ಶಿಕ್ಷಣ ಸಂಸ್ಥೆಯಲ್ಲಿ, ಭಾರತದ ಯಾವುದೇ ನಾಗರೀಕ ವರ್ಗದ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವಂಥ ಅಥವಾ ಆ ವರ್ಗದ ಧರ್ಮಕ್ಕೆ ಅಥವಾ ಧಾರ್ಮಿಕ ನಂಬಿಕೆಗಳಿಗೆ ಅಪಮಾನ ಮಾಡುವಂಥ ಯಾವುದೇ ಪ್ರಚಾರಕ್ಕೆ ಅಥವಾ ಆಚರಣೆಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೋತ್ಸಾಹ ನೀಡಿದಲ್ಲಿ;

(ಡಿ) ಸೂಕ್ತ ವಿಚಾರಣೆಯ ತರುವಾಯ, ಸಕ್ಷಮ ಪ್ರಾಧಿಕಾರವು ಯಾವ ಉಪಾಧ್ಯಾಯನ ಪ್ರಮಾಣ ಪತ್ರವನ್ನು ರದ್ದುಪಡಿಸಿದೆಯೋ ಅಥವಾ ನಿಲಂಬನಗೊಳಿಸಿದೆಯೋ ಆ ಯಾರೇ ಉಪಾಧ್ಯಾಯನನ್ನು ನೇಮಿಸಿಕೊಂಡಲ್ಲಿ ಅಥವಾ ಅವನ ನೇಮಕವನ್ನು ಮುಂದುವರಿಸಿದಲ್ಲಿ ಅಥವಾ ಸೂಕ್ತ ವಿಚಾರಣೆಯ ತರುವಾಯ, ಸಕ್ಷಮ ಪ್ರಾಧಿಕಾರವು ಯಾವ ಉಪಾಧ್ಯಾಯನು ಉಪಾಧ್ಯಾಯನಾಗಿರಲು ಅಯೋಗ್ಯನೆಂದು ಅಥವಾ ಉಪಾಧ್ಯಾಯನಾಗಿರುವುದು ಅಪೇಕ್ಷಣೀಯವಲ್ಲವೆಂದು ಪರಿಗಣಿಸಿದೆಯೋ, ಆ ಉಪಾಧ್ಯಾಯನನ್ನು ನೇಮಿಸಿಕೊಂಡಲ್ಲಿ ಅಥವಾ ಅವನ ನೇಮಕವನ್ನು ಮುಂದುವರೆಸಿದಲ್ಲಿ ಅಥವಾ ಉಪಾಧ್ಯಾಯನನ್ನು ಯಾವುದೇ ಸಮಂಜಸ ಕಾರಣಗಳಿಲ್ಲದೆಯೇ ತೆಗೆದುಹಾಕಿದಲ್ಲಿ ಅಥವಾ ಈ ಸಂಬಂಧವಾಗಿ ಸಕ್ಷಮ ಪ್ರಾಧಿಕಾರವು ಮಾಡಿದ ಆದೇಶಗಳನ್ನು ಪಾಲಿಸಲು ತಪ್ಪಿದಲ್ಲಿ;

(ಇ) ಶಿಕ್ಷಣಕ್ಕೆ ಅಥವಾ ಸ್ಥಳಾವಕಾಶಕ್ಕೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಅಥವಾ ಆಡಳಿತಕ್ಕೆ ಅಥವಾ ಶಿಸ್ತುಪಾಲನೆಗೆ ಸಂಬಂಧಪಟ್ಟ ಲೋಪದೋಷಗಳನ್ನು, ಸಕ್ಷಮ ಪ್ರಾಧಿಕಾರವು ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಸರಿಪಡಿಸಲು ತಪ್ಪಿದಲ್ಲಿ;

(ಎಫ್) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ಆದೇಶಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ

–ಸಕ್ಷಮ ಪ್ರಾಧಿಕಾರವು, ಕಾರಣಗಳನ್ನು ದಾಖಲ್ಮಾಡಿ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರ ಆಡಳಿತ ಪರಿಷತ್ತಿಗೆ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದರ ಅಥವಾ ಯಾವುದೇ ಕ್ರಮ ತೆಗೆದುಕೊಳ್ಳುವುದರ ವಿರುದ್ಧ ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ತರುವಾಯ, ಸಂಸ್ಥೆಯ ಮಾನ್ಯತೆಯನ್ನು ಹಿಂತೆಗೆದುಕೊಳ್ಳಬಹುದು ಅಥವಾ ಅಗತ್ಯವೆಂದು ಭಾವಿಸಬಹುದಾದಂಥ ಕ್ರಮ ಕೈಗೊಳ್ಳಬಹುದು.

(2) ಯಾವುದೇ ಸ್ಥಳೀಯ ಪ್ರಾಧಿಕಾರದ ಸಂಸ್ಥೆಗೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಿರುವ ಮಾನ್ಯತೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸಂಸ್ಥೆಯ ಆಡಳಿತ ಪರಿಷತ್ತಿಗೆ ಯಾವುದೇ ಮನವಿಯನ್ನು ಸಲ್ಲಿಸಲು ಒಂದು ತಿಂಗಳ ನೋಟೀಸನ್ನು ಕೊಟ್ಟ ನಂತರ, ಸದರಿ ಸಂಸ್ಥೆಗೆ ಮಂಜೂರು ಮಾಡಿದ ಮಾನ್ಯತೆಯನ್ನು ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳಬಹುದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಮಾನ್ಯತೆ ಪಡೆಯದೆ ಇರುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಅಥವಾ ಆ ಅಧಿನಿಯಮದ ಮೇರೆಗೆ ಯಾವ ಸಂಸ್ಥೆಯ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗಿದೆಯೋ ಆ ಯಾವುದೇ ಶಿಕ್ಷಣ ಸಂಸ್ಥೆಗೆ ಕೆಳಕಂಡ ಹಕ್ಕುಗಳು ಇರತಕ್ಕುದಲ್ಲ:–

(ಎ) ರಾಜ್ಯ ನಿಧಿಯಿಂದ ಯಾವುದೇ ಸಹಾಯಾನುದಾನವನ್ನು ಅಥವಾ ಸರ್ಕಾರದಿಂದ ಇತರ ಅರ್ಥಿಕ ನೆರವನ್ನು ಅಥವಾ ಇತರೆ ಸೌಲಭ್ಯಗಳನ್ನು ಪಡೆಯುವುದು;

(ಬಿ) ನಾನಾ ವ್ಯಾಸಂಗ ಕ್ರಮಗಳಲ್ಲಿ ವಿಶ್ವವಿದ್ಯಾನಿಲಯವು ಅಥವಾ ಸರ್ಕಾರವು ನಡೆಸುವ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಕಳುಹಿಸುವುದು ಅಥವಾ ಹಾಜರುಪಡಿಸುವುದು.

## ಅಧ್ಯಾಯ–VII

## ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಮೊದಲಾದವುಗಳ ವ್ಯವಸ್ಥಾಪಕ ವರ್ಗ

**40. ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯಗಳು.–** (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಥವಾ ಆದೇಶಗಳ ಎಲ್ಲ ಉಪಬಂಧಗಳನ್ನು ಪಾಲಿಸುವುದು ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯವಾಗಿರತಕ್ಕುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,–

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಳೀಯ ಪ್ರಾಧಿಕಾರವು ಸಂಗ್ರಹಿಸಿದ ಅಥವಾ ಅದಕ್ಕೆ ನೀಡಲಾದ ಅಥವಾ ಹಂಚಿಕೆ ಮಾಡಲಾದ ಎಲ್ಲ ಹಣವನ್ನು, ಶೈಕ್ಷಣಿಕ ಉದ್ದೇಶಗಳಿಗಾಗಿ ಖರ್ಚು ಮಾಡುವಂತೆ ನೋಡಿಕೊಳ್ಳುವುದು; ಮತ್ತು

(ಬಿ) ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಮತ್ತು ಅಂಥ ದಿನಾಂಕಕ್ಕೆ ಮುಂಚಿತವಾಗಿ ಪ್ರತಿ ವರ್ಷವೂ ಸ್ಥಳೀಯ ಪ್ರಾಧಿಕಾರ ಸಂಸ್ಥೆಯ ಆಡಳಿತಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ವಾರ್ಷಿಕ ಆಯವ್ಯಯ ಅಂದಾಜನ್ನು ಒಪ್ಪಿಸುವುದು

–ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯವಾಗಿರತಕ್ಕುದು.

**41. ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪನೆ.–** ರಾಜ್ಯ ಸರ್ಕಾರವು, ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಲುವಾಗಿ ಪೂರ್ವ ಪ್ರಕಟಣೆಯ ತರುವಾಯ ರಚಿಸಬಹುದಾದ ನಿಯಮಗಳ ಅನುಸಾರವಾಗಿ ಹೊರತು ಅಂಥ ಯಾವುವೇ ಸಂಸ್ಥೆಗಳನ್ನು ವ್ಯವಸ್ಥಾಪನೆ ಮಾಡತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ನಿಯಮಗಳಲ್ಲಿ, ಇತರ ವಿಷಯಗಳ ಜೊತೆಗೆ ಈ ಕೆಳಕಂಡವುಗಳೂ ಒಳಗೊಂಡಿರಬಹುದು:–

(ಎ) ಬೋಧಕ ಮತ್ತು ಬೋಧಕೇತರ ನೌಕರರ ಹುದ್ದೆಗಳಿಗೆ ಅರ್ಹತೆಗಳು;

(ಬಿ) ಬೋಧಕ ಮತ್ತು ಬೋಧಕೇತರ ನೌಕರರ ನೌಕರಿ ಭರ್ತಿ ವಿಧಾನ;

(ಸಿ) ನಿಗದಿಪಡಿಸಲಾದ ವೇತನ ಶ್ರೇಣಿ ಮತ್ತು ಭತ್ಯ;

(ಡಿ) ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ, ಜೀವವಿಮೆ ಮತ್ತು ಅಂಥ ಇತರ ಸೌಲಭ್ಯಗಳು;

(ಇ) ನೌಕರರಲ್ಲಿ ಶಿಸ್ತನ್ನು ಪಾಲಿಸುವುದು ಮತ್ತು ಅದನ್ನು ಅವರಲ್ಲಿ ಜಾರಿಗೊಳಿಸುವುದು;

(ಎಫ್) ವ್ಯವಸ್ಥಾಪಕ ವರ್ಗದ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳು;

(ಜಿ) ಕಾರ್ಯದರ್ಶಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು; ಮತ್ತು

(ಎಚ್) ದಾಖಲೆಗಳನ್ನು, ಲೆಕ್ಕಪತ್ರಗಳನ್ನು ಮತ್ತು ಇತರ ವರದಿಗಳ ನಿರ್ವಹಣೆ ಮತ್ತು ಅವುಗಳನ್ನು ನಿರ್ದಿಷ್ಟ ಪ್ರಾಧಿಕಾರಕ್ಕೆ ಒಪ್ಪಿಸುವುದು.

(3) ಮನ್ನಣೆ ಪಡೆಯಲಾದ ಪ್ರತಿಯೊಂದು ಶಿಕ್ಷಣ ಸಂಸ್ಥೆಯು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ಭರ್ತಿ ಮಾಡುವಾಗ, ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳಿಗೆ ಹಾಗೂ ಇತರ ಹಿಂದುಳಿದ ನಾಗರೀಕ ವರ್ಗಗಳಿಗೆ ಹಾಗೂ ದುರ್ಬಲ ವರ್ಗಗಳ ಜನರಿಗೆ ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕುದು.

(4) ನಿಯಮಿಸಿರುವ ನಿಯಮಗಳಿಗನುಸಾರವಾಗಿ ಆಡಳಿತ ಪರಿಷತ್ತು, ಸಂಸ್ಥೆಯ ಮುಖ್ಯಸ್ಥರನ್ನು ನೇಮಕ ಮಾಡುವ ಮತ್ತು ಅವನ ವಿರುದ್ಧ ಶಿಸ್ತು ಕ್ರಮವನ್ನು ಕೈಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕುದು.

(5) ಸಂಸ್ಥೆಯ ಆಡಳಿತ ಪರಿಷತ್ತಿನಲ್ಲಿ, ಯಾವುದಾದರೂ ಬದಲಾವಣೆಯಾದಲ್ಲಿ ಅಥವಾ ಸಂಸ್ಥಯು ಇರುವ ಸ್ಥಳವು ಬದಲಾದಲ್ಲಿ, ಅದು, ತಾನು ಹೊಸದಾಗಿ ಪ್ರಾರಂಭವಾದ ಸಂಸ್ಥೆ ಎಂಬಂತೆ ಮಾನ್ಯತೆ ಪಡೆಯುವ ಸಲುವಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕುದು.

**42. ವ್ಯವಸ್ಥಾಪಕ ಸಮಿತಿ.–** ಮಾನ್ಯತೆ ಪಡೆದ ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಒಂದು ವ್ಯವಸ್ಥಾಪಕ ಸಮಿತಿಯು ಇರತಕ್ಕುದು. ಅದನ್ನು ಯಾವುದೇ ಹೆಸರಿನಿಂದ ಕರೆಯಬಹುದು.

(2) ವ್ಯವಸ್ಥಾಪಕ ಸಮಿತಿಯನ್ನು ಎರಡು ವರ್ಷಗಳಿಗೊಮ್ಮೆ ಪುನರ್‌ರಚಿಸತಕ್ಕುದು.

(3) ವ್ಯವಸ್ಥಾಪಕ ಸಮಿತಿಯಲ್ಲಿ ಆಡಳಿತ ಪರಿಷತ್ತು ನಾಮನಿರ್ದೇಶಿಸಿದ ಹನ್ನೊಂದಕ್ಕೆ ಕಡಿಮೆ ಇಲ್ಲದಷ್ಟು ಮತ್ತು ಹದಿನೈದಕ್ಕೆ ಹೆಚ್ಚಿಲ್ಲದಷ್ಟು ಸದಸ್ಯರು ಇರತಕ್ಕುದು. ಅವರ ಪೈಕಿ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥ ಮತ್ತು ಬೋಧಕರ ಸಿಬ್ಬಂದಿಯ ಇಬ್ಬರು ಸದಸ್ಯರು ಹೀಗೆ ಮೂವರಿಗಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಆ ಸಂಸ್ಥೆಯ ಬೋಧಕರ ಪ್ರತಿನಿಧಿಗಳಾಗಿರತಕ್ಕುದು ಮತ್ತು ಕೊನೇ ಪಕ್ಷ ಇಬ್ಬರು ಇತರ ಸದಸ್ಯರು ಗೊತ್ತುಪಡಿಸಲಾದ ನಿಯಮಗಳಿಗನುಸಾರವಾಗಿ ಆಯ್ಕೆಯಾದ ತಂದೆತಾಯಿಯರ ಪ್ರತಿನಿಧಿಗಳಾಗಿರತಕ್ಕುದು:

ಪರಂತು,–

(ಎ) ಬೋಧಕ ಸಿಬ್ಬಂದಿಯ ಅಂಥ ಸದಸ್ಯರನ್ನು ಸರದಿಯ ಮೂಲಕ ಜ್ಯೇಷ್ಠತೆಗನುಸಾರವಾಗಿ, ಪ್ರತಿ ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶನ ಮಾಡತಕ್ಕುದು; ಮತ್ತು

(ಬಿ) ಆ ವಿದ್ಯಾ ಸಂಸ್ಥೆಯಲ್ಲಿ ಮೂವರಿಗಿಂತ ಕಡಿಮೆ ಬೋಧಕ ಸಿಬ್ಬಂದಿಯಿದ್ದಲ್ಲಿ ಅವರೆಲ್ಲರೂ ಬೋಧಕರ ಪ್ರತಿನಿಧಿಗಳಾಗಿರತಕ್ಕುದು:

ಮತ್ತೂ ಪರಂತು, ಹತ್ತಿರದ ಸಂಬಂಧಿಗಳಾಗಿರುವ ಇಬ್ಬರಿಗಿಂತ ಹೆಚ್ಚಿಲ್ಲದ ವ್ಯಕ್ತಿಗಳನ್ನು ವ್ಯವಸ್ಥಾಪಕ ಸಮಿತಿಯ ಸದಸ್ಯರಾಗಿ ನಾಮ ನಿರ್ದೇಶನ ಮಾಡತಕ್ಕುದಲ್ಲ. ಈ ಪರಂತುಕದ ಉದ್ದೇಶಕ್ಕಾಗಿ, ಹತ್ತಿರದ ಸಂಬಂಧಿಗಳು ಎಂದರೆ, ಗಂಡ ಹೆಂಡತಿ, ತಂದೆ ತಾಯಿ, ಮಕ್ಕಳು, ಅಣ್ಣ–ತಮ್ಮ, ಅಕ್ಕ–ತಂಗಿ, ಭಾವ, ಮೈದುನ, ಅತ್ತಿಗೆ, ನಾದಿನಿ, ಅಳಿಯ–ಸೊಸೆ, ಅತ್ತೆ–ಮಾವ, ಚಿಕ್ಕಪ್ಪ–ದೊಡ್ಡಪ್ಪ, ಸೋದರ ಅತ್ತೆ, ಸೋದರ ಮಾವ ಮತ್ತು ಚಿಕ್ಕಮ್ಮ–ದೊಡ್ಡಮ್ಮ, ಸೋದರನ ಅಥವಾ ಸೋದರಿಯ ಮಗ ಅಥವಾ ಮಗಳು ಎಂದು ಅರ್ಥ.

**ವಿವರಣೆ.–** ಈ ಉಪಪ್ರಕರಣದಲ್ಲಿ ಸೂಚಿಸಲಾಗಿರುವಷ್ಟು ಸದಸ್ಯರಲ್ಲದೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿರುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗದ, ಭಾರತದ ವೈದ್ಯಕೀಯ ಪರಿಷತ್ತಿನ, ಅಖಿಲ ಭಾರತ ತಾಂತ್ರಿಕ

ಶಿಕ್ಷಣ ಪರಿಷತ್ತಿನ, ರಾಜ್ಯ ಸರ್ಕಾರದ ಅಥವಾ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳೂ ಯಾರಾದರೂ ಇದ್ದರೆ, ಅವರೂ ಸಹ ಇರತಕ್ಕುದು.

(4) (1)ರಿಂದ (3)ರ ವರೆಗಿನ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಧರ್ಮಾರ್ಥ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಮತ್ತು ದತ್ತಿ ಮತ್ತು ವಕ್ಫ್ ಇವುಗಳಿಗೆ ಸಂಬಂಧಿಸಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ರಚಿಸಲಾದ ಅಥವಾ ನೇಮಕವಾದ, ನ್ಯಾಸಧಾರಿ ಮಂಡಲಿ ಅಥವಾ ಆಡಳಿತ ಮಂಡಲಿ ಅಥವಾ ವಕ್ಫ್ ಮಂಡಲಿ ಯಾವುದೇ ಹೆಸರಿನಿಂದ ಕರೆಯಲಾಗುವ ಅವುಗಳನ್ನು ಈ ಉಪಪ್ರಕರಣದ ಮೇರೆಗೆ ರಚಿಸಲಾದ ವ್ಯವಸ್ಥಾಪಕ ಸಮಿತಿಯೆಂದು ಭಾವಿಸತಕ್ಕುದು.

**43. ಅಧ್ಯಕ್ಷ ಮತ್ತು ಕಾರ್ಯದರ್ಶಿ.–** (1) ಪ್ರತಿಯೊಂದು ವ್ಯವಸ್ಥಾಪಕ ಸಮಿತಿಗೂ, ಅದರ ಸದಸ್ಯರ ಪೈಕಿ ನೇಮಕವಾದ ಒಬ್ಬ ಅಧ್ಯಕ್ಷ ಮತ್ತು ಕಾರ್ಯದರ್ಶಿ ಇರತಕ್ಕುದು:

ಪರಂತು, ಖಾಸಗಿ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ಮುಖ್ಯಸ್ಥನ ಹೊರತು ಇತರ ಯಾವನೇ ನೌಕರನನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡತಕ್ಕುದಲ್ಲ:

ಮತ್ತೂ ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಕಾರ್ಯದರ್ಶಿಯ ಅಧಿಕಾರವನ್ನು ಚಲಾಯಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಸಂಸ್ಥೆಯ ಕಾರ್ಯದರ್ಶಿಯೆಂದು ಭಾವಿಸತಕ್ಕುದು.

(2) ಕಾರ್ಯದರ್ಶಿಯು, ವ್ಯವಸ್ಥಾಪಕ ಸಮಿತಿಯ ಸಾಮಾನ್ಯ ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೊಳಪಟ್ಟು, ಖಾಸಗಿ ಶಿಕ್ಷಣ ಸಂಸ್ಥೆಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ ಆ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕುದು ಮತ್ತು ಆ ಶಿಕ್ಷಣ ಸಂಸ್ಥೆಯ ಎಲ್ಲ ವ್ಯವಹಾರಗಳ ಸಂಬಂಧದಲ್ಲಿ ಕಾರ್ಯದರ್ಶಿಯು ಮಾಡಿದ ಎಲ್ಲ ಕೃತ್ಯಗಳಿಗೆ ಆಡಳಿತ ಮಂಡಳಿಯು ಬದ್ಧವಾಗಿರತಕ್ಕುದು, ಪರಂತು, ಆಡಳಿತ ಮಂಡಳಿಯು, ಕಾರ್ಯದರ್ಶಿಯ ಮೇಲೆ ಹೇಳಿದ ಕೃತ್ಯಗಳನ್ನು ಮಾಡಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅವುಗಳನ್ನು ಮಾರ್ಪಾಟು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(3) ಕಾರ್ಯದರ್ಶಿಯು, ಅದರ ಎಲ್ಲ ಸ್ವತ್ತು ಮತ್ತು ದಾಖಲೆಗಳ ಅಭಿರಕ್ಷಕರಾಗಿರತಕ್ಕುದು ಮತ್ತು ಅವುಗಳ ಯುಕ್ತ ಅಭಿರಕ್ಷೆ, ನಿರ್ವಹಣೆ ಮತ್ತು ರಕ್ಷಣೆಗೆ ಜವಾಬ್ದಾರನಾಗಿರತಕ್ಕುದು. ನಿಯಮಿಸಬಹುದಾದಂತಹ ಇತರ ಅಧಿಕಾರಗಳನ್ನು ಅವನು ಚಲಾಯಿಸತಕ್ಕುದು ಮತ್ತು ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕುದು.

**44. ಕಾರ್ಯದರ್ಶಿಯನ್ನು ತೆಗೆದುಹಾಕುವುದು.–** 43ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಾರ್ಯದರ್ಶಿಯು, ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗನುಸಾರವಾಗಿ ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ನಿರ್ವಹಿಸುತ್ತಿಲ್ಲವೆಂದು ಯಾವುದೇ ಕಾಲದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಮನದಟ್ಟಾದರೆ, ಆ ಕಾರ್ಯದರ್ಶಿಯ ಬದಲಾಗಿ ಬೇರೊಬ್ಬ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಬೇಕೆಂದು ಆಡಳಿತ ಮಂಡಳಿಗೆ ನಿರ್ದೇಶಿಸಬಹುದು. ಆಡಳಿತ ಮಂಡಳಿಯು, ಸದರಿ ನಿರ್ದೇಶನವನ್ನು ಪಾಲಿಸಲು ಬದ್ಧವಾಗಿರತಕ್ಕುದು.

**45. ಸಭೆ ಇತ್ಯಾದಿಗಳು.–** ನಿಯಮಿಸಬಹುದಾದಷ್ಟು ಸಭೆಗಳನ್ನು, ನಿಯಮಿಸಬಹುದಾದಂಥ ಸ್ಥಳದಲ್ಲಿ ವ್ಯವಸ್ಥಾಪಕ ಸಮಿತಿಯು ನಡೆಸತಕ್ಕುದು ಮತ್ತು ಅದರ ಸಭೆಗಳಲ್ಲಿ (ಸಭೆಗಳಲ್ಲಿ ಕೋರಂ ಸೇರಿದಂತೆ) ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಅದು ಪಾಲಿಸತಕ್ಕುದು:

ಪರಂತು, ವ್ಯವಸ್ಥಾಪಕ ಸಮಿತಿಯು ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮ ಸಭೆ ಸೇರತಕ್ಕುದು.

(2) ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡಿದ ಯಾವನೇ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದು.

(3) ಸಭೆಯ ಮುಂದೆ ಬರುವ ಎಲ್ಲ ವಿಷಯಗಳನ್ನು ಸಭೆಯಲ್ಲಿ ಹಾಜರಿದ್ದು, ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕುದು ಹಾಗೂ ಸಮಾನ ಮತಗಳು ಬಂದ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಚಲಾಯಿಸುವ ಹಕ್ಕನ್ನು ಹೊಂದಿರತಕ್ಕುದು.

**46. ವ್ಯವಸ್ಥಾಪಕ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ನಿಯಮಿಸಲಾದ ನಿಯಮಗಳ ಉಪಬಂಧಗಳಿಗೊಳಪಟ್ಟು, ವ್ಯವಸ್ಥಾಪಕ ಸಮಿತಿಯು ಕೆಳಕಂಡ ಅಧಿಕಾರಗಳನ್ನು ಹಾಗೂ ಪ್ರಕಾರ್ಯಗಳನ್ನು ಹೊಂದಿರತಕ್ಕುದು, ಎಂದರೆ:–

(ಎ) ಖಾಸಗಿ ಶಿಕ್ಷಣ ಸಂಸ್ಥೆಯ ಸಾಮಾನ್ಯ ಆಡಳಿತವನ್ನು ನಿರ್ವಹಿಸುವುದು;

(ಬಿ) ಖಾಸಗಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥನನ್ನು ಬಿಟ್ಟು, ಶಿಕ್ಷಕರನ್ನು ಹಾಗೂ ಇತರ ನೌಕರರನ್ನು ನೇಮಿಸುವುದು;

(ಸಿ) ಸಂಸ್ಥೆಯ ಮುಖ್ಯಸ್ಥನನ್ನು ಬಿಟ್ಟು, ಶಿಕ್ಷಕರ ಹಾಗೂ ಇತರ ನೌಕರರ ಮೇಲೆ ಶಿಸ್ತು ಕ್ರಮವನ್ನು ಕೈಗೊಳ್ಳುವುದು;

(ಡಿ) ಸಂಸ್ಥೆಯ ನೌಕರರನ್ನು ಮೇಲ್ವಿಚಾರಣೆ ಮಾಡುವುದು ಹಾಗೂ ಅವರನ್ನು ನಿಯಂತ್ರಿಸುವುದು; ಮತ್ತು

(ಈ) ಗೊತ್ತುಪಡಿಸಬಹುದಾದಂಥ ಇತರ ಯಾವುದೇ ವಿಷಯ.

(2) ವ್ಯವಸ್ಥಾಪಕ ಸಮಿತಿಯು ಕೈಗೊಂಡ ಯಾವುದೇ ತೀರ್ಮಾನವನ್ನು ಅಥವಾ ಕ್ರಮವನ್ನು, ಅದನ್ನು ಹಾಗೆ ಕೈಗೊಂಡ ದಿನದಿಂದ ಹದಿನೈದು ದಿನಗಳೊಳಗಾಗಿ ಕಾರ್ಯದರ್ಶಿಯು ಆಡಳಿತ ಪರಿಷತ್ತಿಗೆ ತಿಳಿಸತಕ್ಕುದು. ಹಾಗೆ ಕೈಗೊಂಡ ತೀರ್ಮಾನ ಅಥವಾ ಕ್ರಮವನ್ನು ತನಗೆ ತಿಳಿಸಿದ ಇಪ್ಪತ್ತೊಂದು ದಿನಗಳೊಳಗೆ ಆಡಳಿತ ಪರಿಷತ್ತು ಅದನ್ನು ರದ್ದುಪಡಿಸಿದ ಅಥವಾ ಮಾರ್ಪಾಟು ಮಾಡಿದ ಹೊರತು, ಅದನ್ನು ಆಡಳಿತ ಪರಿಷತ್ತೇ ಕೈಗೊಂಡ ತೀರ್ಮಾನ ಅಥವಾ ಕ್ರಮವೆಂದು ಭಾವಿಸತಕ್ಕುದು.

## ಅಧ್ಯಾಯ-VIII

### ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ, ಫೀಜುಗಳ ಶ್ರೇಣಿಗಳು, ಇತ್ಯಾದಿ

**47. ಪ್ರವೇಶ, ಇತ್ಯಾದಿ ನಿಮಯಗಳಿಗನುಸಾರವಾಗಿರಬೇಕು.–** ಮನ್ನಣೆ ಪಡೆದ ಒಂದು ಶಿಕ್ಷಣ ಸಂಸ್ಥೆಗೆ ಸೇರಿಸಿಕೊಳ್ಳತಕ್ಕ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯೂ ಸೇರಿದಂತೆ ಆ ಸಂಸ್ಥೆಗೆ ವಿದ್ಯಾರ್ಥಿಗಳ ಪ್ರವೇಶ, ವರ್ಗಾವಣೆ, ವಲಸೆ ಮತ್ತು ತೆಗೆದುಹಾಕುವಿಕೆ-ಇವು ನಿಯಮಿಸಬಹುದಾದ ನಿಯಮಗಳಿಗನುಸಾರವಾಗಿರತಕ್ಕುದು.

**48. ಫೀಜು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೊಳಪಟ್ಟು ನಿಯಮಿಸಬಹುದಾದಂಥ ಯಾವುದೇ ಫೀಜನ್ನು ಅಥವಾ ಚಾರ್ಜುಗಳನ್ನು ಅಥವಾ ದೇಣಿಗೆಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಸಂದಾಯಗಳನ್ನು ನಿಯಮಿಸಬಹುದಾದಂಥ ದರದಲ್ಲಿ ಮತ್ತು ರೀತಿಯಲ್ಲಲ್ಲದೆ, ಮನ್ನಣೆ ಪಡೆದ ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು ಅವುಗಳನ್ನು ವಿಧಿಸತಕ್ಕುದಲ್ಲ ಹಾಗೂ ವಸೂಲ್ಮಾಡತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ಹಾಗೂ ವಸೂಲ್ಮಾಡಲಾದ ಮೊಬಲಗನ್ನು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಶಿಕ್ಷಣ ಸಂಸ್ಥೆಯು ಉಪಯೋಗಿಸಿಕೊಳ್ಳತಕ್ಕುದು.

## ಅಧ್ಯಾಯ-IX

### ಸಹಾಯಾನುದಾನಗಳು

**49. ಸರ್ಕಾರವು ಮನ್ನಣೆ ಪಡೆದ ಕೆಲವು ಸಂಸ್ಥೆಗಳಿಗೆ ಸಹಾಯಾನುದಾನ ನೀಡಲು ಮೊತ್ತವನ್ನು ಮೀಸಲಿಡುವುದು.–** (1) ರಾಜ್ಯ ಸರ್ಕಾರವು ಅನುದಾನ ನೀಡುವ ಉದ್ದೇಶಕ್ಕಾಗಿ ಈ ಸಂಬಂಧದಲ್ಲಿ ರಚಿಸಿದ ನಿಯಮಗಳಿಗನುಸಾರ ಮನ್ನಣೆ ಪಡೆದ, ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರದ ಶಿಕ್ಷಣ ಸಂಸ್ಥೆಗಳಿಗೆ ಹಾಗೂ ಖಾಸಗಿ ಸಂಸ್ಥೆಗಳಿಗೆ ಸಹಾಯಾನುದಾನವನ್ನು ತನ್ನ ಆರ್ಥಿಕ ಸಾಮರ್ಥ್ಯದ ಪರಿಮಿತಿಗಳೊಳಗೆ ನೀಡಲು (ಈ ಅಧಿನಿಯಮದಲ್ಲಿ ಇನ್ನು ಮುಂದೆ ಅನುದಾನ ಎಂದು ಉಲ್ಲೇಖಿಸಲಾಗಿದೆ) ಪ್ರತಿ ವರ್ಷವೂ ಹಣವನ್ನು ಮೀಸಲಿಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಹಾಗೂ ಯಾವುದೇ ಹಿಂದುಳಿದ ವರ್ಗಗಳು - ಇವುಗಳಿಗಾಗಿ ನೇಮಕಾತಿಯಲ್ಲಿ ಅಥವಾ ಹುದ್ದೆಗಳ ಮೀಸಲಾತಿ ಸಲುವಾಗಿ ಮಾಡಿದ ಯಾವುದೇ ಉಪಬಂಧವನ್ನು ಅಂಥ ಶಿಕ್ಷಣ ಸಂಸ್ಥೆಗಳ ಯಾವುದೇ ವರ್ಗಕ್ಕೆ ಅಥವಾ ವರ್ಗಗಳಿಗೆ ಅನ್ವಯಿಸುವಲ್ಲಿ ರಾಜ್ಯ ಸರ್ಕಾರವು ಮಾಡಬಹುದಾದಂಥ ಮಾರ್ಪಾಡಿಗೊಳಪಟ್ಟು ಅಂಥ ಉಪಬಂಧವನ್ನು ಪಾಲಿಸಬೇಕೆಂದು ಸಹ ಅನುದಾನವನ್ನು ಪಡೆಯುವ ಸಂಸ್ಥೆಗಳನ್ನು ಅಗತ್ಯಪಡಿಸಬಹುದು.

**50. ಅನುದಾನವನ್ನು ಮಂಜೂರ್ಮಾಡಬಹುದಾದ ಪ್ರಾಧಿಕಾರಗಳು.–** (1) ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಯೋಚಿಸುವಂಥ ಸಂದರ್ಭಗಳಲ್ಲಿ, ಆದೇಶದ ಮೂಲಕ, ಮನ್ನಣೆ ಪಡೆದ ಯಾವುದೇ ಸ್ಥಳೀಯ ಪ್ರಾಧಿಕಾರದ ಶಿಕ್ಷಣ ಸಂಸ್ಥೆಗೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗೆ, ಅಂಥ ಅನುದಾನಕ್ಕೆ ಸಂಬಂಧಿಸಿದ ಆ ಆದೇಶದಲ್ಲಿ ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಅನುದಾನವನ್ನು ಮಂಜೂರ್ಮಾಡಬಹುದು.

(2) ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮೀಷನರನು ಅಥವಾ ನಿರ್ದೇಶಕನು ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ

ಅಧಿಕೃತಗೊಳಿಸಬಹುದಾದಂಥ ಕಮೀಷನರನಿಗೆ ಅಥವಾ ನಿರ್ದೇಶಕನಿಗೆ ಅಧೀನವಾಗಿರುವಂಥ ಇತರ ಅಧಿಕಾರಿಯು (1)ನೇ ಉಪಪ್ರಕರಣದ ಮೇರೆಗೆ ಮಂಜೂರ್ಮಾಡಿದ ಪ್ರತಿಯೊಂದು ಅನುದಾನವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ವಿತರಣೆ ಮಾಡತಕ್ಕುದು.

(3) ರಾಜ್ಯ ನಿಧಿಗಳಿಂದ ಅನುದಾನ ಪಡೆಯುತ್ತಿರುವ ಮನ್ನಣೆ ಪಡೆದ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು, ಯಾವ ಷರತ್ತುಗಳಿಗೊಳಪಟ್ಟು ಅಂಥ ಅನುದಾನವನ್ನು ನೀಡಲಾಗಿದೆಯೋ ಆ ಎಲ್ಲ ಷರತ್ತುಗಳನ್ನು ಪಾಲಿಸಲು ಹೊಣೆಯಾಗಿರತಕ್ಕುದು.

**51. ಅನುದಾನದ ಹೊರತು, ಇತರ ಮೂಲಗಳಿಂದ ಸ್ವೀಕರಿಸಿದ ಹಣ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ದಾನಿಗಳು ಸ್ವಇಚ್ಛೆಯಿಂದ ದೇಣಿಗೆಯ ರೂಪದಲ್ಲಿ ನೀಡಿದ ಯಾವುದೇ ಹಣವನ್ನು ಸಂಸ್ಥೆಯು ಅಥವಾ ಆಡಳಿತ ಪರಿಷತ್ತು ಸ್ವೀಕರಿಸಬಹುದು ಮತ್ತು ಆ ಸಂಗತಿಯನ್ನು ಹಾಗೆ ಸ್ವೀಕರಿಸಿದ ದಿನದಿಂದ ತೊಂಬತ್ತು ದಿನಗಳೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸತಕ್ಕುದು. ಅಂಥ ಹಣವನ್ನು ರಾಜ್ಯ ಸರ್ಕಾರವು ಅನುಮೋದಿಸಬಹುದಾದ ರಾಷ್ಟ್ರೀಕೃತ ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಆ ಸಂಸ್ಥೆಯ ಖಾತೆಯಲ್ಲಿ ಠೇವಣಿಯಿಡತಕ್ಕುದು ಮತ್ತು ಆ ಸಂಸ್ಥೆಯ ಸುಧಾರಣೆಗಾಗಿ ಹಾಗೂ ಶೈಕ್ಷಣಿಕ ಸೌಲಭ್ಯಗಳ ಅಭಿವೃದ್ಧಿಗಾಗಿ ಮತ್ತು ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ಆ ಹಣವನ್ನು ಉಪಯೋಗಿಸಿ ಖರ್ಚು ಮಾಡತಕ್ಕುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೊಳಪಟ್ಟು, ಯಾವುದೇ ಶೈಕ್ಷಣಿಕ ಸಂಸ್ಥೆಯು ಯಾವನೇ ವ್ಯಕ್ತಿಗೆ ಆ ಸಂಸ್ಥೆಯಲ್ಲಿ ಪ್ರವೇಶ ನೀಡುವುದಕ್ಕೆ ಮುಂಚೆ, ನೀಡುವಾಗ ಅಥವಾ ನೀಡಿದ ನಂತರ, ಅಂಥ ಪ್ರವೇಶಕ್ಕೆ ಪೂರ್ವಭಾವೀ ಷರತ್ತಾಗಿ ನಿಯಮಿಸಲಾದ ಫೀಜನ್ನಲ್ಲದೆ, ಯಾವುದೇ ಹಣವನ್ನು ವಸೂಲ್ಮಾಡತಕ್ಕುದಲ್ಲ.

**52. ಅನುದಾನದ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವುದು ಹಾಗೂ ಅಂಥ ಮಂಜೂರಾತಿಯ ನಂತರ ಪಾಲಿಸಬೇಕಾದ ಷರತ್ತುಗಳು.–** ಅನುದಾನದ ಮಂಜೂರಾತಿಗಾಗಿ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕುದು ಹಾಗೂ ಮನ್ನಣೆ ಮತ್ತು ಅನುದಾನದ ಷರತ್ತುಗಳನ್ನು ಪೂರ್ಣವಾಗಿ ಪಾಲಿಸಲಾಗುತ್ತಿದೆಯೆಂದು ಹಾಗೂ ಪಾಲಿಸಿಕೊಂಡು ಬರಲಾಗುವುದೆಂದು, ಆ ಸಂಸ್ಥೆಯನ್ನು, ಅದರ ಲೆಕ್ಕಪತ್ರಗಳನ್ನು, ರಿಜಿಸ್ಟರುಗಳನ್ನು ಮತ್ತು ಅನುದಾನಕ್ಕೆ ಸಂಬಂಧಿಸಿದ ಇತರ ದಾಖಲೆಗಳನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಪ್ರತಿನಿಯೋಜಿಸಲಾಗಿರುವ ಪರಿಶೀಲನಾ ಸಿಬ್ಬಂದಿಗೆ ಎಲ್ಲ ಸೌಲಭ್ಯಗಳನ್ನು ನೀಡಲಾಗುವುದೆಂದು ಮತ್ತು ಈ ಸಂಬಂಧದಲ್ಲಿ ನಿಯಮಿಸಲಾದ ಎಲ್ಲ ವಿವರ ಪತ್ರಗಳನ್ನು ಮತ್ತು ವರದಿಗಳನ್ನು ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದಕ್ಕೆ ಸಲ್ಲಿಸಲಾಗುವುದೆಂದು ಮನ್ನಣೆ ಪಡೆದ ಆ ಸಂಸ್ಥೆಯ ಆಡಳಿತ ಪರಿಷತ್ತು ಸಹಿ ಮಾಡಿದ ಘೋಷಣೆಯು ಆ ಅರ್ಜಿ ಜೊತೆ ಇರತಕ್ಕುದು.

(2) ರಾಜ್ಯ ಸರ್ಕಾರವು ಅಂಥ ಅನುದಾನವನ್ನು ಮಂಜೂರ್ಮಾಡಬಹುದು ಇಲ್ಲವೇ ಉಚಿತ ಮತ್ತು ಸಾಕಷ್ಟು ಕಾರಣಗಳಿಗಾಗಿ ಅಂಥ ಮಂಜೂರಾತಿಯನ್ನು ನೀಡಲು ನಿರಾಕರಿಸಬಹುದು.

(3) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ರಾಜ್ಯ ಸರ್ಕಾರವು, ಅನುದಾನದ ಮಂಜೂರಾತಿಯನ್ನು ನಿರಾಕರಿಸಿ ಮಾಡಿದ ಯಾವುದೇ ಆದೇಶವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**53. ಅನುದಾನವನ್ನು ತಡೆಹಿಡಿಯಲು, ಕಡಿಮೆ ಮಾಡಲು ಅಥವಾ ಹಿಂತೆಗೆದುಕೊಳ್ಳಲು ರಾಜ್ಯ ಸರ್ಕಾರದ ಅಧಿಕಾರ.–** (1) ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಸರ್ಕಾರದ ಆರ್ಥಿಕ ಸ್ಥಿತಿಯನ್ನು ಅಥವಾ ಅಂಥ ಸಂಸ್ಥೆಯ ನಡವಳಿಕೆ, ದಕ್ಷತೆ ಮತ್ತು ಹಣಕಾಸಿನ ಸ್ಥಿತಿ ಇವುಗಳನ್ನು

ದೃಷ್ಟಿಯಲ್ಲಿಟ್ಟುಕೊಂಡು, ಸಂಬಂಧಪಟ್ಟ ಸಂಸ್ಥೆಯ ಆಡಳಿತ ಪರಿಷತ್ತಿಗೆ, ಅನುದಾನದ ನೀಡಿಕೆಯನ್ನು ತಡೆಹಿಡಿಯುವುದರ, ಕಡಿಮೆ ಮಾಡುವುದರ ಅಥವಾ ಹಿಂತೆಗೆದುಕೊಳ್ಳುವುದರ ವಿರುದ್ಧ ಮನವಿ ಸಲ್ಲಿಸಲು ಅವಕಾಶವನ್ನು ಕೊಟ್ಟ ತರುವಾಯ, ಆ ಶಿಕ್ಷಣ ಸಂಸ್ಥೆಗೆ ಆ ವರ್ಷದಲ್ಲಿ ಸಂದಾಯ ಮಾಡತಕ್ಕ ಯಾವುದೇ ಅನುದಾನವನ್ನು ತಡೆಹಿಡಿಯಬಹುದು, ಕಡಿಮೆ ಮಾಡಬಹುದು ಅಥವಾ ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಅಥವಾ ಈ ಅಧಿನಿಯಮದ ಇತರ ಯಾವುದೇ ಉಪಬಂಧದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಯಾವುದೇ ಶಿಕ್ಷಣ ಸಂಸ್ಥೆಗೆ ಸಂದಾಯ ಮಾಡತಕ್ಕ ಯಾವುದೇ ಅನುದಾನವನ್ನು ಕೆಳಕಂಡ ಸಂದರ್ಭಗಳಲ್ಲಿ ತಡೆಹಿಡಿಯಬಹುದು, ಕಡಿಮೆ ಮಾಡಬಹುದು ಅಥವಾ ಹಿಂತೆಗೆದುಕೊಳ್ಳಬಹುದು; ಸಂಬಂಧಪಟ್ಟ ಸಂಸ್ಥೆಯ ಆಡಳಿತ ಪರಿಷತ್ತು,-

(i) ಅನುದಾನದ ಎಲ್ಲ ಅಥವಾ ಯಾವುದೇ ಷರತ್ತುಗಳನ್ನು ಪಾಲಿಸಲು ತಪ್ಪಿದಾಗ;

(ii) ಕೇವಲ ಮತ, ಜನಾಂಗ, ಜಾತಿ, ಭಾಷೆಯ ಆಧಾರದ ಮೇಲೆ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಯಾವನೇ ನಾಗರೀಕನಿಗೆ ಪ್ರವೇಶ ಕೊಡಲು ನಿರಾಕರಿಸಿದಾಗ;

(iii) ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾಗಿರುವ ಸರ್ಕಾರದ ಬಗ್ಗೆ ದ್ವೇಷ ಅಥವಾ ತಿರಸ್ಕಾರ ಭಾವನೆಯನ್ನುಂಟು ಮಾಡಲು ಉದ್ದೇಶಿಸಿರುವ ಅಥವಾ ಹಾಗೆ ಮಾಡಲು ಪ್ರಯತ್ನಿಸುವ ಅಥವಾ ಅವಿಶ್ವಾಸವನ್ನು ಪ್ರಚೋದಿಸಲು ಉದ್ದೇಶಿಸಿರುವ ಅಥವಾ ಪ್ರಚೋದಿಸಲು ಪ್ರಯತ್ನಿಸುವ ಯಾವುದೇ ಚಳುವಳಿಯಲ್ಲಿ ಭಾಗವಹಿಸಲು ಆ ಸಂಸ್ಥೆಯ ನೌಕರನಿಗೆ ಅನುಮತಿ ನೀಡಿದಾಗ;

(iv) ಭಾರತದ ನಾಗರೀಕರ ಯಾವುದೇ ವರ್ಗದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡುವ ಯಾವುದೇ ಪ್ರಚಾರ ಅಥವಾ ಆಚರಣೆಯನ್ನು ಅಥವಾ ಆ ವರ್ಗದ ಧರ್ಮ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಹೇಳನ ಮಾಡಲು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೋತ್ಸಾಹಿಸಿದಾಗ;

(v) ರಿಜಿಸ್ಟರುಗಳಲ್ಲಿ ಸುಳ್ಳು ನಮೂದನೆಗಳನ್ನು ಮಾಡಿದ ಬಗ್ಗೆ ಅಥವಾ ಯಾವ ಉದ್ದೇಶಗಳಿಗಾಗಿ ನಿಧಿಗಳನ್ನು ಸಂಗ್ರಹಿಸಲಾಗಿರುವುದೋ, ಆ ಉದ್ದೇಶಗಳಿಗಾಗಿಯಲ್ಲದೆ ಇತರ ಉದ್ದೇಶಗಳಿಗೆ ಅದನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ತಪ್ಪಿತಸ್ಥನಾಗಿರುವಾಗ;

(vi) ಲೆಕ್ಕಪರಿಶೋಧಕರು ತೋರಿಸಿಕೊಟ್ಟ ಲೆಕ್ಕಗಳ ನಿರ್ವಹಣೆಯಲ್ಲಿನ ತಪ್ಪುಗಳನ್ನು ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸರಿಪಡಿಸಲು ತಪ್ಪಿದಾಗ;

(vii) ಸೇವೆಯಿಂದ ಅಕ್ರಮವಾಗಿ ತೆಗೆದುಹಾಕಿದ ನೌಕರನನ್ನು ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕೆಲಸಕ್ಕೆ ಪುನಃ ತೆಗೆದುಕೊಳ್ಳಲು ತಪ್ಪಿರುವಾಗ, ಅಥವಾ ಸಕ್ಷಮ ಪ್ರಾಧಿಕಾರವು ವೇತನ ಅಥವಾ ಇತರ ಸೌಲಭ್ಯಗಳನ್ನು ಆ ನೌಕರನಿಗೆ ಸಂದಾಯ ಮಾಡುವಂತೆ ನಿರ್ದೇಶಿಸಿದಾಗ, ಹಾಗೆ ಮಾಡಲು ತಪ್ಪಿದಾಗ.

(3) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕುದು ಹಾಗೂ ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**54. ಖಾಸಗಿ ಸಂಸ್ಥೆಗಳ ನಿಧಿಗಳ ಮತ್ತು ಚರ ಸ್ವತ್ತಿನ ಬಳಕೆ.–** (1) ಪ್ರತಿಯೊಂದು ಖಾಸಗಿ ಸಂಸ್ಥೆಯು ಸ್ವೀಕರಿಸಿದ ಅಥವಾ ಅದು ಅಥವಾ ಅದರ ಪರವಾಗಿ ಹೊಂದಿರುವ ಎಲ್ಲ ಹಣವನ್ನು, ಅದು ಯಾವ ಉದ್ದೇಶಗಳಿಗಾಗಿದೆಯೋ ಆ ಉದ್ದೇಶಗಳಿಗಾಗಿ ಬಳಸತಕ್ಕುದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಆಡಳಿತ ಪರಿಷತ್ತು ಅದರ ಬಗ್ಗೆ ಲೆಕ್ಕಗಳನ್ನು ಕೊಡತಕ್ಕುದು.

(2) ಪ್ರತಿಯೊಂದು ಖಾಸಗಿ ಸಂಸ್ಥೆಯು ಸ್ವೀಕರಿಸಿದ ಅಥವಾ ಅದು ಅಥವಾ ಅದರ ಪರವಾಗಿ ಹೊಂದಿರುವ ಎಲ್ಲ ಹಣವನ್ನು ಬ್ಯಾಂಕಿನಲ್ಲಿ ಠೇವಣಿಯಿಡತಕ್ಕುದು.

(3) ಅಂಥ ಪ್ರತಿಯೊಂದು ಸಂಸ್ಥೆಯ ಹೆಚ್ಚುವರಿ ನಿಧಿಯನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ತೊಡಗಿಸತಕ್ಕುದು ಮತ್ತು ಆ ನಿಧಿಯನ್ನು ಶಿಕ್ಷಣ ಅಭಿವೃದ್ಧಿಗಾಗಿ ಮಾತ್ರವೇ ಬಳಸತಕ್ಕುದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ "ಹೆಚ್ಚುವರಿ ನಿಧಿ" ಎಂದರೆ ಹಿಂದಿನ ಮೂರು ಶೈಕ್ಷಣಿಕ ವರ್ಷಗಳಲ್ಲಿನ ಆ ಸಂಸ್ಥೆಯ ಎಲ್ಲ ಉದ್ದೇಶಗಳಿಗೆ, ಅಗತ್ಯತೆಗಳಿಗೆ ಅಥವಾ ಅಭಿವೃದ್ಧಿಗೆ ಬೇಕಾದ ಹಣವನ್ನು ಒದಗಿಸಿದ ತರುವಾಯ ಪ್ರತಿಯೊಂದು ಶೈಕ್ಷಣಿಕ ವರ್ಷದ ಆರಂಭದಲ್ಲಿ ಆ ಸಂಸ್ಥೆಯಲ್ಲಿ ಬಳಸದೆ ಉಳಿದಿರುವ ಹಣ ಎಂದರ್ಥ.

## ಅಧ್ಯಾಯ-X

## ಲೆಕ್ಕಗಳು, ಲೆಕ್ಕ ಪರಿಶೋಧನೆ, ಪರಿಶೀಲನೆ ಮತ್ತು ವಿವರ ಪಟ್ಟಿಕೆಗಳು

**55. ಲೆಕ್ಕಗಳು.–** ರಾಜ್ಯ ನಿಧಿಗಳಿಂದ ಅಥವಾ ಇತರ ಮೂಲಗಳಿಂದ ಅನುದಾನಗಳನ್ನು ಸ್ವೀಕರಿಸುತ್ತಿರುವ ಪ್ರತಿಯೊಂದು ಶಿಕ್ಷಣ ಸಂಸ್ಥೆಯು, ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಗಳನ್ನು ಇಟ್ಟುಕೊಂಡು ಬರತಕ್ಕುದು ಮತ್ತು ಲೆಕ್ಕಗಳು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿ-ರತಕ್ಕುದು.

**56. ಲೆಕ್ಕಗಳ ವಾರ್ಷಿಕ ಪರಿಶೋಧನೆ.–** (1) ರಾಜ್ಯ ನಿಧಿಗಳಿಂದ ಅನುದಾನಗಳನ್ನು ಸ್ವೀಕರಿಸುತ್ತಿರುವ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಲೆಕ್ಕಗಳನ್ನು ಪ್ರತಿಯೊಂದು ಶೈಕ್ಷಣಿಕ ವರ್ಷದ ಕೊನೆಯಲ್ಲಿ, ನಿಯಮಿಸಬಹುದಾದಂಥ ಕಾರ್ಯ ವಿಧಾನವನ್ನು ಅನುಸರಿಸಿ, ನಿಯಮಿಸಬಹುದಾದಂಥ ಪ್ರಾಧಿಕಾರವು, ಅಧಿಕಾರಿಯು ಅಥವಾ ವ್ಯಕ್ತಿಯು ಪರಿಶೋಧಿಸತಕ್ಕುದು ಮತ್ತು ಬೇರೆ ಬೇರೆ ವರ್ಗಗಳ ಶೈಕ್ಷಣಿಕ ಸಂಸ್ಥೆಗಳಿಗೆ ಬೇರೆ ಬೇರೆ ಪ್ರಾಧಿಕಾರಗಳನ್ನು, ಅಧಿಕಾರಿಗಳನ್ನು ಅಥವಾ ವ್ಯಕ್ತಿಗಳನ್ನು ನಿಯಮಿಸಬಹುದು.

(2) (ಎ) ಶಿಕ್ಷಣ ಸಂಸ್ಥೆಯು, ರಾಜ್ಯ ಸರ್ಕಾರದ ನಿಧಿಗಳಿಂದ ಸ್ವೀಕರಿಸಲಾದ ಅನುದಾನಗಳಿಗೆ ಸಂಬಂಧಪಟ್ಟಂತೆ ಅದು ಇಡುವಂತೆ ಅಗತ್ಯಪಡಿಸಲಾದ ಎಲ್ಲ ಲೆಕ್ಕದ ಪುಸ್ತಕಗಳ, ಮತ್ತಿತರ ದಸ್ತಾವೇಜುಗಳ ಪರಿಶೀಲನೆಯ ಬಗ್ಗೆ ನಿಯಮಿಸಲಾದ ಪ್ರಾಧಿಕಾರಿಗೆ, ಅಧಿಕಾರಿಗೆ, ಅಥವಾ ವ್ಯಕ್ತಿಗೆ ಪೂರ್ಣ ಅವಕಾಶವು ಇರತಕ್ಕುದು ಮತ್ತು ಅವರು (1)ನೇ ಉಪಪ್ರಕರಣದ ಮೇರೆಗಿನ ಲೆಕ್ಕಗಳ ಪರಿಶೋಧನೆಯ ತರುವಾಯ ಅದರ ವರದಿಯ ಒಂದು ಪ್ರತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸತಕ್ಕುದು; ಆ ಸಕ್ಷಮ ಪ್ರಾಧಿಕಾರವು ಆ ವರದಿಯನ್ನು ಶಿಕ್ಷಣ ಏಜೆನ್ಸಿಗೆ ಕಳುಹಿಸತಕ್ಕುದು.

(ಬಿ) ನಿಯಮಿಸಬಹುದಾದಂಥ ಕಾಲದೊಳಗೆ ಶಿಕ್ಷಣ ಏಜೆನ್ಸಿಯು ತನ್ನ ಅಭಿಪ್ರಾಯಗಳ ಸಮೇತ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಒಪ್ಪಿಸತಕ್ಕುದು.

**57. ಪರಿಶೀಲನೆ, ವಿಚಾರಣೆ ಇತ್ಯಾದಿ.–** (1) ರಾಜ್ಯ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರವು ತಾನಾಗಿಯೇ ಆಗಲಿ ಅಥವಾ ಬೇರೆ ರೀತಿಯಲ್ಲಿ, ಯಾವುದೇ ಶಿಕ್ಷಣ ಸಂಸ್ಥೆ, ಅದರ ಲೆಕ್ಕಪತ್ರಗಳು, ಅದರ ಕಟ್ಟಡಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ಕಾರ್ಯಾಗಾರಗಳು ಮತ್ತು ಸಾಧನ ಸಾಮಗ್ರಿಗಳು ಹಾಗೂ ಸಂಸ್ಥೆಯು ನಡೆಸುತ್ತಿರುವ ಪರೀಕ್ಷೆಗಳು ಅಥವಾ ಮಾಡುತ್ತಿರುವ ಬೋಧನೆ ಮತ್ತು ಇತರ ಕೆಲಸಗಳು ಇವುಗಳ ಬಗ್ಗೆ ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಪರಿಶೀಲನೆಯನ್ನು ಅಥವಾ ವಿಚಾರಣೆಯನ್ನು ನಡೆಸುವಂತೆ ಮಾಡಬಹುದು ಅಥವಾ ಅಂಥ ಸಂಸ್ಥೆಯು ನಡೆಸುವ ಪರೀಕ್ಷೆ, ಅದರ ಕಾರ್ಯ ನಿರ್ವಹಣೆ ಮತ್ತು ಹಣಕಾಸು ಸ್ಥಿತಿಯ ಸಂಬಂಧದಲ್ಲಿ ಮತ್ತು ಸಂಸ್ಥೆಗೆ ಸಂಬಂಧಿಸಿದ ಇತರ ಯಾವುದೇ ವಿಷಯದಲ್ಲಿ ವಿಚಾರಣೆ ನಡೆಸುವಂತೆ ಮಾಡಬಹುದು.

(2) ಅಂಥ ಪರಿಶೀಲನೆ ಅಥವಾ ವಿಚಾರಣೆಯ ಉದ್ದೇಶಗಳಿಗೆ ಅಗತ್ಯವಾಗಬಹುದಾದಂಥ ಎಲ್ಲಾ ಸಹಾಯ ಹಾಗೂ ಸೌಲಭ್ಯಗಳನ್ನು ಯುಕ್ತ ಸಮಯಗಳಲ್ಲಿ ಮೇಲೆ ಹೇಳಲಾದ ಅಧಿಕಾರಿಗೆ ಒದಗಿಸಲು ಆ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು ಮತ್ತು ನೌಕರರು ಬದ್ಧರಾಗಿರತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಅಧಿಕೃತನಾದ ಅಧಿಕಾರಿಯು, ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕುದು,-

(ಎ) ಆಡಳಿತ ಪರಿಷತ್ತಿಗೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಹಣ ಮತ್ತು ಇತರ ಸ್ವತ್ತುಗಳನ್ನು ಎಲ್ಲಾ ಯುಕ್ತ ಸಮಯಗಳಲ್ಲಿ ಪರಿಶೀಲಿಸಲು ಅವನಿಗೆ ಅವಕಾಶವಿರತಕ್ಕುದು ಮತ್ತು ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಹಣ ಅಥವಾ ಇತರ ಸ್ವತ್ತುಗಳನ್ನು ವಶದಲ್ಲಿಟ್ಟುಕೊಂಡಿರುವ ಅಥವಾ ಅವುಗಳ ಅಭಿರಕ್ಷೆಯ ಹೊಣೆಗಾರಿಕೆಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು, ತಾನು ನಿರ್ದೇಶಿಸಬಹುದಾದ, ಯಾವುದೇ ಸ್ಥಳದಲ್ಲಿ ಅವುಗಳನ್ನು ಹಾಜರು ಪಡಿಸಲು ಅವನು ಸಮನು ಮಾಡಬಹುದು.

(ಬಿ) ಆ ಶಿಕ್ಷಣ ಸಂಸ್ಥೆಯ ವ್ಯವಹಾರಗಳ ಬಗ್ಗೆ ಯಾವನೇ ವ್ಯಕ್ತಿಯು ಯಾವುದೇ ತಿಳಿವಳಿಕೆಯನ್ನು ಹೊಂದಿರುವನೆಂದು ಆ ಅಧಿಕಾರಿಗೆ ನಂಬಲು ಕಾರಣವಿದ್ದ ಸಂದರ್ಭದಲ್ಲಿ ಅಂಥ ವ್ಯಕ್ತಿಯು ತನ್ನ ಮುಂದೆ ಹಾಜರಾಗುವಂತೆ ಆ ಅಧಿಕಾರಿಯು ಅವನನ್ನು ಸಮನು ಮಾಡಬಹುದು ಮತ್ತು ಪ್ರಮಾಣ ಮಾಡಿಸಿ ಅಂಥ ವ್ಯಕ್ತಿಯನ್ನು ಪರೀಕ್ಷಿಸಬಹುದು.

(4) ರಾಜ್ಯ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರವು ಅಂಥ ತನಿಖೆ ಅಥವಾ ವಿಚಾರಣೆಯ ಫಲಿತಾಂಶಕ್ಕೆ ಸಂಬಂಧಿಸಿದಂತೆ ಅಂಥ ಪ್ರಾಧಿಕಾರಿಯ ಅಭಿಪ್ರಾಯಗಳನ್ನು ಶಿಕ್ಷಣ ಏಜೆನ್ಸಿಗೆ ತಿಳಿಸತಕ್ಕುದು ಮತ್ತು ಅದರ ಮೇಲೆ ಶಿಕ್ಷಣ ಏಜೆನ್ಸಿಯ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಆ ಏಜೆನ್ಸಿಗೆ ಸಲಹೆ ನೀಡಬಹುದು.

(5) ಅಂಥ ತನಿಖೆ ಅಥವಾ ವಿಚಾರಣೆಯ ಫಲಿತಾಂಶಗಳ ಮೇಲೆ ಕೈಕೊಳ್ಳಲುದ್ದೇಶಿಸಿದ ಅಥವಾ ಕೈಗೊಂಡ ಕ್ರಮ ಯಾವುದಾದರೂ ಇದ್ದರೆ ಅದರ ಬಗ್ಗೆ ಶಿಕ್ಷಣ ಏಜೆನ್ಸಿಯು ರಾಜ್ಯ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡತಕ್ಕುದು. ಅಂಥ ವರದಿಯನ್ನು, ರಾಜ್ಯ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರವು ನಿರ್ದೇಶಿಸಬಹುದಾದಂಥ ಅವಧಿಯೊಳಗೆ ಸಲ್ಲಿಸತಕ್ಕುದು.

(6) ಶಿಕ್ಷಣ ಏಜೆನ್ಸಿಯು ರಾಜ್ಯ ಸರ್ಕಾರಕ್ಕೆ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಮನವರಿಕೆಯಾಗುವ ಹಾಗೆ ಸೂಕ್ತ ಸಮಯದೊಳಗೆ ಕ್ರಮ ಕೈಗೊಳ್ಳದಿದ್ದರೆ, ಅದು ಶಿಕ್ಷಣ ಏಜೆನ್ಸಿಯು ನೀಡಿದ ಯಾವುದೇ ವಿವರಣೆಯನ್ನು ಅಥವಾ ಮಾಡಿಕೊಂಡ ಮನವಿಯನ್ನು ಪರಿಶೀಲಿಸಿದ ತರುವಾಯ, ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಶಿಕ್ಷಣ ಏಜೆನ್ಸಿಯು ಹಾಗೂ ಸಂಸ್ಥೆಯ ಮುಖ್ಯಸ್ಥನು, ಅಂಥ ನಿರ್ದೇಶನಗಳನ್ನು ಪಾಲಿಸತಕ್ಕುದು ಮತ್ತು ಅಂಥ ಪ್ರತಿಯೊಂದು ನಿರ್ದೇಶನವನ್ನು ಕಾರ್ಯಗತಗೊಳಿಸಲು ಹೊಣೆಯಾಗಿರತಕ್ಕುದು.

**58. ವಿವರಣಪಟ್ಟಿಕೆ, ಮುಂತಾದುವುಗಳನ್ನು ಒದಗಿಸುವುದು.–** ಪ್ರತಿಯೊಂದು ಶಿಕ್ಷಣ ಏಜೆನ್ಸಿಯು, ಸಕ್ಷಮ ಪ್ರಾಧಿಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು, ಅಂಕಿ ಅಂಶಗಳನ್ನು ಮತ್ತು ಇತರ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರವು ಈ ಸಂಬಂಧದಲ್ಲಿ ನಿಗದಿಪಡಿಸಬಹುದಾದಂಥ ಅವಧಿಯೊಳಗೆ ಅಥವಾ ವಿಸ್ತರಿಸಬಹುದಾದಂಥ ಅವಧಿಯೊಳಗೆ ಆ ಪ್ರಾಧಿಕಾರಕ್ಕೆ ಒದಗಿಸತಕ್ಕುದು.

## ಅಧ್ಯಾಯ-XI

### ನೆರವು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಸ್ವತ್ತು ವರ್ಗಾವಣೆಗೆ ನಿಷೇಧ

**59. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ,–

(ಎ) 'ಆಡಳಿತ ಪರಿಷತ್ತು' ಎಂದರೆ ಒಂದು ಶಿಕ್ಷಣ ಸಂಸ್ಥೆಗೆ ಸೇರಿದ ಯಾವುದೇ ಜಮೀನು ಅಥವಾ ಕಟ್ಟಡಗಳನ್ನು ವರ್ಗಾಯಿಸುವ ಅಧಿಕಾರ ಹೊಂದಿರುವ ಒಡೆಯ, ನ್ಯಾಸಧಾರಿ ಅಥವಾ ಇತರ ವ್ಯಕ್ತಿ ಮತ್ತು ಅದರಲ್ಲಿ ಸ್ಥಳೀಯ ಪ್ರಾಧಿಕಾರವೂ ಸೇರಿರುತ್ತದೆ.

(ಬಿ) 'ವರ್ಗಾವಣೆ'ಯಲ್ಲಿ ಮಾರಾಟ, ವಿನಿಮಯ, ಅಡಮಾನ, ಋಣಭಾರ, ಗುತ್ತಿಗೆ ಅಥವಾ ದಾನ ಇವುಗಳೂ ಸೇರಿರುತ್ತವೆ.

**60. ಕೆಲವು ಸಂದರ್ಭಗಳಲ್ಲಿ ಸರ್ಕಾರದ ಅನುಮತಿ ಇಲ್ಲದೆ, ಶಿಕ್ಷಣ ಸಂಸ್ಥೆಗಳು ಜಮೀನು ಹಾಗೂ ಕಟ್ಟಡಗಳನ್ನು ವರ್ಗಾಯಿಸಲು ನಿಷೇಧ.–** (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಅನಂತರ,–

(ಎ) ರಾಜ್ಯದ ನಿಧಿಯಿಂದ ಕೊಡಲಾದ ಯಾವುದೇ ಅನುದಾನದ ಸಹಾಯದಿಂದ ಯಾವುದೇ ಶಿಕ್ಷಣ ಸಂಸ್ಥೆಯ ಉದ್ದೇಶಗಳಿಗಾಗಿ ಯಾವುದೇ ಜಮೀನನ್ನು ಅಥವಾ ಕಟ್ಟಡವನ್ನು ಆರ್ಜಿಸಿದರೆ, ಕಟ್ಟಡ ಕಟ್ಟಿದ್ದರೆ, ಸುಧಾರಣೆ ಮಾಡಿದ್ದರೆ ಅಥವಾ ಪರಿವರ್ತನೆ ಮಾಡಿದ್ದರೆ; ಅಥವಾ

(ಬಿ) ಯಾವುದೇ ಶಿಕ್ಷಣ ಸಂಸ್ಥೆಯ ಉದ್ದೇಶಗಳಿಗಾಗಿ ಉಪಯೋಗಿಸಲು ಸರ್ಕಾರವು ಯಾವುದೇ ಜಮೀನನ್ನು ಅಥವಾ ಕಟ್ಟಡವನ್ನು ವರ್ಗಾವಣೆ ಮಾಡಿದ್ದರೆ

–ಆಗ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ವರ್ಗಾವಣೆಯ ಯಾವುದೇ ಪತ್ರದಲ್ಲಿ ಅಥವಾ ಜಮೀನಿಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿದ ಯಾವುದೇ ಇತರ ದಸ್ತಾವೇಜಿನಲ್ಲಿ ವ್ಯತಿರಿಕ್ತವೇನಾದರೂ ಇದ್ದಾಗ್ಯೂ, (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಅದನ್ನು ವರ್ಗಾವಣೆ ಮಾಡತಕ್ಕುದಲ್ಲ; ಅಥವಾ ಶಿಕ್ಷಣ ಸಂಸ್ಥೆಯ ಉದ್ದೇಶಗಳಲ್ಲದ ಅಥವಾ ಅದಕ್ಕೆ ಸಂಬಂಧಿಸಿದ ಉದ್ದೇಶಗಳಲ್ಲದ ಇತರ ಯಾವುದೇ ಉದ್ದೇಶಕ್ಕಾಗಿ ಆ ಜಮೀನನ್ನು ಅಥವಾ ಕಟ್ಟಡವನ್ನು ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಉಪಯೋಗಿಸತಕ್ಕುದಲ್ಲ.

(2) ರಾಜ್ಯ ಸರ್ಕಾರವು ತಾನು ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಕೆಳಕಂಡ ಸಂದರ್ಭಗಳಲ್ಲಿ ಎಂದರೆ,–

(ಎ) ಶಿಕ್ಷಣ ಸಂಸ್ಥೆಯ ಅಭಿವೃದ್ಧಿಯ ಉದ್ದೇಶಗಳಿಗಾಗಿ ಅಥವಾ ಅದಕ್ಕೆ ಸಂಬಂಧಿಸಿರುವ ರಾಜ್ಯ ಸರ್ಕಾರವು ಅನುಮೋದಿಸಿದ ಉದ್ದೇಶಗಳಿಗಾಗಿ ವರ್ಗಾವಣೆಯನ್ನು ಮಾಡುವುದಾದರೆ ಮತ್ತು ಅಂಥ ವರ್ಗಾವಣೆಯ ಉತ್ಪತ್ತಿಗಳನ್ನು ಪೂರ್ಣವಾಗಿ ಮೇಲೆ ಹೇಳಲಾದ ಉದ್ದೇಶಗಳ ಸಾಧನೆಗಾಗಿ ಉಪಯೋಗಿಸಿಕೊಳ್ಳುವುದಾದರೆ;

(ಬಿ) ಮೇಲೆ ಹೇಳಿದ ಉದ್ದೇಶಗಳ ಸಾಧನೆಗಾಗಿ ಭಾಗಶಃ ವರ್ಗಾವಣೆಯನ್ನು ಮಾಡಲಾಗಿದ್ದರೆ, ಪರಂತು, (1)ನೆಯ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿತವಾದ ಅನುದಾನದ ಪೈಕಿ ಅಥವಾ ಸಂದರ್ಭಾನುಸಾರ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿತವಾದ ಜಮೀನಿನ ಅಥವಾ ಕಟ್ಟಡದ ಚಾಲ್ತಿ ಮಾರುಕಟ್ಟೆ ಮೌಲ್ಯದ ಪೈಕಿ ಅಥವಾ ಅವೆರಡರ ಪೈಕಿ ಪ್ರಕರಣದ ಸನ್ನಿವೇಶಕ್ಕನುಗುಣವಾಗಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಭಾಗವನ್ನು ರಾಜ್ಯ ಸರ್ಕಾರಕ್ಕೆ ಮರು ಸಂದಾಯ ಮಾಡಿರಬೇಕು;

(ಸಿ) ವರ್ಗಾವಣೆಯನ್ನು ಇತರ ಯಾವುದೇ ಕಾನೂನು ಸಮ್ಮತವಾದ ಕಾರಣಕ್ಕಾಗಿ ಮಾಡುವುದಾದರೆ, ಪರಂತು, (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಅನುದಾನವನ್ನು ಪೂರ್ತಿಯಾಗಿ ಅಥವಾ ಸಂದರ್ಭಾನುಸಾರ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಜಮೀನಿನ

ಅಥವಾ ಕಟ್ಟಡದ ಜಾಲ್ತಿ ಮಾರುಕಟ್ಟೆ ಮೌಲ್ಯವನ್ನು ಪೂರ್ತಿಯಾಗಿ ಅಥವಾ ಅವೆರಡನ್ನೂ ಪೂರ್ತಿಯಾಗಿ ರಾಜ್ಯ ಸರ್ಕಾರಕ್ಕೆ ಮರು ಸಂದಾಯ ಮಾಡಿರಬೇಕು

–ಅಂಥ ಯಾವುದೇ ಜಮೀನು ಅಥವಾ ಕಟ್ಟಡಗಳ ವರ್ಗಾವಣೆಗೆ ಲಿಖಿತ ಆದೇಶದ ಮೂಲಕ ಅನುಮತಿ ನೀಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಸರ್ಕಾರದ ಅನುಮತಿಯನ್ನು ತೆಗೆದು ಕೊಳ್ಳದೆ ಮಾಡಿದ ಜಮೀನಿನ ಅಥವಾ ಕಟ್ಟಡದ ಯಾವುದೇ ವರ್ಗಾವಣೆಯು ರದ್ದಾಗತಕ್ಕುದು ಮತ್ತು ಅನೂರ್ಜಿತವಾಗತಕ್ಕುದು.

**61. 60ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಯ ಪರಿಣಾಮ.–** ಯಾವುದೇ ಜಮೀನಿಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ, 60ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತಿಗೆ ಮನವಿಯನ್ನು ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಅಂಥ ಉಲ್ಲಂಘನೆಯಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಆದೇಶದ ಮೂಲಕ ಕೆಳಕಂಡಂತೆ ನಿರ್ದೇಶಿಸಬಹುದು,–

(ಎ) ಆ ಜಮೀನು ಅಥವಾ ಜಮೀನು ಮತ್ತು ಅದರಲ್ಲಿರುವ ಕಟ್ಟಡವು ರಾಜ್ಯ ಸರ್ಕಾರಕ್ಕೆ ಸೇರಿದ್ದು ಮತ್ತು ಸರ್ಕಾರವು ಅದನ್ನು ಶಿಕ್ಷಣ ಸಂಸ್ಥೆಯ ಉದ್ದೇಶಗಳಿಗಾಗಿ ವರ್ಗಾಯಿಸಿದ್ದರೆ, ಆ ಜಮೀನನ್ನು ಅಥವಾ ಸಂದರ್ಭಾನುಸಾರ ಜಮೀನು ಮತ್ತು ಅದರಲ್ಲಿರುವ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗೆ ನಿರ್ದೇಶಿಸಬಹುದು ಅಥವಾ ಆ ಜಮೀನನ್ನು ಅಥವಾ ಅದರೊಂದಿಗೆ ಕಟ್ಟಡವನ್ನು ಸಹ ವರ್ಗಾಯಿಸಿದ್ದರೆ ಅದರ ಮತ್ತು ಜಮೀನಿನ ಚಾಲ್ತಿ ಮಾರುಕಟ್ಟೆ ಮೌಲ್ಯವನ್ನು ಪೂರ್ತಿಯಾಗಿ ಮತ್ತು ಜಮೀನನ್ನು ಅಭಿವೃದ್ಧಿಪಡಿಸಲು ಅಥವಾ ಕಟ್ಟಡವನ್ನು ಮಾರ್ಪಾಡುಗೊಳಿಸಲು ಅಥವಾ ಕಟ್ಟಲು ರಾಜ್ಯ ಸರ್ಕಾರವು ಏನಾದರೂ ಅನುದಾನ ನೀಡಿದ್ದರೆ ಆ ಅನುದಾನದ ಮೊತ್ತವನ್ನು ಪೂರ್ತಿಯಾಗಿ ತನಗೆ ಸಂದಾಯ ಮಾಡುವಂತೆ ತನ್ನ ಇಚ್ಛಾನುಸಾರ ಆಡಳಿತ ಪರಿಷತ್ತಿಗೆ ನಿರ್ದೇಶಿಸಬಹುದು; ಮತ್ತು

(ಬಿ) ಆ ಜಮೀನು ಅಥವಾ ಅದರಲ್ಲಿ ಯಾವುದೇ ಕಟ್ಟಡವಿದ್ದರೆ ಆ ಕಟ್ಟಡವು ರಾಜ್ಯ ಸರ್ಕಾರಕ್ಕೆ ಸೇರಿರದಿದ್ದರೆ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ದರದಲ್ಲಿ ಉಲ್ಲಂಘನೆಯ ದಿನಾಂಕದಿಂದ ಬಡ್ಡಿ ಸಹಿತ ರಾಜ್ಯ ಸರ್ಕಾರವು ನೀಡಿದ ಅನುದಾನವನ್ನು ಪೂರ್ಣವಾಗಿ ಮರು ಸಂದಾಯ ಮಾಡಲು ಆಡಳಿತ ಪರಿಷತ್ತಿಗೆ ನಿರ್ದೇಶಿಸಬಹುದು.

**62. 60ನೇ ಪ್ರಕರಣದ (2)ನೇ ಉಪಪ್ರಕರಣದ ಮತ್ತು 61ನೇ ಪ್ರಕರಣದ ಮೇರೆಗಿನ ಆದೇಶದ ಪರಿಣಾಮ.–** (1) 60ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ 61ನೇ ಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು ಹೊರಡಿಸಿದ ಪ್ರತಿಯೊಂದು ಆದೇಶವು (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು ಅಂತಿಮವಾಗಿರತಕ್ಕುದು.

(2) ಸ್ಥಳೀಯ ಪ್ರಾಧಿಕಾರವಲ್ಲದ ಯಾವ ಸಂಸ್ಥೆಯ ಆಡಳಿತ ಪರಿಷತ್ತಿನ ವಿಷಯದಲ್ಲಿ ಅಂಥ ಆದೇಶವನ್ನು ಹೊರಡಿಸಲಾಗಿದೆಯೋ ಆ ಆಡಳಿತ ಪರಿಷತ್ತು, ತನ್ನಿಂದ ಅಥವಾ ತನಗೆ ಮರು ಸಂದಾಯವಾಗಬೇಕಾಗಿರುವ ಅಥವಾ ಸಂದಾಯವಾಗಬೇಕಾಗಿರುವ ಮೊತ್ತವನ್ನು ಆದೇಶದಲ್ಲಿ ತಪ್ಪಾಗಿ ನಿಗದಿಪಡಿಸಲಾಗಿದೆ ಎಂಬ ಕಾರಣದ ಮೇಲೆ ಸಂದರ್ಭಾನುಸಾರ 60ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ 61ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಂಥ ಮೊತ್ತವನ್ನು ಸರಿಯಾಗಿ ನಿಗದಿಪಡಿಸಬೇಕೆಂದು ಆ ಮೊತ್ತವು ಯಾವ ಸ್ವತ್ತಿಗೆ ಸಂಬಂಧಿಸಿದೆಯೋ ಆ ಸ್ವತ್ತು ಇರುವ

ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರಿಗೆ, ತಾನು ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅರ್ಜಿ ಸಲ್ಲಿಸಬಹುದು.

(3) ಜಿಲ್ಲಾ ನ್ಯಾಯಾಧೀಶನು, ಆಡಳಿತ ಪರಿಷತ್ತಿನ ಅಥವಾ ಅದಕ್ಕೆ ಸಂದರ್ಭಾನುಸಾರ 60ನೇ ಪ್ರಕರಣದ ಉಪಪ್ರಕರಣ (2)ರ ಅಥವಾ 61ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮರುಸಂದಾಯವಾಗಬೇಕಾದ ಅಥವಾ ಸಂದಾಯವಾಗಬೇಕಾದ ಸರಿಯಾದ ಮೊತ್ತವನ್ನು ನಿರ್ಧರಿಸತಕ್ಕುದು ಮತ್ತು ಅಂಥ ನಿರ್ಧಾರವು ಅಂತಿಮವಾಗತಕ್ಕುದು.

**63. ಸ್ವಾಧೀನವನ್ನು ತೆಗೆದುಕೊಂಡ ತರುವಾಯ ಜಮೀನು ಅಥವಾ ಕಟ್ಟಡವು ನಿರುಪಾಧಿಕವಾಗಿ ಸರ್ಕಾರದಲ್ಲೇ ನಿಹಿತವಾಗುವುದು.–** (1) 61ನೇ ಪ್ರಕರಣದ ಮೇರೆಗಿನ ಆದೇಶಕ್ಕನುಸಾರವಾಗಿ ಜಿಲ್ಲಾಧಿಕಾರಿಯು ಸ್ವತಃ ಅಥವಾ ಬೇರೆಯವರ ಮೂಲಕ ಯಾವುದೇ ಜಮೀನು ಅಥವಾ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಂಡಾಗ ಅದು ಎಲ್ಲಾ ಋಣಭಾರದಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗತಕ್ಕುದು.

(2) ಜಿಲ್ಲಾಧಿಕಾರಿ ಅಥವಾ ಈ ಸಂಬಂಧದಲ್ಲಿ ಅವನಿಂದ ಅಧಿಕಾರ ಪಡೆದ ಯಾವನೇ ವ್ಯಕ್ತಿಯು ಈ ಅಧ್ಯಾಯದ ಮೇರೆಗೆ ಯಾವುದೇ ಜಮೀನು ಅಥವಾ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ ಯಾವನಾದರೂ ವಿರೋಧಿಸಿದರೆ ಅಥವಾ ಅಡಚಣೆ ಉಂಟು ಮಾಡಿದರೆ ಜಿಲ್ಲಾಧಿಕಾರಿಯೇ ಮ್ಯಾಜಿಸ್ಟ್ರೇಟನಾಗಿದ್ದರೆ, ಅಂಥ ಜಮೀನನ್ನು ಅಥವಾ ಕಟ್ಟವನ್ನು ತನಗೆ ಒಪ್ಪಿಸುವಂತೆ ಒತ್ತಾಯಿಸತಕ್ಕುದು ಮತ್ತು ಜಿಲ್ಲಾಧಿಕಾರಿಯೇ ಮ್ಯಾಜಿಸ್ಟ್ರೇಟನಲ್ಲದಿದ್ದರೆ, ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸತಕ್ಕುದು ಮತ್ತು ಅಂಥ ಮ್ಯಾಜಿಸ್ಟ್ರೇಟನು, ಜಮೀನನ್ನು ಅಥವಾ ಕಟ್ಟಡವನ್ನು ಜಿಲ್ಲಾಧಿಕಾರಿಗೆ ಬಿಟ್ಟುಕೊಡುವಂತೆ ಒತ್ತಾಯಿಸತಕ್ಕುದು.

(3) ಈ ಅಧ್ಯಾಯದ ಮೇರೆಗೆ, ಯಾವುದೇ ಜಮೀನನ್ನು ಅಥವಾ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ ಜಿಲ್ಲಾಧಿಕಾರಿಯನ್ನು ಅಥವಾ ಅವನಿಂದ ಪ್ರಾಧಿಕಾರ ಪಡೆದ ಯಾವನೇ ವ್ಯಕ್ತಿಯನ್ನು ವಿರೋಧಿಸುವ ಅಥವಾ ಅವನಿಗೆ ಅಡಚಣೆಯುಂಟು ಮಾಡುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ಸಾವಿರ ರೂ.ಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**64. ಈ ಅಧ್ಯಾಯದ ಮೇರೆಗೆ ಬಾಕಿ ಇರುವ ಮೊತ್ತದ ವಸೂಲಾತಿ.–** 60ನೇ ಪ್ರಕರಣದ ಅಥವಾ 61ನೇ ಪ್ರಕರಣದ ಅಥವಾ 62ನೇ ಪ್ರಕರಣದ ಅನುಸಾರವಾಗಿ ರಾಜ್ಯ ಸರ್ಕಾರಕ್ಕೆ ಮರು ಸಂದಾಯ ಮಾಡಬೇಕಾದ ಅಥವಾ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಉಪಬಂಧಿಸಲಾದ ವಸೂಲಾತಿಯ ಯಾವುದೇ ವಿಧಾನಕ್ಕೆ ಬಾಧಕವಾಗದಂತೆ, ಆ ಮೊತ್ತವು ಅಂಥ ಶಿಕ್ಷಣ ಸಂಸ್ಥೆಯಿಂದ ಅಥವಾ ಆಡಳಿತ ಪರಿಷತ್ತಿನಿಂದ ಬರತಕ್ಕ ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಅಂಥ ಸಂಸ್ಥೆಯ ಸ್ವತ್ತುಗಳಿಂದ ಅಥವಾ ಅದರ ಆಡಳಿತ ಪರಿಷತ್ತಿನಿಂದ ವಸೂಲು ಮಾಡಬಹುದು.

**65. ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ನ್ಯಾಯಾಲಯವು ಜಪ್ತಿ, ಮಾರಾಟ, ಮುಂತಾದುವುಗಳನ್ನು ಮಾಡದಿರುವುದು.–** (1) ನ್ಯಾಯಾಲಯದಿಂದ ಪರಿಹಾರವನ್ನು ನಿರೀಕ್ಷಿಸುತ್ತಿರುವ ಯಾವನೇ ವ್ಯಕ್ತಿಯು, ರಾಜ್ಯ ಸರ್ಕಾರದಿಂದ ಪರಿಹಾರ ಪಡೆಯಲು ಅನುಮತಿ ಪಡೆದಿರುವ ಹೊರತು ಮತ್ತು ಅಂಥ ಅನುಮತಿಯನ್ನು ನ್ಯಾಯಾಲಯದಲ್ಲಿ ದಾಖಲು ಮಾಡಿದ ಹೊರತು, ಯಾವುದೇ ನ್ಯಾಯಾಲಯವು ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸುವ ಮೂಲಕವಾಗಲಿ ಅಥವಾ ಅನ್ಯಥಾ 60ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಜಮೀನು ಅಥವಾ ಕಟ್ಟಡದ ಜಪ್ತಿಯಾಗಲು, ಮಾರಾಟವಾಗಲು ಅಥವಾ ಪ್ರಭಾರಕ್ಕೆ ಒಳಪಡಲು ಬದ್ಧವಾಗತಕ್ಕುದಲ್ಲ.

(2) ಅಂಥ ಅನುಮತಿಯನ್ನು ನೀಡುವಾಗ, ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳನ್ನು ವಿಧಿಸಬಹುದು.

(3) ಮೇಲೆ ಹೇಳಿದಂತೆ ರಾಜ್ಯ ಸರ್ಕಾರದ ಅನುಮತಿಯನ್ನು ಪಡೆದು ಅದನ್ನು ನ್ಯಾಯಾಲಯದಲ್ಲಿ ದಾಖಲು ಮಾಡದಿರುವ ಸಂದರ್ಭದಲ್ಲಿ ಅಥವಾ ಅಂಥ ಅನುಮತಿಯನ್ನು ನೀಡುವಾಗ ಸರ್ಕಾರವು ವಿಧಿಸಿದ ಷರತ್ತನ್ನು ಉಲ್ಲಂಘಿಸಿರುವ ಸಂದರ್ಭದಲ್ಲಿ ಯಾವುದೇ ನ್ಯಾಯಾಲಯವು ಅಂಥ ಯಾವುದೇ ಜಮೀನನ್ನು ಅಥವಾ ಕಟ್ಟಡವನ್ನು ಜಪ್ತಿ ಅಥವಾ ಮಾರಾಟ ಮಾಡಿದ್ದರೆ ಅಥವಾ ಅದರ ಮೇಲೆ ಪ್ರಭಾರವನ್ನು ಸೃಷ್ಟಿಸಿದ್ದರೆ ಸಂದರ್ಭಾನುಸಾರ ಆ ಜಪ್ತಿಯು, ಮಾರಾಟವು ಅಥವಾ ಪ್ರಭಾರವು ರದ್ದಾಗತಕ್ಕುದು ಮತ್ತು ಅನೂರ್ಜಿತವಾಗತಕ್ಕುದು.

## ಅಧ್ಯಾಯ -XII

## ಶಿಕ್ಷಣ ಸಂಸ್ಥೆಗಳ ಆಡಳಿತ ವಹಿಸಿಕೊಳ್ಳುವುದು, ಅಧಿಗ್ರಹಣ ಮತ್ತು ಆರ್ಜನೆ

**66. ಪರಿಭಾಷೆಗಳು.– ಈ ಅಧ್ಯಾಯದಲ್ಲಿ.–**

(ಎ) "ಶಿಕ್ಷಣ ಸಂಸ್ಥೆ" ಎಂದರೆ, ಒಬ್ಬ ವ್ಯಕ್ತಿ, ನಿಕಾಯ ಅಥವಾ ಸ್ಥಳೀಯ ಪ್ರಾಧಿಕಾರವು ನಡೆಸುತ್ತಿರುವ ಮತ್ತು ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದು ಶಿಕ್ಷಣ ನೀಡುತ್ತಿರುವ ಯಾವುದೇ ಶಾಲೆ, ಕಾಲೇಜು ಅಥವಾ ಇತರ ಯಾವುದೇ ಸಂಸ್ಥೆ.

(ಬಿ) "ಹಿತಾಸಕ್ತಿಯುಳ್ಳ ವ್ಯಕ್ತಿಗಳು" ಎಂದರೆ ಈ ಅಧಿನಿಯಮದ ಮೇರೆಗೆ ಶಿಕ್ಷಣ ಸಂಸ್ಥೆಯ ಆಡಳಿತವನ್ನು ವಹಿಸಿಕೊಂಡಿರುವುದಕ್ಕಾಗಿ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯ ಅಥವಾ ಅದಕ್ಕೆ ಸಂಬಂಧಿಸಿದ ಇತರ ಯಾವುದೇ ಸಂಸ್ಥೆಯ ಉದ್ದೇಶಗಳಿಗಾಗಿ ಉಪಯೋಗಿಸುವ ಸ್ವತ್ತನ್ನು ಅಧಿಗ್ರಹಣ ಅಥವಾ ಅರ್ಜನೆ ಮಾಡಿಕೊಂಡಿರುವುದಕ್ಕಾಗಿ ಸಂದಾಯವಾಗಬಹುದಾದ ಮೊಬಲಗಿನಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡಲು ಹಕ್ಕುಳ್ಳ ಎಲ್ಲ ವ್ಯಕ್ತಿಗಳು ಸೇರಿರುತ್ತಾರೆ.

**67. ಸಾರ್ವಜನಿಕ ಹಿತದೃಷ್ಟಿಯಿಂದ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ವಹಿಸಿಕೊಳ್ಳುವುದು.–** ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಸಾರ್ವಜನಿಕ ಹಿತದೃಷ್ಟಿಯಿಂದಾಗಲಿ ಅಥವಾ ಆ ಸಂಸ್ಥೆಗೆ ಯುಕ್ತವಾದ ಆಡಳಿತವನ್ನು ಒದಗಿಸಿಕೊಡುವ ದೃಷ್ಟಿಯಿಂದಾಗಲಿ, ತಾನು ವಹಿಸಿಕೊಳ್ಳಬೇಕೆಂದು ಸರ್ಕಾರವು ಅಭಿಪ್ರಾಯಪಡುವಲ್ಲಿ, ಅದು ಅಂಥ ಶಿಕ್ಷಣ ಸಂಸ್ಥೆಯ ಆಡಳಿತದ ಪ್ರಭಾರವನ್ನು ಹೊಂದಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಯಾವುದೇ ಮನವಿ ಸಲ್ಲಿಸಲು ಒಂದು ತಿಂಗಳ ನೋಟೀಸನ್ನು ಕೊಟ್ಟ ತರುವಾಯ ಒಂದು ಅಧಿಸೂಚನೆ ಹೊರಡಿಸಿ, ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ, [1][ಒಂದು ವರ್ಷದ ಅವಧಿಗೆ][1] ಅದರ ಆಡಳಿತವು ಸರ್ಕಾರದಲ್ಲಿ ನಿಹಿತವಾಗತಕ್ಕದೆಂದು ನಿರ್ದೇಶಿಸಬಹುದು:

1. 1998ರ ಅಧಿನಿಯಮ ಸಂಖ್ಯೆ 8ರ, (ಪ್ರ. 4) ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಯಾವುದೇ ಧಾರ್ಮಿಕ ಸಂಸ್ಥೆಯ, ಧರ್ಮದತ್ತಿಯ ಅಥವಾ ವಕ್ಫ್‌ನ ಆಡಳಿತದಲ್ಲಿರುವ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಅದರ ಆಡಳಿತ ವರ್ಗದ ಸಮ್ಮತಿಯನ್ನು ಮುಂಚಿತವಾಗಿ ಪಡೆಯದೆ ವಹಿಸಿಕೊಳ್ಳತಕ್ಕುದಲ್ಲ:

[1][ಮತ್ತೂ ಪರಂತು, ಶಿಕ್ಷಣ ಸಂಸ್ಥೆಗೆ ಯುಕ್ತವಾದ ಆಡಳಿತವನ್ನು ಒದಗಿಸುವ ದೃಷ್ಟಿಯಿಂದ, ಸದರಿ ಒಂದು ವರ್ಷದ ಅವಧಿ ಮುಗಿದ ತರುವಾಯ ಅಂಥ ಆಡಳಿತವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವುದು ಮುಂದುವರೆಯಬೇಕೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ತಾನು

ಸೂಕ್ತವೆಂದು ಭಾವಿಸಬಹುದಾದಂತೆ ಒಂದು ವರ್ಷವನ್ನು ಮೀರದ ಮತ್ತಷ್ಟು ಅವಧಿಗೆ ಅಂಥ ಆಡಳಿತದ ಮುಂದುವರಿಕೆಗೆ ಅದು ನಿರ್ದೇಶನವನ್ನು ನೀಡಬಹುದು. ಆದಾಗ್ಯೂ, ಹಾಗೆ ಆಡಳಿತವು ರಾಜ್ಯ ಸರ್ಕಾರದಲ್ಲಿ ನಿಹಿತಗೊಂಡು ಮುಂದುವರೆಯತಕ್ಕ ಒಟ್ಟು ಅವಧಿಯು ಯಾವುದೇ ಸಂದರ್ಭದಲ್ಲಿ ಎರಡು ವರ್ಷಗಳನ್ನು ಮೀರತಕ್ಕದ್ದಲ್ಲ.][1]

1. 1998ರ ಅಧಿನಿಯಮ ಸಂಖ್ಯೆ 8ರ, (ಪ್ರ. 4) ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಶಿಕ್ಷಣ ಸಂಸ್ಥೆಯೆಂಬುದರಲ್ಲಿ, ಆ ಉಪಪ್ರಕರಣದ ಮೇರೆಗೆ ಆಡಳಿತವನ್ನು ವಹಿಸಿಕೊಳ್ಳುವ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ (ಈ ಅಧ್ಯಾಯದಲ್ಲಿ ಇನ್ನು ಮುಂದೆ ಸದರಿ ದಿನಾಂಕವೆಂದು ಉಲ್ಲೇಖಿಸಲಾಗಿದೆ) ಇದ್ದಂತೆ ಅದರ ಎಲ್ಲ ಆಸ್ತಿಗಳು, ಹಕ್ಕುಗಳು ಮತ್ತು ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಧಿಕಾರಗಳು ಮತ್ತು ಜಮೀನು ಮತ್ತು ಕಟ್ಟಡಗಳು, ಭೂಮಿ, ದಾಸ್ತಾನುಗಳು, ಉಪಕರಣಗಳು ಮತ್ತು ವಾಹನಗಳು ಸೇರಿದಂತೆ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳು, ನಗದು ಬಾಕಿಗಳು, ಮೀಸಲು ನಿಧಿ, ಬಂಡವಾಳ ಹೂಡಿಕೆ ಮತ್ತು ಪುಸ್ತಕ ಋಣಗಳು ಹಾಗೂ ಅದರ ಒಡೆತನದಲ್ಲಿ, ಸ್ವಾಧೀನದಲ್ಲಿ, ಅಧಿಕಾರದಲ್ಲಿ ಅಥವಾ ನಿಯಂತ್ರಣದಲ್ಲಿದ್ದಂಥ ಸ್ವತ್ತಿನಿಂದ ಉದ್ಭವಿಸುವ ಇತರ ಎಲ್ಲ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ಲೆಕ್ಕಪುಸ್ತಕಗಳು, ರಿಜಿಸ್ಟರುಗಳು ಮತ್ತು ಯಾವುದೇ ಸ್ವರೂಪದ ದಸ್ತಾವೇಜುಗಳು ಸೇರಿರುವವು ಎಂದು ಭಾವಿಸತಕ್ಕುದು.

(3) ಶೈಕ್ಷಣಿಕ ಸಂಸ್ಥೆಯ ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ವ್ಯಕ್ತವಾದ ಅಥವಾ ಇಂಗಿತವಾದ ಕರಾರು ಅಥವಾ ಕರಾರು ಅಲ್ಲದ ಇತರ ವ್ಯವಸ್ಥೆ ಅಥವಾ 61ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಒಪ್ಪಂದವು ಅದರ ಆಡಳಿತಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಸದರಿ ದಿನಾಂಕದಂದು ಕೊನೆಗೊಂಡಿದೆ ಎಂಬುದಾಗಿ ಭಾವಿಸತಕ್ಕುದು.

(4) ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ನಿಕಟ ಪೂರ್ವದಲ್ಲಿ ಅವುಗಳ ಆಡಳಿತವು ಯಾವ ವ್ಯಕ್ತಿಗಳಲ್ಲಿ ನಿಹಿತವಾಗಿದ್ದಿತ್ತೋ, ಅದು ಆ ಎಲ್ಲಾ ವ್ಯಕ್ತಿಗಳಲ್ಲಿ ಸದರಿ ದಿನಾಂಕದಿಂದ ಹಾಗೆ ನಿಹಿತವಾಗಿರುವುದು ನಿಂತುಹೋಗತಕ್ಕುದು ಮತ್ತು ಆ ಸದರಿ ವ್ಯಕ್ತಿಗಳು ತಮ್ಮ ಹುದ್ದೆಗಳನ್ನು ಸದರಿ ದಿನಾಂಕದಿಂದ ತೆರವು ಮಾಡಿದ್ದಾರೆಂದು ಭಾವಿಸತಕ್ಕುದು.

(5) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವ ವ್ಯಕ್ತಿಯ ಸಂಬಂಧದಲ್ಲಿ ಆಡಳಿತದ ಯಾವುದೇ ಕರಾರು ಅಥವಾ ಇತರ ವ್ಯವಸ್ಥೆಯು, (3)ನೇ ಉಪಪ್ರಕರಣದಲ್ಲಿರುವ ಉಪಬಂಧಗಳ ಕಾರಣದಿಂದಾಗಿ ಮುಕ್ತಾಯವಾಗಿರುವುದೋ ಅಥವಾ (4)ನೇ ಉಪಪ್ರಕರಣದಲ್ಲಿರುವ ಉಪಬಂಧಗಳ ಕಾರಣದಿಂದಾಗಿ ಅವನು ಯಾವುದೇ ಹುದ್ದೆಯನ್ನು ಹೊಂದಿರುವುದು ನಿಂತುಹೋಗಿರುವುದೋ, ಆ ವ್ಯಕ್ತಿಯು, ಸಂದರ್ಭಾನುಸಾರ ಆಡಳಿತದ ಕರಾರು ಅಥವಾ ಇತರ ವ್ಯವಸ್ಥೆಯು ಅವಧಿಗೆ ಮುಂಚೆ ಮುಕ್ತಾಯವಾದ ಬಗ್ಗೆ ಅಥವಾ ಆಡಳಿತ ವ್ಯವಸ್ಥೆಯ ಸಮಾಪ್ತಿಯ ಬಗ್ಗೆ ಅಥವಾ ಹುದ್ದೆಯನ್ನು ಕಳೆದುಕೊಂಡು ಬಗ್ಗೆ ಯಾವುದೇ ಪರಿಹಾರವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗತಕ್ಕುದಲ್ಲ.

(6) ಯಾವುದೇ ನ್ಯಾಯಾಲಯದ ನ್ಯಾಯಾಧಿಕರಣದ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾವ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಆ ಶಿಕ್ಷಣ ಸಂಸ್ಥೆಯು, ಅಥವಾ ಅದರ ಯಾವುದೇ ಭಾಗವು ಅಥವಾ ಅದಕ್ಕೆ ಸಂಬಂಧಿಸಿದ ಆಸ್ತಿಗಳು ನಿಹಿತವಾಗಿರುವವೋ ಆ ಪ್ರತಿಯೊಬ್ಬ ವ್ಯಕ್ತಿಯು, ರಾಜ್ಯ ಸರ್ಕಾರಕ್ಕಾಗಿ ಮತ್ತು ರಾಜ್ಯ ಸರ್ಕಾರದ ಪರವಾಗಿ ಅಂಥ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆಯ ಉದ್ದೇಶದಿಂದ, ರಾಜ್ಯ

ಸರ್ಕಾರವು ನೇಮಿಸಿರುವ ವಿಶೇಷ ಅಧಿಕಾರಿಗೆ ಅಥವಾ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿಲ್ಲದಿದ್ದರೆ, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಇತರ ವ್ಯಕ್ತಿಗೆ ಅವುಗಳನ್ನು ವರ್ಗಾವಣೆ ಮಾಡತಕ್ಕುದು.

(7) ಶಿಕ್ಷಣ ಸಂಸ್ಥೆಯನ್ನು ವಹಿಸಿಕೊಳ್ಳುವ ಮೊದಲು ಅದರ ಸಂಬಂಧದಲ್ಲಿ ಖಾಸಗಿ ಆಡಳಿತ ವರ್ಗವು ವಹಿಸಿರುವಂಥ ಯಾವುವೇ ಹೊಣೆಗಾರಿಕೆಗಳು, ಸದರಿ ಆಡಳಿತ ಪರಿಷತ್ತಿನ ವಿರುದ್ಧ ಜಾರಿಗೊಳಿಸಲು ಅವಕಾಶವಿರತಕ್ಕುದೇ ಹೊರತು, ರಾಜ್ಯ ಸರ್ಕಾರದ ಅಥವಾ ವಿಶೇಷಾಧಿಕಾರಿಯ ವಿರುದ್ಧವಲ್ಲವೆಂದು ಯಾವುದೇ ಸಂದೇಹದ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

(8) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತವನ್ನು, ರಾಜ್ಯ ಸರ್ಕಾರದಲ್ಲಿ ಅಥವಾ ಆಡಳಿತ ಪರಿಷತ್ತಿನಲ್ಲಿ ನಿಹಿತಗೊಳಿಸುವ ಸಂಬಂಧದಲ್ಲಿ ಸಂದಾಯವಾಗತಕ್ಕ ಮೊಬಲಗು, ಶಿಕ್ಷಣ ಸಂಸ್ಥೆಯು ಆಸ್ತಿತ್ವದಲ್ಲಿರುವ ಅವಧಿ ಅಥವಾ ಹಾಗೆ ಶಿಕ್ಷಣ ಸಂಸ್ಥೆಯು ನಿಹಿತವಾದ ದಿನಾಂಕದ ನಿಕಟ ಪೂರ್ವದ ಐದು ಅನುಕ್ರಮ ಲೆಕ್ಕ ವರ್ಷಗಳ ಅವಧಿ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಅವಧಿಯ ಸರಾಸರಿ ನಿವ್ವಳ ವಾರ್ಷಿಕ ಅಧಿಕ ಆದಾಯದ ಮೊಬಲಗಿಗೆ ಸಮನಾಗಿರತಕ್ಕುದು:

ಪರಂತು, ಯಾವ ನ್ಯಾಸಗಳ ಅಥವಾ ಆಡಳಿತ ಪರಿಷತ್ತುಗಳ ಅಧೀನದಲ್ಲಿ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆಯೋ ಅವು ಅಂಥ ಆ ಸಂಸ್ಥೆಯನ್ನು ನಡೆಸಲು ವ್ಯವಸ್ಥೆಯನ್ನು ಮಾಡಿದ್ದರೆ ಅಂಥ ಯಾವುದೇ ಹಣವನ್ನು ಸಂದಾಯ ಮಾಡತಕ್ಕುದಲ್ಲ.

**ವಿವರಣೆ.–** ಈ ಉಪಪ್ರಕರಣದಲ್ಲಿ "ಲೆಕ್ಕ ಶೀರ್ಷಿಕೆ" ಎಂದರೆ ಯಾವುದೇ ವರ್ಷದ ಜುಲೈ ಮೊದಲನೇ ದಿನಾಂಕದಿಂದ ಪ್ರಾರಂಭವಾಗಿ ಆ ವರ್ಷದ ನಂತರದ ವರ್ಷದ ಜೂನ್ 30ಕ್ಕೆ ಮುಗಿಯುವ ವರ್ಷ.

(9) (8)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಅಧಿನಿಯಮದ ಮೇರೆಗಿನ ನಿಯಮಗಳಿಗೆ ಒಳಪಟ್ಟು, ಸಕ್ಷಮ ಪ್ರಾಧಿಕಾರವು ಶಿಕ್ಷಣ ಸಂಸ್ಥೆಯಲ್ಲಿ ಆಸಕ್ತನಾಗಿರುವ ವ್ಯಕ್ತಿಗೆ ನಿಯಮಿಸಲಾದ ರೀತಿಯಲ್ಲಿ ಮತ್ತು ಅಂಥ ಸಮಯದೊಳಗೆ ಸಂದಾಯ ಮಾಡಬಹುದು.

[1][**"67ಎ. ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ಬಿಟ್ಟುಕೊಡುವುದು.–** (1) 67ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ, ಶಿಕ್ಷಣ ಸಂಸ್ಥೆಯ ಆಡಳಿತವು ಯಾವುದೇ ನ್ಯಾಯಾಲಯದ ಆದೇಶ, ಯಾವುದಾದರೂ ಇದ್ದರೆ ಅದಕ್ಕೆ ಅನುಸಾರವಾಗಿ ನಿಹಿತವಾಗಿರತಕ್ಕದ್ದು ಮತ್ತು ಅಂಥ ಯಾವ ಆದೇಶವೂ ಇಲ್ಲದಿದ್ದರೆ, ಅಂಥ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತಿನಲ್ಲಿ ಅಥವಾ ಆಡಳಿತ ಸಮಿತಿಯಲ್ಲಿ (ಯಾವುದೇ ಹೆಸರಿನಿಂದ ಕರೆಯಲಾಗುವ) ಅಥವಾ ಸಂದರ್ಭಾನುಸಾರ ಅದಕ್ಕೆ ಹಕ್ಕು ಹೊಂದಿರುವ ಅಂಥ ಇತರ ನಿಕಾಯ ಅಥವಾ ವ್ಯಕ್ತಿಯಲ್ಲಿ ನಿಹಿತವಾಗಿರತಕ್ಕದ್ದು.

(2) 67ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ರಾಜ್ಯ ಸರ್ಕಾರದಲ್ಲಿ ಶಿಕ್ಷಣ ಸಂಸ್ಥೆಯ ಆಡಳಿತವನ್ನು ನಿಹಿತಗೊಳಿಸಿದ ಉದ್ದೇಶವು ಈಡೇರಿದೆಯೆಂದು ಅಥವಾ ಯಾವುದೇ ಇತರ ಕಾರಣಕ್ಕಾಗಿ ಅಂಥ ಶಿಕ್ಷಣ ಸಂಸ್ಥೆಯ ಆಡಳಿತವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವುದು ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ, ಅದು, ರಾಜ್ಯಪತ್ರದಲ್ಲಿ ಒಂದು ಆದೇಶ ಹೊರಡಿಸಿ, ಆ ಆದೇಶದಲ್ಲಿನ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಬಿಟ್ಟುಕೊಡಬಹುದು.

(3) (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ ಶಿಕ್ಷಣ ಸಂಸ್ಥೆಯ ಆಡಳಿತವು ಯಾವುದೇ ನ್ಯಾಯಾಲಯದ ಆದೇಶ, ಯಾವುದಾದರೂ ಇದ್ದರೆ ಅದಕ್ಕೆ ಅನುಸಾರವಾಗಿ ವರ್ಗಾಯಿಸತಕ್ಕದ್ದು ಮತ್ತು ಅಂಥ ಯಾವ ಆದೇಶವೂ ಇಲ್ಲದಿದ್ದರೆ, ಆ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತಿಗೆ ಅಥವಾ ಆಡಳಿತ ಸಮಿತಿಗೆ (ಯಾವುದೇ ಹೆಸರಿನಿಂದ ಕರೆಯಲಾಗುವ) ಅಥವಾ ಸಂದರ್ಭಾನುಸಾರ, ಅದಕ್ಕೆ ಹಕ್ಕುಹೊಂದಿರುವ ಅಂಥ ಇತರ ನಿಕಾಯಕ್ಕೆ ಅಥವಾ ವ್ಯಕ್ತಿಗೆ ವರ್ಗಾಯಿಸತಕ್ಕದ್ದು.”][1]

1. 1998ರ ಅಧಿನಿಯಮ ಸಂಖ್ಯೆ 8ರ, (ಪ್ರ.. 4) ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. (ಕರ್ನಾಟಕ ವಿಶೇಷ ರಾಜ್ಯಪತ್ರ 11-4-1998)

**68. ಉದ್ಯೋಗದ ಕರಾರನ್ನು ಮುಕ್ತಾಯಗೊಳಿಸುವ ಅಧಿಕಾರ.–** ಶಿಕ್ಷಣ ಸಂಸ್ಥೆಯ ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಆಡಳಿತ ಪರಿಷತ್ತು ಶಿಕ್ಷಣ ಸಂಸ್ಥೆಗಳೊಂದಿಗೆ ಮಾಡಿಕೊಂಡ ಉದ್ಯೋಗದ ಕರಾರು ಅನುಚಿತ ದುರ್ಭರವಾದ ಕರಾರೆಂದು ರಾಜ್ಯ ಸರ್ಕಾರವು ಅಥವಾ 67ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ವಿಶೇಷಾಧಿಕಾರಿಯು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು ಅಥವಾ ವಿಶೇಷಾಧಿಕಾರಿಯು ನೌಕರನಿಗೆ ಒಂದು ಲಿಖಿತ ನೋಟೀಸನ್ನು ಕೊಟ್ಟು ಅಥವಾ ಅದಕ್ಕೆ ಬದಲಾಗಿ ಒಂದು ತಿಂಗಳ ಸಂಬಳ ಅಥವಾ ಮಜೂರಿ ಕೊಟ್ಟು ಉದ್ಯೋಗದ ಕರಾರನ್ನು ಮುಕ್ತಾಯಗೊಳಿಸಬಹುದು.

**69. ದುರ್ಭಾವನೆಯಿಂದ ಮಾಡಿಕೊಂಡ ಕರಾರು ಇತ್ಯಾದಿಗಳನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.–** (1) ಶಿಕ್ಷಣ ಸಂಸ್ಥೆಗೆ ಅಥವಾ ಶಿಕ್ಷಣ ಸಂಸ್ಥೆಯಿಂದ ಮಾಡಲಾದ ಸೇವೆ, ಮಾರಾಟ ಅಥವಾ ಸರಬರಾಜು ಇವುಗಳ ಸಂಬಂಧದಲ್ಲಿ, ಶಿಕ್ಷಣ ಸಂಸ್ಥೆಯ ಸಂಬಂಧದಲ್ಲಿ ಆಡಳಿತ ಪರಿಷತ್ತು ಮತ್ತು ಇತರ ಯಾವೊಬ್ಬ ವ್ಯಕ್ತಿಯ ನಡುವೆ, ಸದರಿ ದಿನಾಂಕದ ನಿಕಟ ಪೂರ್ವದ ಎರಡು ವರ್ಷಗಳ ಅವಧಿಯ ಯಾವುದೇ ಸಮಯದಲ್ಲಿ ಮಾಡಿಕೊಳ್ಳಲಾದ ಮತ್ತು ಶಿಕ್ಷಣ ಸಂಸ್ಥೆಯ ಆಡಳಿತವನ್ನು ವಹಿಸಿಕೊಳ್ಳುವುಕ್ಕೆ ಮೊದಲು ಜಾರಿಯಲ್ಲಿದ್ದ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ದುರ್ಭಾವನೆಯಿಂದ ಮಾಡಿಕೊಳ್ಳಲಾಗಿದೆಯೆಂದು ಅಥವಾ ಅದು ಶಿಕ್ಷಣ ಸಂಸ್ಥೆಯ ಹಿತಾಸಕ್ತಿಗೆ ಪ್ರತಿಕೂಲವೆಂದು ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಯೋಚಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಅಭಿಪ್ರಾಯಪಟ್ಟರೆ, ಅದು ಸದರಿ ದಿನಾಂಕದಿಂದ ನೂರ ಎಂಭತ್ತು ದಿನಗಳೊಳಗಾಗಿ ಅಂಥ ಕರಾರು ಅಥವಾ ಒಪ್ಪಂದವನ್ನು ರದ್ದುಗೊಳಿಸಿ ಅಥವಾ ಬದಲಾಯಿಸಿ (ಬೇಷರಾತ್ತಾಗಿ ಅಥವಾ ವಿಧಿಸುವುದು ಸೂಕ್ತವೆಂದು ಯೋಚಿಸಬಹುದಾದ ಷರತ್ತುಗಳಿಗೆ ಒಳಪಟ್ಟು) ಒಂದು ಆದೇಶವನ್ನು ಹೊರಡಿಸಬಹುದು ಮತ್ತು ಆ ತರುವಾಯ ಆ ಕರಾರು ಅಥವಾ ಒಪ್ಪಂದವು ಆ ಆದೇಶಕ್ಕೆ ಅನುಸಾರವಾಗಿ ಪರಿಣಾಮಕಾರಿಯಾಗತಕ್ಕುದು:

ಪರಂತು, ಅಂಥ ಕರಾರು ಅಥವಾ ಒಪ್ಪಂದವನ್ನು ಮಾಡಿಕೊಂಡಿರುವ ಪಕ್ಷಕಾರರಿಗೆ ಈ ಸಂಬಂಧದಲ್ಲಿ ಮನವಿ ಮಾಡಿಕೊಳ್ಳಲು ಒಂದು ತಿಂಗಳ ನೋಟೀಸ್ ಕೊಟ್ಟ ಹೊರತು ಆ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ರದ್ದುಪಡಿಸತಕ್ಕುದಲ್ಲ ಅಥವಾ ಬದಲಾಯಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆದೇಶ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಯಾವ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಶಿಕ್ಷಣ ಸಂಸ್ಥೆಯು ಇರುವುದೋ ಆ ನ್ಯಾಯಾಲಯದ ಸ್ಥಳೀಯ ಪರಿಮಿತಿಗಳೊಳಗೆ ಮೂಲ ಅಧಿಕಾರ ವ್ಯಾಪ್ತಿಯನ್ನುಳ್ಳ ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ಅಂಥ ಆದೇಶವನ್ನು ಮಾರ್ಪಾಟುಗೊಳಿಸಲು ಅಥವಾ ರದ್ದುಗೊಳಿಸಲು ಮನವಿ ಮಾಡಿಕೊಳ್ಳಬಹುದು ಮತ್ತು ಆ ತರುವಾಯ ಅಂಥ ನ್ಯಾಯಾಲಯವು ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟುಗೊಳಿಸಬಹುದು ಅಥವಾ ವಿಪರ್ಯಯಗೊಳಿಸಬಹುದು.

**70. ಸ್ವಇಚ್ಛಾ ನ್ಯಾಸಗಳ ರಚನೆಯನ್ನು ಅನೂರ್ಜಿತಗೊಳಿಸುವುದು.–** ಶಿಕ್ಷಣ ಸಂಸ್ಥೆಯ ಮೂಲಕ ಅಥವಾ ಅದರ ಪರವಾಗಿ (ಸಾಮಾನ್ಯ ವ್ಯವಹಾರ ಕ್ರಮದಲ್ಲಿ ಮಾಡಿದ ಅಥವಾ ಮೌಲ್ಯವುಳ್ಳ ಪ್ರತಿಫಲಕ್ಕಾಗಿ ಮತ್ತು ಸದ್ಭಾವನೆಯಿಂದ ಖರೀದಿದಾರನ ಪರವಾಗಿ ಮಾಡಿದ ವರ್ಗಾವಣೆ ಅಥವಾ ಒಪ್ಪಿಸುವಿಕೆಯಲ್ಲದ) ಚರ ಅಥವಾ ಸ್ಥಿರ ಸ್ವತ್ತಿನ ಯಾವುದೇ ವರ್ಗಾವಣೆಯನ್ನು ಅಥವಾ ಒಪ್ಪಿಸುವಿಕೆಯನ್ನು ಸದರಿ ದಿನಾಂಕದ ನಿಕಟ ಪೂರ್ವದ ಒಂದು ವರ್ಷದ ಅವಧಿಯೊಳಗೆ ಮಾಡಿದ್ದರೆ, ಅದು ರಾಜ್ಯ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ ವಿಶೇಷ ಅಧಿಕಾರಿಗೆ ಸಂಬಂಧಿಸಿದಂತೆ ಅನೂರ್ಜಿತವಾಗತಕ್ಕುದು.

**71. ಶಿಕ್ಷಣ ಸಂಸ್ಥೆಯ ಅಧಿಗ್ರಹಣ.–** (1) ಯಾವುದೇ ಶಿಕ್ಷಣ ಸಂಸ್ಥೆಗೆ ನೀಡಿದ ಮನ್ನಣೆಯನ್ನು ಅಥವಾ ಅನುಮತಿಯನ್ನು, 39ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಥವಾ ಅನ್ಯಥಾ ರಾಜ್ಯ ಸರ್ಕಾರವು ಹಿಂತೆಗೆದುಕೊಂಡಿರುವಲ್ಲಿ ಅಥವಾ ಶಿಕ್ಷಣ ಸಂಸ್ಥೆಯನ್ನು ಅದರ ಶೈಕ್ಷಣಿಕ ವರ್ಷದ ಕೊನೆಯ ಕೆಲಸದ ದಿನಾಂಕಕ್ಕೆ ಮುಂಚೆ ಮುಚ್ಚಿರುವಲ್ಲಿ ಮತ್ತು ಆ ಶಿಕ್ಷಣ ಸಂಸ್ಥೆಯ ಮನ್ನಣೆಯನ್ನು ಅಥವಾ ಅನುಮತಿಯನ್ನು ಹಿಂತೆಗೆದುಕೊಳ್ಳುವುದಕ್ಕೆ ಮುಂಚೆ ಅಥವಾ ಆ ಶಿಕ್ಷಣ ಸಂಸ್ಥೆಯನ್ನು ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಇತರ ಸಂಸ್ಥೆಯನ್ನು ಅಂದರೆ, ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ, ನೌಕರರ ವಾಸಕ್ಕಾಗಿರುವ ವಾಸಗೃಹಗಳು, ಆಟದ ಮೈದಾನ ಇಂಥವುಗಳಿಗಾಗಿರುವ ಇತರ ಸಂಸ್ಥೆಯನ್ನು ಮುಚ್ಚುವುದಕ್ಕೆ ಮುಂಚೆ, ಅದರ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಅಧಿಗ್ರಹಣ ಮಾಡುವುದು ಅವಶ್ಯಕವೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದರೆ, ಆಗ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ರಾಜ್ಯ ಸರ್ಕಾರವು, ಆ ಶಿಕ್ಷಣ ಸಂಸ್ಥೆಯ ಮನ್ನಣೆಯನ್ನು ಅಥವಾ ಅನುಮತಿಯನ್ನು ಹಿಂತೆಗೆದುಕೊಂಡ ಅಥವಾ ಸಂದರ್ಭಾನುಸಾರ ಸಂಸ್ಥೆಯನ್ನು ಮುಚ್ಚಿದ ದಿನಾಂಕದಿಂದ ಮೂರು ತಿಂಗಳೊಳಗೆ ಅಂಥ ಸ್ವತ್ತನ್ನು ಅಧಿಗ್ರಹಣ ಮಾಡಬಹುದು ಮತ್ತು ಆ ಅಧಿಗ್ರಹಣ ಸಂಬಂಧದಲ್ಲಿ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ ಹೆಚ್ಚಿನ ಆದೇಶಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಅಧಿಗ್ರಹಣ ಮಾಡಿಕೊಳ್ಳುವುದಕ್ಕೆ ಮುಂಚೆ ರಾಜ್ಯ ಸರ್ಕಾರವು,–

(ಎ) ಆಡಳಿತ ಪರಿಷತ್ತಿಗೆ ಅಥವಾ ಆ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುವ ಯಾವನೇ ಇತರ ವ್ಯಕ್ತಿಗೆ ಲಿಖಿತದಲ್ಲಿ ನೋಟೀಸು ಕೊಡುವ ಮೂಲಕ ಆ ಸ್ವತ್ತನ್ನು ಏಕೆ ಅಧಿಗ್ರಹಣ ಮಾಡಿಕೊಳ್ಳಬಾರದೆಂಬುದಕ್ಕೆ ಅಂಥ ನೋಟೀಸು ಜಾರಿಯಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಕಾರಣ ತೋರಿಸುವಂತೆ ಅದನ್ನು ಅಥವಾ ಅವನನ್ನು ಕೇಳತಕ್ಕುದು ಮತ್ತು ಆಡಳಿತ ಪರಿಷತ್ತಿನ ಅಥವಾ ಇತರ ವ್ಯಕ್ತಿಯ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕುದು; ಮತ್ತು

(ಬಿ) ರಾಜ್ಯ ಸರ್ಕಾರವು ಆದೇಶವನ್ನು ಹೊರಡಿಸಿ, ಆಡಳಿತ ಪರಿಷತ್ತು ಅಥವಾ ಯಾವನೇ ವ್ಯಕ್ತಿಯು ಸಕ್ಷಮ ಪ್ರಾಧಿಕಾರಿಯ ಅನುಮತಿ ಇಲ್ಲದೆ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂರು ತಿಂಗಳುಗಳಿಗೆ ಮೀರದ ಅವಧಿಯು ಮುಗಿಯುವವರೆಗೆ ಆ ಸ್ವತ್ತನ್ನು ವಿಲೆ ಮಾಡತಕ್ಕುದಲ್ಲ, ಅದರ ಸ್ವರೂಪವನ್ನು ವ್ಯತ್ಯಸ್ತಗೊಳಿಸತಕ್ಕುದಲ್ಲ, ಅದನ್ನು ಗುತ್ತಿಗೆಗೆ ಕೊಡತಕ್ಕುದಲ್ಲ ಅಥವಾ ಯಾವುದೇ ರೀತಿಯಲ್ಲಿ ಆ ಬಗ್ಗೆ ವ್ಯವಹರಿಸತಕ್ಕುದಲ್ಲವೆಂದು ನಿರ್ದೇಶಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಅಧಿಗ್ರಹಣ ಮಾಡಿಕೊಂಡಿರುವಲ್ಲಿ ರಾಜ್ಯ ಸರ್ಕಾರವು,–

(ಎ) ಯಾವುದೇ ಶೈಕ್ಷಣಿಕ ಉದ್ದೇಶಕ್ಕಾಗಿ ಅಂಥ ಸ್ವತ್ತನ್ನು ಉಪಯೋಗಿಸಬಹುದು ಅಥವಾ ಆ ಬಗ್ಗೆ ವ್ಯವಹರಿಸಬಹುದು; ಅಥವಾ

(ಬಿ) ರಾಜ್ಯ ಸರ್ಕಾರವು ಆದೇಶವನ್ನು ಹೊರಡಿಸಿ, ರಾಜ್ಯ ಸರ್ಕಾರಕ್ಕೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬಾಡಿಗೆ ಮತ್ತು ಇತರ ಮೊತ್ತಗಳನ್ನು ಸಂದಾಯ ಮಾಡುವುದಕ್ಕೆ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳನ್ನು ಪಾಲಿಸುವುದಕ್ಕೆ ಒಳಪಟ್ಟು ಯಾವನೇ ವ್ಯಕ್ತಿಯು ಅಥವಾ ನಿಕಾಯವು ಅಥವಾ ಸ್ಥಳೀಯ ಪ್ರಾಧಿಕಾರವು ಯಾವುದೇ ಅಂಥ ಉದ್ದೇಶಕ್ಕಾಗಿ ಅಂಥ ಸ್ವತ್ತನ್ನು ಉಪಯೋಗಿಸಲು ಅಥವಾ ವ್ಯವಹರಿಸಲು ಅನುಮತಿಸಬಹುದು.

**72. ಸ್ವತ್ತನ್ನು ಕ್ಷಿಪ್ರವಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅಧಿಕಾರ.–** (1) 71ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಉಲ್ಲಂಘಿಸಿ ಯಾವುದೇ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯಿಂದ, ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು ಆ ಸ್ವತ್ತಿನ ಸ್ವಾಧೀನತೆಯನ್ನು ಕ್ಷಿಪ್ರವಾಗಿ ತಪ್ಪಿಸತಕ್ಕುದು ಮತ್ತು ಕಟ್ಟಡದ ಸಂಬಂಧದಲ್ಲಿ, ಆ ಕಟ್ಟಡವನ್ನು ಪ್ರವೇಶಿಸಲು ಅಂಥ ಅಧಿಕಾರಿಗೆ ಮುಕ್ತ ಅವಕಾಶವಿರದಿದ್ದರೆ, ದೇಶದ ಸಂಪ್ರದಾಯಗಳಗನುಸಾರವಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಮಹಿಳೆಯರಿಗೆ ಹೊರಕ್ಕೆ ಹೋಗುವಂತೆ ಯುಕ್ತ ಎಚ್ಚರಿಕೆ ಕೊಟ್ಟು ಸೌಲಭ್ಯವನ್ನು ಕಲ್ಪಿಸಿಕೊಟ್ಟ ತರುವಾಯ ಯಾವುದೇ ಬೀಗವನ್ನು ಅಥವಾ ಚಿಲಕವನ್ನು ತೆಗೆಯಬಹುದು ಅಥವಾ ತೆರೆಯಬಹುದು ಅಥವಾ ಯಾವುದೇ ಬಾಗಿಲನ್ನು ಮುರಿದು ತೆರೆಯಬಹುದು ಅಥವಾ ಹಾಗೆ ಅವನ ಸ್ವಾಧೀನತೆಯನ್ನು ತಪ್ಪಿಸುವುದಕ್ಕೆ ಅವಶ್ಯಕವಾದ ಯಾವುದೇ ಇತರ ಕ್ರಮವನ್ನು ಕೈಕೊಳ್ಳಬಹುದು.

(2) ಯಾವನೇ ಅಂಥ ಅಧಿಕಾರಿಗೆ, ಅಂಥ ಅಧಿಕಾರವನ್ನು ಚಲಾಯಿಸುವಾಗ ಅಥವಾ ಅಂಥ ಕರ್ತವ್ಯವನ್ನು ನಿರ್ವಹಿಸುವಾಗ, ಅಡ್ಡಿಪಡಿಸಿದರೆ ಆ ಕ್ಷೇತ್ರದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಧೀಶರು, ಅಂಥ ಅಧಿಕಾರಿಯು ಮನವಿಯನ್ನು ಬರೆದುಕೊಟ್ಟ ಮೇಲೆ, ಅಂಥ ಅಧಿಕಾರವನ್ನು ಚಲಾಯಿಸಲು ಅಥವಾ ಅಂಥ ಕರ್ತವ್ಯವನ್ನು ನಿರ್ವಹಿಸಲು ಆ ಅಧಿಕಾರಿಗೆ ಸಾಧ್ಯವಾಗುವಂತೆ ಅವಶ್ಯಕವಾದ ನೆರವು ನೀಡಲು ಸಬ್ ಇನ್‌ಸ್ಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಯಾವನೇ ಪೋಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು.

**73. ಅಧಿಗ್ರಹಣದಿಂದ ಬಿಡುಗಡೆ ಮತ್ತು ಹೊಣೆಗಾರಿಕೆಯಿಂದ ರಾಜ್ಯ ಸರ್ಕಾರದ ವಿಮುಕ್ತಿ.–** (1) ರಾಜ್ಯ ಸರ್ಕಾರವು, ಈ ಅಧ್ಯಾಯದ ಮೇರೆಗೆ ಅಧಿಗ್ರಹಣದ ಮೂಲಕ ಸ್ವಾಧೀನಪಡಿಸಿಕೊಂಡ ಯಾವುದೇ ಸ್ವತ್ತನ್ನು ಯಾವುದೇ ಸಮಯದಲ್ಲಿ ಬಿಡುಗಡೆ ಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ ಹಾಗೆ ಬಿಡುಗಡೆ ಮಾಡಲಾದ ಸ್ವತ್ತಿನ ಸ್ವಾಧೀನತೆಯನ್ನು ಯಾರ ಸ್ವಾಧೀನತೆಯಿಂದ ಸ್ವತ್ತನ್ನು ವಹಿಸಿಕೊಳ್ಳಲಾಗಿತ್ತೋ ಅಂಥ ಆಡಳಿತ ಪರಿಷತ್ತಿಗೆ ಅಥವಾ ಯಾವನೇ ವ್ಯಕ್ತಿಗೆ, ಅಥವಾ ಅಂಥ ಯಾವುದೇ ಆಡಳಿತ ಪರಿಷತ್ತು ಅಥವಾ ವ್ಯಕ್ತಿಯು ಇರದಿದ್ದರೆ ಯಾವ ವ್ಯಕ್ತಿಯು ಅಂಥ ಸ್ವತ್ತಿನ ಸ್ವಾಧೀನತೆಯನ್ನು ಪಡೆಯಲು ಹಕ್ಕುಳ್ಳವನೆಂದು ರಾಜ್ಯ ಸರ್ಕಾರವು ಭಾವಿಸುವುದೋ ಆ ವ್ಯಕ್ತಿಗೆ ವಹಿಸಿಕೊಡತಕ್ಕುದು ಮತ್ತು ಆ ರೀತಿ ಸ್ವಾಧೀನತೆಯನ್ನು ವಹಿಸಿಕೊಟ್ಟ ಮೇಲೆ, ಯಾವ ವ್ಯಕ್ತಿಗೆ ಸ್ವತ್ತಿನ ಸ್ವಾಧೀನತೆಯನ್ನು ವಹಿಸಿಕೊಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಕಾನೂನು ಕ್ರಮಾನುಸಾರವಾಗಿ ಯಾವನೇ ಇತರ ವ್ಯಕ್ತಿಯು ಆ ಸ್ವತ್ತಿನ ಸಂಬಂಧದಲ್ಲಿ ಜಾರಿಗೊಳಿಸಲು ಹಕ್ಕುಳ್ಳಂಥ ಎಲ್ಲ ಹೊಣೆಗಾರಿಕೆಗಳಿಂದ ರಾಜ್ಯ ಸರ್ಕಾರವು ಸಂಪೂರ್ಣ ವಿಮುಕ್ತವಾಗಿರತಕ್ಕುದು.

(2) ಯಾವುದೇ ಅಂಥ ಸ್ವತ್ತಿನ ಸ್ವಾಧೀನತೆಯನ್ನು ಯಾವ ವ್ಯಕ್ತಿಗೆ ವಹಿಸಿಕೊಡಬೇಕಾಗಿದೆಯೋ ಆ ವ್ಯಕ್ತಿ ಸಿಗದಿದ್ದರೆ, ಅಥವಾ ಅವನ ಪರವಾಗಿ ಅಂಥ ಸ್ವತ್ತಿನ ಸ್ವಾಧೀನತೆ ಪಡೆಯಲು ಅಧಿಕೃತಗೊಂಡ ಅವನ ಏಜೆಂಟನು ಅಥವಾ ಇತರ ವ್ಯಕ್ತಿ ಇರದಿದ್ದರೆ, ರಾಜ್ಯ ಸರ್ಕಾರವು, ಸ್ವತ್ತನ್ನು ಅಧಿಗ್ರಹಣದಿಂದ ಬಿಡುಗಡೆ ಮಾಡಲಾಗಿದೆ ಎಂಬ ಘೋಷಣೆಯನ್ನೊಳಗೊಂಡ ನೋಟೀಸು ರಾಜ್ಯಪತ್ರದಲ್ಲಿ

ಪ್ರಕಟವಾಗುವಂತೆ ಮಾಡತಕ್ಕುದು ಮತ್ತು ಯಾವುದೇ ಸ್ಥಿರ ಸ್ವತ್ತಿನ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಆ ನೋಟೀಸಿನ ಒಂದು ಪ್ರತಿಯನ್ನು ಅಂಥ ಸ್ವತ್ತಿನ ಎದ್ದು ಕಾಣುವ ಭಾಗದಲ್ಲಿ ಅಂಟಿಸುವ ವ್ಯವಸ್ಥೆಯನ್ನು ಮಾಡತಕ್ಕುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿರುವಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತು ಅಂಥ ಪ್ರಕಟಣೆಯ ದಿನಾಂಕದಂದು ಮತ್ತು ದಿನಾಂಕದಿಂದ ಅಧಿಗ್ರಹಣಕ್ಕೆ ಒಳಪಟ್ಟಿರುವುದು ನಿಂತುಹೋಗತಕ್ಕುದು ಮತ್ತು ಅದರ ಸ್ವಾಧೀನತೆಗೆ ಹಕ್ಕುದಾರನಾಗಿರುವ ವ್ಯಕ್ತಿಗೆ ಅದನ್ನು ವಹಿಸಿಕೊಡಲಾಗಿದೆ ಎಂದು ಭಾವಿಸತಕ್ಕುದು ಮತ್ತು ರಾಜ್ಯ ಸರ್ಕಾರವು ಸದರಿ ದಿನಾಂಕದ ತರುವಾಯದ ಯಾವುದೇ ಅವಧಿಗೆ ಸಂಬಂಧಿಸಿ ಅಂಥ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಮೊಬಲಗು, ಬಾಡಿಗೆ ಅಥವಾ ಇತರ ಕ್ಲೇಮಿಗೆ ಹೊಣೆಯಾಗತಕ್ಕುದಲ್ಲ.

**74. ಸ್ವತ್ತಿನ ಆರ್ಜನೆ.–** (1) ಶಿಕ್ಷಣ ಸಂಸ್ಥೆಯ ಆಡಳಿತಕ್ಕೆ ಸಂಬಂಧಿಸಿದಂತೆ, 67ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಯಾವುದೇ ಸ್ವತ್ತು ನಿಹಿತವಾಗಿರುವಲ್ಲಿ ಅಥವಾ 71ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಅಧಿಗ್ರಹಣಕ್ಕೆ ಒಳಪಟ್ಟಿರುವಲ್ಲಿ, ರಾಜ್ಯ ಸರ್ಕಾರವು, ಆ ಸ್ವತ್ತನ್ನು ಶಿಕ್ಷಣಕ್ಕೆ ಸಂಬಂಧಪಡುವ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಆರ್ಜಿಸುವುದು ಅಗತ್ಯವೆಂದು ಪರಿಗಣಿಸಿದರೆ, ಅದು ರಾಜ್ಯಪತ್ರದಲ್ಲಿ, ಆ ಸ್ವತ್ತನ್ನು ಈ ಪ್ರಕರಣವನ್ನು ಅನುಸರಿಸಿ ಆರ್ಜನೆ ಮಾಡಲು ರಾಜ್ಯ ಸರ್ಕಾರವು ನಿರ್ಧರಿಸಿದೆ ಎಂಬ ಬಗ್ಗೆ ನೋಟೀಸನ್ನು ಪ್ರಕಟಿಸುವ ಮೂಲಕ ಅಂಥ ಸ್ವತ್ತನ್ನು ಅಂಥ ಸಾರ್ವಜನಿಕ ಉದ್ದೇಶಕ್ಕಾಗಿ [1][ಆದರೆ, 67ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ][1] ಆರ್ಜಿಸಬಹುದು:

1. 1998ರ ಅಧಿನಿಯಮ ಸಂಖ್ಯೆ 8ರ, (ಪ್ರ. 6)ರ ಮೂಲಕ 11-4-1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು, ರಾಜ್ಯ ಸರ್ಕಾರವು ಅಂಥ ನೋಟೀಸನ್ನು ನೀಡುವುದಕ್ಕಿಂತ ಮೊದಲು ಆಡಳಿತ ಪರಿಷತ್ತನ್ನು ಅಥವಾ ಅಂಥ ಸ್ವತ್ತಿನಲ್ಲಿ ಹಿತಾಸಕ್ತಿ ಹೊಂದಿರುವವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವ ಯಾವನೇ ಇತರ ವ್ಯಕ್ತಿಯನ್ನು ರಾಜ್ಯ ಸರ್ಕಾರವು ಆ ಸ್ವತ್ತನ್ನು ಏತಕ್ಕೆ ಆರ್ಜಿಸಕೂಡದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ಕೇಳತಕ್ಕುದು ಮತ್ತು ಆಡಳಿತ ಪರಿಷತ್ತಿನವರಾಗಲಿ ಅಥವಾ ಆ ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಯಾಗಲೀ ಸಲ್ಲಿಸಿದ ಆಕ್ಷೇಪಣೆಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಪರಿಶೀಲಿಸಿದ ಅನಂತರ ರಾಜ್ಯ ಸರಕಾರವು ತಾನು ಸೂಕ್ತವೆಂದು ಭಾವಿಸುವ ಆದೇಶವನ್ನು ಹೊರಡಿಸಬಹುದು.

(2) ರಾಜ್ಯಪತ್ರದಲ್ಲಿ ಮೇಲೆ ತಿಳಿಸಿದ ನೋಟೀಸು ಪ್ರಕಟವಾದಾಗ, ಆ ಅಧಿಗ್ರಹಣ ಸ್ವತ್ತು, ನೋಟೀಸು ಹಾಗೆ ಪ್ರಕಟವಾದ ದಿನಾಂಕದಂದು ಮತ್ತು ಅಂದಿನಿಂದ ಅಧಿಗ್ರಹಣಕ್ಕೆ ಒಳಪಟ್ಟಿರುವುದು ನಿಂತುಹೋಗತಕ್ಕುದು ಮತ್ತು ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರಕಾರದಲ್ಲಿ ಸಂಪೂರ್ಣವಾಗಿ ನಿಹಿತವಾಗತಕ್ಕುದು.

**75. ಅಧಿಗ್ರಹಣ ಮಾಡಿದ ಅಥವಾ ಆರ್ಜಿಸಿದ ಆ ಸ್ವತ್ತಿನ ಮೊಬಲಗನ್ನು ನಿರ್ಧರಿಸುವ ತತ್ವಗಳು ಮತ್ತು ವಿಧಾನಗಳು.–** (1) ಈ ಅಧಿನಿಯಮದ ಮೇರೆಗೆ ಯಾವುದೇ ಸ್ವತ್ತನ್ನು ಅಧಿಗ್ರಹಣ ಮಾಡಿರುವಲ್ಲಿ ಅಥವಾ ಆರ್ಜಿಸಿದಲ್ಲಿ, ಅದಕ್ಕಾಗಿ ಸಂದಾಯ ಮಾಡಬೇಕಾದ ಮೊಬಲಗನ್ನು ಈ ಕೆಳಗೆ ವಿವರಿಸಿದ ತತ್ವಗಳಿಗನುಸಾರವಾಗಿ ಮತ್ತು ಅಂಥ ರೀತಿಯಲ್ಲಿ ನಿರ್ಧರಿಸತಕ್ಕುದು ಮತ್ತು ಸಂದಾಯ ಮಾಡತಕ್ಕುದು, ಎಂದರೆ:-

(ಎ) ಒಪ್ಪಂದದ ಮೂಲಕ ಮೊಬಲಗು ಇತ್ಯರ್ಥವಾಗಿದ್ದರೆ ಮತ್ತು ನಿಗದಿಯಾಗಿದ್ದರೆ ತದನುಸಾರವಾಗಿ ಅದನ್ನು ಸಂದಾಯ ಮಾಡತಕ್ಕುದು;

(ಬಿ) ಅಂಥ ಒಪ್ಪಂದವಿಲ್ಲದಿದ್ದರೆ, ರಾಜ್ಯ ಸರ್ಕಾರವು, ಮೊಬಲಗನ್ನು ನಿರ್ಧರಿಸುವುದಕ್ಕಾಗಿ ಜಿಲ್ಲಾ ನ್ಯಾಯಾಧೀಶರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ನ್ಯಾಯಿಕ ಪದವನ್ನು ಹೊಂದಿರುವ ಅಥವಾ ಹೊಂದಿದ್ದ ವ್ಯಕ್ತಿಯನ್ನು ಮಧ್ಯಸ್ಥಗಾರನನ್ನಾಗಿ ನೇಮಿಸತಕ್ಕುದು;

(ಸಿ) ಮಧ್ಯಸ್ಥಗಾರನ ಮುಂದೆ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮೊದಲು ರಾಜ್ಯ ಸರ್ಕಾರ ಮತ್ತು ಮೊಬಲಗು ಯಾರಿಗೆ ಸಂದಾಯವಾಗಬೇಕೋ ಆ ವ್ಯಕ್ತಿಯು, ತಮ್ಮ ಪ್ರಕಾರ ನ್ಯಾಯವಾದ ಮೊಬಲಗು ಎಷ್ಟೆಂಬುದನ್ನು ಹೇಳಬೇಕು;

(ಡಿ) ಮಧ್ಯಸ್ಥಗಾರನು ವಿಚಾರಣೆ ನಡೆಸಿದ ತರುವಾಯ ತನಗೆ ನ್ಯಾಯವೆಂದು ಕಂಡುಬಂದಂಥ ಮೊಬಲಗನ್ನು ನಿರ್ಧರಿಸತಕ್ಕುದು ಮತ್ತು ಅಂಥ ಮೊಬಲಗನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕುದೆಂದು ನಿರ್ದಿಷ್ಟಪಡಿಸತಕ್ಕುದು ಮತ್ತು ಆ ಮೊಬಲಗನ್ನು ನಿರ್ಧರಿಸುವ ತೀರ್ಪು ನೀಡುವಾಗ ಪ್ರತಿಯೊಂದು ಪ್ರಕರಣದ ಸನ್ನಿವೇಶಗಳಿಗೂ ಮತ್ತು ಅದಕ್ಕೆ ಅನ್ವಯವಾಗುವಷ್ಟರ ಮಟ್ಟಿಗೆ (2), (3), (4) ಮತ್ತು (5) ಈ ಉಪಪ್ರಕರಣಗಳ ಉಪಬಂಧಗಳಿಗೂ ಗಮನ ನೀಡತಕ್ಕುದು;

(ಇ) ಮೊಬಲಗಿಗೆ ಹಕ್ಕುದಾರರಾದ ವ್ಯಕ್ತಿ ಅಥವಾ ವ್ಯಕ್ತಿಗಳು ಯಾರು ಎನ್ನುವ ಬಗ್ಗೆ ವಿವಾದವಿದ್ದರೆ ಮಧ್ಯಸ್ಥಗಾರನು ಅಂಥ ವಿವಾದಗಳನ್ನು ಇತ್ಯರ್ಥಪಡಿಸತಕ್ಕುದು ಮತ್ತು ಆ ಮೊಬಲಗಿಗೆ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಹಕ್ಕುದಾರರೆಂದು ಕಂಡುಬಂದಲ್ಲಿ, ಆ ಮೊಬಲಗನ್ನು ಅವರ ಹಕ್ಕುಗಳಿಗೆ ಅನುಸಾರವಾಗಿ ಅವರಲ್ಲಿ ಹಂಚತಕ್ಕುದು; ಮತ್ತು

(ಎಫ್) ಮಧ್ಯಸ್ಥಿಕೆ ಅಧಿನಿಯಮ, 1940 (1940ರ ಕೇಂದ್ರ ಅಧಿನಿಯಮ 10) ಇದರಲ್ಲಿರುವುದು ಯಾವುದೂ ಈ ಪ್ರಕರಣದ ಮೇರೆಗಿನ ಮಧ್ಯಸ್ಥಿಕೆಗಳಿಗೆ ಅನ್ವಯಿಸತಕ್ಕುದಲ್ಲ.

(2) ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ಅಧಿಗ್ರಹಣ ಸಂಬಂಧದಲ್ಲಿ, ಆ ಅಧಿಗ್ರಹಣದ ಅವಧಿಯ ಬಗ್ಗೆ ಸಂದಾಯ ಮಾಡಬೇಕಾದ ಮೊಬಲಗು, ಅವುಗಳನ್ನು ಅದೇ ಅವಧಿಗೆ ಗುತ್ತಿಗೆಗೆ ಪಡೆದಿದ್ದರೆ, ಸ್ಥಿರ ಸ್ವತ್ತಿನ ಸಂಬಂಧದಲ್ಲಿ ಅದರ ಉಪಯೋಗ ಮತ್ತು ಅಧಿಭೋಗಕ್ಕಾಗಿ ಅಥವಾ ಚರ ಸ್ವತ್ತಿನ ಸಂಬಂಧದಲ್ಲಿ ಅದರ ಉಪಯೋಗಕ್ಕಾಗಿ ಸಂದಾಯ ಮಾಡಬಹುದಾದ ಬಾಡಿಗೆಗೆ ಸಮನಾಗಿರತಕ್ಕುದು.

(3) 74ನೇ ಪ್ರಕರಣದ ಮೇರೆಗೆ ಆರ್ಜನೆ ಮಾಡಿದ ಯಾವುದೇ ಸ್ಥಿರ ಸ್ವತ್ತಿನ ಬಗ್ಗೆ ಸಂದಾಯ ಮಾಡಬೇಕಾದ ಮೊಬಲಗು ಕೆಳಕಂಡಂತೆ ಇರತಕ್ಕುದು:-

(ಎ) ಅಧಿಗ್ರಹಣ ಮಾಡಿದ ಸ್ವತ್ತು, ಅಧಿಗ್ರಹಣದ ಸಮಯದಲ್ಲಿದ್ದ ಸ್ಥಿತಿಯಲ್ಲಿಯೇ ಉಳಿದಿದ್ದರೆ, ಮತ್ತು ಆರ್ಜನೆಯ ದಿನದಂದು ಮಾರಾಟ ಮಾಡಿದಾಗ ಆ ಸ್ವತ್ತಿನ ಬಗ್ಗೆ ಮುಕ್ತ ಮಾರುಕಟ್ಟೆಯಲ್ಲಿ ಪಡೆಯಬಹುದಾದ ಬೆಲೆ; ಅಥವಾ

(ಬಿ) ಅಧಿಗ್ರಹಣ ಮಾಡಿದ ಸ್ವತ್ತು, ಅದನ್ನು ಅಧಿಗ್ರಹಣ ಮಾಡಿದ ದಿನದಂದೇ ಮುಕ್ತ ಮಾರುಕಟ್ಟೆಯಲ್ಲಿ ಮಾರಿದ್ದರೆ ಪಡೆಯಬಹುದಾಗಿದ್ದ ಮೊತ್ತದ ಎರಡರಷ್ಟು

-ಇವುಗಳಲ್ಲಿ ಯಾವುದು ಕಡಿಮೆಯೋ ಆ ಮೊತ್ತವಾಗಿರತಕ್ಕುದು.

(4) ಯಾವುದೇ ಚರ ಸ್ವತ್ತಿನ ಆರ್ಜನೆ ಬಗ್ಗೆ ಕೊಡಬೇಕಾದ ಮೊಬಲಗು, ಆ ಸ್ವತ್ತನ್ನು ಆರ್ಜನೆ ದಿನದಂದು ಮಾರಿದ್ದರೆ ಮುಕ್ತ ಮಾರುಕಟ್ಟೆಯಲ್ಲಿ ಅದರ ಬಗ್ಗೆ ಪಡೆಯಬಹುದಾಗಿದ್ದ ಬೆಲೆಯಾಗಿರತಕ್ಕುದು.

(5) ಈ ಅಧಿನಿಯಮದ ಮೇರೆಗೆ ಅಧಿಗ್ರಹಣ ಮಾಡಲಾದ ಅಥವಾ ಆರ್ಜಿಸಲಾದ ಸ್ವತ್ತನ್ನು ರಾಜ್ಯದ ನಿಧಿಗಳ ಅನುದಾನದಿಂದ ಆರ್ಜಿಸಲ್ಪಟ್ಟಿದ್ದರೆ, ಸಂದಾಯ ಮಾಡಬೇಕಾದ ಮೊಬಲಗನ್ನು

ನಿರ್ಧರಿಸುವಾಗ ಆ ಅನುದಾನದ ಮೊಬಲಗನ್ನು ನಿಯಮಿಸಲಾದ ರೀತಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ ಆ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು ಶಿಕ್ಷಣ ಸಂಸ್ಥೆಯು ತನ್ನ ಎಲ್ಲಾ ಸ್ವತ್ತುಗಳನ್ನು ಇತರ ರೀತಿಯಿಂದ ಆರ್ಜಿಸಿದೆ ಎಂಬುದನ್ನು ಮಧ್ಯಸ್ಥಗಾರರಿಗೆ ತೃಪ್ತಿಕರವಾಗಿ ರುಜುವಾತುಪಡಿಸಿದ ಹೊರತು, ಶಿಕ್ಷಣ ಸಂಸ್ಥೆಯು ಆರ್ಜಿಸಿದ ಆ ಎಲ್ಲ ಸ್ವತ್ತುಗಳನ್ನು ಈ ಅನುದಾನ, ವಂತಿಗೆ, ದಾನ ಅಥವಾ ಸಂಗ್ರಹಣೆ ಇವುಗಳ ನೆರವಿನಿಂದ ಆರ್ಜಿಸಿ ಕೈಕೊಂಡಿದೆ ಎಂದು ಭಾವಿಸತಕ್ಕುದು.

**76. ಅಧಿಗ್ರಹಣ ಮಾಡಿದ ಅಥವಾ ಆರ್ಜಿಸಿದ ಸ್ವತ್ತಿನ ಬಗ್ಗೆ ಹಣ ಸಂದಾಯ.–** ಮಧ್ಯಸ್ಥಗಾರನ ಐತೀರ್ಪಿನ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು, ಹಿತಾಸಕ್ತಿಯುಳ್ಳ ವ್ಯಕ್ತಿಗೆ, ಆ ಐತೀರ್ಪಿನಲ್ಲಿ ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಮತ್ತು ಅಂಥ ಸಮಯದೊಳಗೆ ಸಕ್ಷಮ ಪ್ರಾಧಿಕಾರಿಯು ಸಂದಾಯ ಮಾಡತಕ್ಕುದು.

**77. ಹಣದ ವಿಷಯದಲ್ಲಿ 75ನೇ ಪ್ರಕರಣದ ಮೇರೆಗೆ ಮಧ್ಯಸ್ಥಗಾರನು ನೀಡಿದ ತೀರ್ಪಿನ ಮೇಲೆ ಅಪೀಲು.–** 75ನೇ ಪ್ರಕರಣದ ಮೇರೆಗೆ ಮಧ್ಯಸ್ಥಗಾರನು ನೀಡಿದ ಐತೀರ್ಪಿನಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅದರ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಉಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಬಹುದು:

ಪರಂತು, ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಅಪೀಲುದಾರನಿಗೆ ಸಾಕಷ್ಟು ಕಾರಣದಿಂದಾಗಿ ಅಡ್ಡಿಯುಂಟಾಗಿತ್ತೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ ಸದರಿ ಅರವತ್ತು ದಿನಗಳ ನಂತರವೂ ಅದು ಆ ಅಪೀಲನ್ನು ಸ್ವೀಕರಿಸಬಹುದು.

**78. ಮಧ್ಯಸ್ಥಗಾರನು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರುವುದು.–** ಈ ಅಧ್ಯಾಯದ ಮೇರೆಗೆ ನೇಮಿಸಲ್ಪಟ್ಟ ಮಧ್ಯಸ್ಥಗಾರನು ಈ ಅಧಿನಿಯಮದ ಮೇರೆಗೆ ಮಧ್ಯಸ್ಥಿಕೆಯ ವ್ಯವಹರಣೆಗಳನ್ನು ನಡೆಸುವಾಗ, ಈ ಕೆಳಗಿನ ವಿಷಯಗಳ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರಾಧಿನಿಯಮ 5) ಮೇರೆಗೆ ದಾವೆಯ ಅಧಿವಿಚಾರಣೆ ನಡೆಸುವಾಗ ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ :–

(ಎ) ಯಾವ ವ್ಯಕ್ತಿಯನ್ನಾದರೂ ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣ ವಚನ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆಹಚ್ಚಿ ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಸಾಕ್ಷ್ಯವನ್ನು ಅಥವಾ ಅಫಿಡೆವಿಟ್‌ಗಳನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಒಪ್ಪಿಸುವಂತೆ ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು,

**79. ಪ್ರವೇಶ ಮತ್ತು ಪರಿಶೀಲನೆ ಅಧಿಕಾರಗಳು ಹಾಗೂ ಮಾಹಿತಿ ತರಿಸಿಕೊಳ್ಳುವುದು.–** ಈ ಅಧ್ಯಾಯದ ಮೇರೆಗೆ ಯಾವುದೇ ಸ್ವತ್ತನ್ನು ಅಧಿಗ್ರಹಣ ಮಾಡುವ ಮತ್ತು ಆರ್ಜಿಸುವ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರವು ಆದೇಶವನ್ನು ಹೊರಡಿಸಿ,–

(ಎ) ಈ ಅಧಿನಿಯಮದ ಮೇರೆಗೆ ಅಧಿಗ್ರಹಣಕ್ಕೆ ಅಥವಾ ಆರ್ಜನೆಗೆ ಒಳಪಡತಕ್ಕುದೆಂದು ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಸ್ವತ್ತನ್ನು ಪ್ರವೇಶ ಮಾಡಲು ಮತ್ತು ಪರಿಶೀಲಿಸಲು ಯಾವನೇ ಪ್ರಾಧಿಕಾರಿಗೆ ಅಧಿಕಾರವನ್ನು ನೀಡಬಹುದು.

(ಬಿ) ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾದ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವನೇ ವ್ಯಕ್ತಿಯು ಹೊಂದಿರುವ ಮಾಹಿತಿಯನ್ನು ಅಂಥ ಪ್ರಾಧಿಕಾರಿಗೆ ಒದಗಿಸುವಂತೆ ಅವನನ್ನು ಅಗತ್ಯಪಡಿಸಬಹುದು.

**80. ಶಿಕ್ಷಣ ಸಂಸ್ಥೆಯಲ್ಲಿ ಹಾಲಿ ಇರುವ ಸಿಬ್ಬಂದಿಯ ಬಗ್ಗೆ ಉಪಬಂಧಗಳು.–** ಯಾವುದೇ ಕರಾರಿನಲ್ಲಿ, ಒಪ್ಪಂದದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಶಿಕ್ಷಣ ಸಂಸ್ಥೆಯ ಆಡಳಿತವು ರಾಜ್ಯ ಸರ್ಕಾರದಲ್ಲಿ ನಿಹಿತವಾದ ದಿನಕ್ಕೆ ನಿಕಟ ಪೂರ್ವದಲ್ಲಿದ್ದ ಆ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗೆ ಈ ಕೆಳಕಂಡ ಉಪಬಂಧಗಳು ಅನ್ವಯವಾಗತಕ್ಕುದು, ಎಂದರೆ:–

(ಎ) ಯಾವನೇ ವ್ಯಕ್ತಿಯು ಸೇವೆಯನ್ನು ಕೊನೆಗೊಳಿಸಲು ಕಾರಣಗಳನ್ನು ದಾಖಲು ಮಾಡಿ, ಅವನಿಗೆ ಮೂರು ಕ್ಯಾಲೆಂಡರು ತಿಂಗಳ ಲಿಖಿತ ನೋಟೀಸು ಕೊಟ್ಟ ನಂತರ ಅಥವಾ ನೋಟೀಸಿಗೆ ಬದಲಾಗಿ ಮೂರು ತಿಂಗಳ ವೇತನವನ್ನು ಪಾವತಿ ಮಾಡಿದ ನಂತರ ಆತನ ಸೇವೆಯನ್ನು ಕೊನೆಗೊಳಿಸುವ ಅಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿರತಕ್ಕುದು;

(ಬಿ) ಸೇವೆಯಲ್ಲಿ ಉಳಿಸಿಕೊಳ್ಳಲಾದ ವ್ಯಕ್ತಿಗೆ, ಅವನ ಆಯ್ಕೆಗನುಸಾರ, ಕಾಲಕಾಲಕ್ಕೆ ನಿಗದಿಪಡಿಸಲಾಗುವ ಸೇವಾ ಷರತ್ತುಗಳು ಅಥವಾ ಆಡಳಿತವು ಸರ್ಕಾರದಲ್ಲಿ ನಿಹಿತವಾಗುವುದಕ್ಕೆ ನಿಕಟ ಪೂರ್ವದಲ್ಲಿ ಅವನಿಗೆ ಅನ್ವಯವಾಗುತ್ತಿದ್ದ ಸೇವಾ ನಿಯಮಗಳು ಅನ್ವಯವಾಗತಕ್ಕುದು.

**81. ಈ ಅಧ್ಯಾಯದ ಮೇರೆಗೆ ನಿಹಿತವಾದ ಶಿಕ್ಷಣ ಸಂಸ್ಥೆಗಳ ನೌಕರರ ಹುದ್ದೆಗಳನ್ನು ಕೆಲವು ಉದ್ದೇಶಗಳಿಗಾಗಿ ಒಂದು ಪ್ರತ್ಯೇಕ ಘಟಕವಾಗಿ ಪರಿಗಣಿಸುವುದು.–** ಈ ಅಧ್ಯಾಯದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಒಂದು ಜಿಲ್ಲೆಯ ಎಲ್ಲಾ ಶಿಕ್ಷಣ ಸಂಸ್ಥೆಗಳ ಪ್ರತಿಯೊಂದು ಪ್ರವರ್ಗದ ನೌಕರರ ಹುದ್ದೆಗಳು, ಸೇವಾ ಹಿರಿತನ, ಬಡ್ತಿ, ಖಾಲಿ ಸ್ಥಾನಗಳು ಇಲ್ಲದ್ದಕ್ಕಾಗಿ ಸೇವೆಯಿಂದ ಬಿಡುಗಡೆ ಮಾಡುವುದು ಅಥವಾ ಹಿಂಬಡ್ತಿ ಮಾಡುವುದೂ ಸೇರಿದಂತೆ ಎಲ್ಲಾ ಉದ್ದೇಶಗಳಿಗಾಗಿ ಒಂದು ಪ್ರತ್ಯೇಕ ಘಟಕವಾಗಿರತಕ್ಕುದು.

## ಅಧ್ಯಾಯ–XIII

## ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಪೂರಕ ಸೇವೆಗಳನ್ನು ಒದಗಿಸುವುದು

**82. ವೈದ್ಯಕೀಯ ತಪಾಸಣೆ ಮತ್ತು ಆರೋಗ್ಯ ಸೇವೆಗಳು.–** (1) ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣೆಗಳನ್ನು ಮತ್ತು ವೈದ್ಯಕೀಯ ಪರಿಶೀಲನೆಗಳನ್ನು ನಡೆಸುವ ಬಗ್ಗೆ ರಾಜ್ಯ ಸರಕಾರವು ನಿಯಮಗಳನ್ನು ನಿಯಮಿಸಬಹುದು ಮತ್ತು ವಿಶೇಷವಾಗಿ ಅಂಥ ನಿಯಮಗಳು, ಅಂತಹ ಯಾವುದೇ ಬಗೆಯ ಪರೀಕ್ಷೆಗಳನ್ನು ಅಥವಾ ಪರಿಶೀಲನೆಗಳನ್ನು ನಿಯಮಿಸಬಹುದಾದಂಥ ವಿಶೇಷ ಅರ್ಹತೆಗಳನ್ನು ಅಥವಾ ಅನುಭವಗಳನ್ನು ಪಡೆದಿರುವ ಸೂಕ್ತ ವಿದ್ಯಾರ್ಹತೆಯುಳ್ಳ ವೈದ್ಯರು ಅಥವಾ ಯಾವುದೇ ಶಿಕ್ಷಣ ಪ್ರಾಧಿಕಾರವು ಆರಿಸಿದ ಯುಕ್ತ ಅರ್ಹತೆ ಪಡೆದಿರುವ ವೈದ್ಯರು ನಡೆಸತಕ್ಕುದು ಎಂಬುದನ್ನು ಅಗತ್ಯಪಡಿಸುವುದಕ್ಕಾಗಿ ಉಪಬಂಧಗಳನ್ನು ಕಲ್ಪಿಸಬಹುದು.

(2) ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವೈದ್ಯಕೀಯ ಅಥವಾ ಆರೋಗ್ಯ ನೆರವು ಒದಗಿಸುವ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಒಂದು ಶೈಕ್ಷಣಿಕ ಆರೋಗ್ಯ ಸೇವೆಯನ್ನು ವ್ಯವಸ್ಥೆಗೊಳಿಸಲು ಪ್ರಯತ್ನಿಸತಕ್ಕುದು.

**83. ಊಟ ಮತ್ತು ಉಪಾಹಾರಗಳನ್ನು ಒದಗಿಸುವುದು.–** ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಹಾಜರಿರುವ ವಿದ್ಯಾರ್ಥಿಗಳಿಗೆ ಅವಶ್ಯವೆಂದು ಭಾವಿಸಬಹಾದಾದಂಥ ಮಧ್ಯಾಹ್ನದ ಊಟ ಮತ್ತು ಇತರೆ ಉಪಾಹಾರಗಳನ್ನು ಒದಗಿಸಲು ರಾಜ್ಯ ಸರ್ಕಾರವು ಪ್ರಯತ್ನಿಸತಕ್ಕುದು. ಊಟ ಮತ್ತು ಫಲಾಹಾರಗಳನ್ನು ಒದಗಿಸುವುದಕ್ಕೆ ತಗಲುವ ವೆಚ್ಚವನ್ನು ಯಾವ ವಿಧಾನದಲ್ಲಿ ಮತ್ತು ಯಾರು ವಹಿಸಬೇಕೆಂಬ ಬಗ್ಗೆ ಮತ್ತು ಊಟವನ್ನು ಮತ್ತು ಉಪಾಹಾರಗಳನ್ನು ಒದಗಿಸುವುದಕ್ಕೆ ಸಂಬಂಧಿಸಿ ಆಡಳಿತ ಪರಿಷತ್ತು ಯಾವ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಯಾವ ಸೇವೆಗಳನ್ನು ಒದಗಿಸಬೇಕು ಎಂಬ ಬಗ್ಗೆ ಮತ್ತು ಇತರ ಪ್ರಾಸಂಗಿಕ ವಿಷಯಗಳ ಬಗ್ಗೆ ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಗಳನ್ನು ಕಲ್ಪಿಸಬಹುದು.

**84. ಮನರಂಜನೆ ಮತ್ತು ದೈಹಿಕ ಶಿಕ್ಷಣ ತರಬೇತಿ ಸೌಕರ್ಯಗಳನ್ನು ಒದಗಿಸುವುದು.–** (1) ವಿದ್ಯಾಭ್ಯಾಸಕ್ಕಾಗಿ ತಾವು ಒದಗಿಸುವ ಸೌಕರ್ಯಗಳಲ್ಲಿ, ಸಾಕಷ್ಟು ಮನರಂಜನಾ ಸೌಕರ್ಯಗಳೂ ಮತ್ತು ದೈಹಿಕ ಶಿಕ್ಷಣ ತರಬೇತಿಯ ಸೌಕರ್ಯಗಳೂ ಸೇರಿರುವಂತೆ ನೋಡಿಕೊಳ್ಳುವುದು ಮನ್ನಣೆ ಪಡೆದ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಕರ್ತವ್ಯವಾಗಿರತಕ್ಕುದು.

(2) ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವ ವ್ಯಕ್ತಿಗಳಿಗೆ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಮನರಂಜನೆ, ಕ್ರೀಡೆ ಮತ್ತು ದೈಹಿಕ ಶಿಕ್ಷಣ ತರಬೇತಿ ಸೌಕರ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರವು ಶಿಬಿರಗಳು, ರಜೆ ಕಾಲದ ತರಗತಿಗಳು, ಆಟದ ಮೈದಾನಗಳು, ಕ್ರೀಡಾ ಮತ್ತು ದೈಹಿಕ ಶಿಕ್ಷಣ ಕೇಂದ್ರಗಳು ಮತ್ತು ಇತರ ಕೇಂದ್ರಗಳನ್ನು ರಾಜ್ಯ ಸರ್ಕಾರವು ಸ್ಥಾಪಿಸಬಹುದು, ನಿರ್ವಹಿಸಬಹುದು ಮತ್ತು ವ್ಯವಸ್ಥೆ ನೋಡಿಕೊಳ್ಳಬಹುದು ಅಥವಾ ಅವುಗಳನ್ನು ಸ್ಥಾಪಿಸಲು, ನಿರ್ವಹಿಸಲು ಮತ್ತು ವ್ಯವಸ್ಥೆ ನೋಡಿಕೊಳ್ಳಲು ಸಹಾಯ ಮಾಡಬಹುದು.

**85. ಮಾರ್ಗದರ್ಶನ ಸೇವೆಗಳು.–** ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ, ವೃತ್ತಿಪರ ಮತ್ತು ವೈಯಕ್ತಿಕ ಮಾರ್ಗದರ್ಶನ ಸೇವೆಗಳನ್ನು ಒದಗಿಸುವುದಕ್ಕಾಗಿ ಸಾಕಷ್ಟು ವ್ಯವಸ್ಥೆ ಮಾಡಲು ರಾಜ್ಯ ಸರ್ಕಾರವು ಪ್ರಯತ್ನಿಸತಕ್ಕುದು.

**86. ಗ್ರಂಥಾಲಯ ಸೇವೆ.–** ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ, ಶಾಲಾ ಹಾಗೂ ಕಾಲೇಜು ಗ್ರಂಥಾಲಯಗಳ ಸ್ಥಾಪನೆಗೆ ರಾಜ್ಯ ಸರ್ಕಾರವು ಸಾಕಷ್ಟು ವ್ಯವಸ್ಥೆ ಮಾಡಲು ಪ್ರಯತ್ನಿಸತಕ್ಕುದು ಮತ್ತು ಅಂಥ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಆ ಗ್ರಂಥಾಲಯಗಳ ಸದುಪಯೋಗ ಪಡೆಯಲು ಅವಶ್ಯ ಅನುಕೂಲಗಳನ್ನು ಒದಗಿಸತಕ್ಕುದು.

## ಅಧ್ಯಾಯ–XIV

### ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು

**87. ನೌಕರರ ಅರ್ಹತೆಗಳು ಮತ್ತು ಸೇವಾ ಷರತ್ತುಗಳು.–** ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ನಂತರ, ಮನ್ನಣೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರಿ ಭರ್ತಿ ಮತ್ತು ಸೇವಾ ಷರತ್ತುಗಳನ್ನು ನಿಯಂತ್ರಿಸುವುದಕ್ಕಾಗಿ (ಶಿಸ್ತುಪಾಲನೆಯ ವಿಷಯಕ್ಕೆ ಸಂಬಂಧಿಸಿದ ಹಕ್ಕುಗಳೂ ಸೇರಿದಂತೆ) ನಿಯಮಗಳನ್ನು ರಚಿಸಬಹುದು:

ಪರಂತು, ರಾಜ್ಯ ಸರ್ಕಾರದಿಂದ ನಿರ್ವಹಣಾ ಅನುದಾನವನ್ನು ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರ ನೌಕರಿಭರ್ತಿಗೆ ಕನಿಷ್ಠ ಅರ್ಹತೆಗಳು, ನೌಕರಿ ಭರ್ತಿಯ ವಯಸ್ಸು ಮತ್ತು ನಿವೃತ್ತಿ ಹಾಗೂ ನಿವೃತ್ತಿ ಸೌಲಭ್ಯಗಳು ಅನ್ಯಥಾ ನಿಯಮಿಸಿರುವ ಹೊರತು ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿನ ಸಂವಾದಿ ಪ್ರವರ್ಗಗಳ ನೌಕರರು ಯಾರಾದರೂ ಇದ್ದರೆ ಅವರಿಗೆ ಅನ್ವಯವಾಗುವಂಥವೇ ಆಗಿರತಕ್ಕುದು.

**88. ನೌಕರರ ನೇಮಕಾತಿ.–** 87ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಅವಶ್ಯಕ ಅರ್ಹತೆಗಳನ್ನು ಹೊಂದಿರದ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮವು ಪ್ರಾರಂಭವಾದ ದಿನದಂದು ಮತ್ತು ಅಂದಿನಿಂದ ಅಂಗೀಕಾರ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನೌಕರನನ್ನಾಗಿ ನೇಮಕ ಮಾಡತಕ್ಕುದಲ್ಲ.

**89. ಉಪಾಧ್ಯಾಯರು ಮತ್ತು ಇತರ ನೌಕರರ ವೇತನ ಮತ್ತು ಭತ್ಯೆಗಳು.–** ಮನ್ನಣೆ ಪಡೆದ ಖಾಸಗಿ ಸಂಸ್ಥೆಗಳಲ್ಲಿ ನೇಮಕಗೊಂಡ ವ್ಯಕ್ತಿಗಳ ವೇತನ ಮತ್ತು ಭತ್ಯೆಗಳನ್ನು, ಪ್ರತಿ ತಿಂಗಳೂ ನಿಯಮಿಸಲಾದ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ, ನಿಯಮಿಸಬಹುದಾದಂಥ ಅಧಿಕಾರಿಯು ಅಥವಾ ಪ್ರಾಧಿಕಾರವು ಪಾವತಿ ಮಾಡತಕ್ಕುದು ಅಥವಾ ಅವರ ಮೂಲಕ ನಿಯಮಿಸಲಾದ ವಿಧಾನದಲ್ಲಿ ಪಾವತಿಯಾಗತಕ್ಕುದು.

**90. ನೌಕರರ ಪಟ್ಟಿಯನ್ನು ಇಡುವುದು.–** (1) ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯು ತನ್ನ ನೌಕರರ ಸಂಖ್ಯೆ, ಪ್ರತಿಯೊಬ್ಬ ನೌಕರನ ಹೆಸರು ಮತ್ತು ವಿದ್ಯಾರ್ಹತೆ, ವೇತನ ಶ್ರೇಣಿ ಮತ್ತು ನಿಯಮಿಸಬಹುದಾದಂತಹ ಇತರ ವಿವರಗಳನ್ನುಳ್ಳ ಒಂದು ಪಟ್ಟಿಯನ್ನು ಇಡತಕ್ಕುದು.

(2) ಈ ಅಧಿನಿಯಮವು ಪ್ರಾರಂಭವಾದ ಮೂರು ತಿಂಗಳೊಳಗಾಗಿ ಮತ್ತು ಈ ಅನುಸೂಚಿಯಲ್ಲಿ ಮಾರ್ಪಾಡು ಮಾಡಲಾದ ಅನಂತರದ ಅಷ್ಟೇ ಅವಧಿಯೊಳಗಾಗಿ, ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಪಟ್ಟಿಯ ಅಥವಾ ಸಂದರ್ಭಾನುಸಾರ ಅದರಲ್ಲಿ ಮಾಡಲಾದ ಮಾರ್ಪಾಡುಗಳ ಪ್ರತಿಯೊಂದನ್ನು ಸಂಬಂಧಿಸಿದ ಇಲಾಖಾ ನಿರ್ದೇಶಕನಿಗೆ ಅಥವಾ ಈ ಉದ್ದೇಶಕ್ಕಾಗಿ ಅಧಿಸೂಚಿಸಬಹುದಾದಂಥ ಇತರ ಅಧಿಕಾರಿಗೆ ಕಳುಹಿಸತಕ್ಕುದು.

(3) ತತ್‌ಕಾಲದಲ್ಲಿ ಜಾರಿಯಲ್ಲಿರುವ ನೇಮಕಗಳ ಪಟ್ಟಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಯ ಕಛೇರಿಯಲ್ಲಿ ಇರಿಸತಕ್ಕುದು ಮತ್ತು ಕಛೇರಿಯ ಕೆಲಸದ ವೇಳೆಯಲ್ಲಿ ಆ ಖಾಸಗಿ ಶಿಕ್ಷಣ ಸಂಸ್ಥೆಯ ಯಾವೊಬ್ಬ ನೌಕರನು ಉಚಿತವಾಗಿ ಪಡೆದು ಅದನ್ನು ಪರಿಶೀಲಿಸಲು ಅವಕಾಶವಿರತಕ್ಕುದು, ಬೋಧಕ ಸಿಬ್ಬಂದಿಯ ಹೆಸರು ಮತ್ತು ವಿದ್ಯಾರ್ಹತೆಗಳನ್ನು ಸಂಸ್ಥೆಯಲ್ಲಿ ಎಲ್ಲರಿಗೂ ಕಾಣುವ ಮುಖ್ಯಸ್ಥಳದಲ್ಲಿ ಪ್ರದರ್ಶಿಸತಕ್ಕುದು.

**91. ಆಚಾರ ಸಂಹಿತೆ.–** (1) ಖಾಸಗಿ ಶಿಕ್ಷಣ ಸಂಸ್ಥೆಯ ಪ್ರತಿಯೊಬ್ಬ ನೌಕರನು ನಿಯಮಿಸಲಾದ ಆಚಾರ ಸಂಹಿತೆಗೆ ಬದ್ಧನಾಗಿರತಕ್ಕದು ಮತ್ತು ಅವನು ಅದರಲ್ಲಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ ಆತನು ನಿಯಮಿಸಲಾದ ಶಿಸ್ತು ಕ್ರಮಕ್ಕೆ ಗುರಿಯಾಗಲು ಬದ್ಧನಾಗಿರತಕ್ಕದು.

(2) ಆಡಳಿತ ಸಮಿತಿಯು, ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕಾರ ನೀಡಿದ ಯಾವನೇ ಪ್ರಾಧಿಕಾರಿಯು, ಪೂರ್ವಾನುಮೋದನೆಯನ್ನು ಪಡೆದು ನೌಕರರು ಪಾಲಿಸತಕ್ಕ ಮಾದರಿ ಆಚಾರ ಪ್ರಮಾಣಗಳನ್ನು ಸಹ ನಿಯಮಿಸಬಹುದು, ಪರಂತು, ಆ ಪ್ರಮಾಣಗಳು (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಲಾದವುಗಳಿಗೆ ಅಸಂಗತವಾಗಿರತಕ್ಕುದಲ್ಲ.

**92. ವಜಾ ಮಾಡುವುದು, ತೆಗೆದುಹಾಕುವುದು ಇತ್ಯಾದಿ.–** (1) ಈ ಸಂಬಂಧವಾಗಿ ರಚಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕನನ್ನು ಅಥವಾ ಇತರ ನೌಕರನನ್ನು ಕೆಳಕಂಡಂತೆ ಹೊರತು ವಜಾ ಮಾಡತಕ್ಕುದಲ್ಲ, ಕೆಲಸದಿಂದ ತೆಗೆದು ಹಾಕತಕ್ಕುದಲ್ಲ; ಅಥವಾ

(ಎ) ಅವನಿಗೆ ಅನ್ವಯವಾಗುವ ಸೇವಾ ಷರತ್ತುಗಳಿಗನುಸಾರವಾಗಿ ಹೊರತು;

(ಬಿ) ಅವನ ವಿರುದ್ಧ ಮಾಡಲಾದ ದೋಷಾರೋಪಣೆಗಳನ್ನು ಅವನಿಗೆ ತಿಳಿಸಿದ ಮತ್ತು ಅವನು ಸದರಿ ಆರೋಪಗಳನ್ನು ಕುರಿತು ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟು ವಿಚಾರಣೆ ನಡೆಸಿದ ತರುವಾಯ

-ಮತ್ತು ಅಂಥ ವಿಚಾರಣೆಯ ನಂತರ ಅವನಿಗೆ ಅಂಥ ದಂಡವನ್ನು ವಿಧಿಸಲು ಉದ್ದೇಶಿಸಿರುವ ಸಂದರ್ಭದಲ್ಲಿ ಅಂಥ ವಿಚಾರಣೆ ಕಾಲದಲ್ಲಿ ಒದಗಿಸಲಾದ ಸಾಕ್ಷ್ಯಾಧಾರದ ಮೇಲೆ ಅಂಥ ದಂಡವನ್ನು ಅದು ವಿಧಿಸಬಹುದು:

ಪರಂತು, ಈ ಉಪಪ್ರಕರಣವು ತಾತ್ಕಾಲಿಕ ನೌಕರರಿಗೆ ಅಥವಾ ನೈತಿಕ ಅಧಃಪತನವನ್ನು ಒಳಗೊಳ್ಳುವ ದುರ್ವರ್ತನೆಯ ಅಪರಾಧಿಕ ದೋಷಾರೋಪಣೆಯ ಮೇಲೆ ಅಪರಾಧ ನಿರ್ಣೀತನಾಗಿರುವ ಶಿಕ್ಷಕನನ್ನು ಅಥವಾ ಇತರ ನೌಕರನನ್ನು ನೌಕರಿಯಿಂದ ವಜಾ ಮಾಡುವುದಕ್ಕೆ, ತೆಗೆದುಹಾಕುವುದಕ್ಕೆ ಅಥವಾ ಕೆಳಗಿನ ದರ್ಜೆಗೆ ಇಳಿಸುವುದಕ್ಕೆ ಅನ್ವಯವಾಗತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ದಂಡನೆಗಳನ್ನು ಹೊರತುಪಡಿಸಿ, ಇತರ ಯಾವುದೇ ದಂಡನೆಯನ್ನು ವಿಧಿಸುವ ಆದೇಶವನ್ನು,

(ಎ) ಶಿಕ್ಷಕನ ಅಥವಾ ನೌಕರನ ವಿರುದ್ಧ ಕೈಕೊಳ್ಳಲಿರುವ ಕ್ರಮದ ಪ್ರಸ್ತಾವದ ಬಗ್ಗೆ ಮತ್ತು ಯಾವ ಆಪಾದನೆಯ ಮೇಲೆ ಅದನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ ಬರವಣಿಗೆಯಲ್ಲಿ ಅವನಿಗೆ ತಿಳಿಸಿ ಮತ್ತು ಅವನು ಮಾಡಿಕೊಳ್ಳಬಯಸಬಹುದಾದ ಯಾವುದೇ ಮನವಿಯನ್ನು ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು; ಮತ್ತು

(ಬಿ) ಅಂಥ ಮನವಿ ಏನಾದರೂ ಇದ್ದರೆ, ಆ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಹೊರತು

- ಹೊರಡಿಸತಕ್ಕುದಲ್ಲ.

(3) (ಎ) ಆಡಳಿತ ಸಮಿತಿಯು ಶಿಕ್ಷಕನನ್ನು ಅಥವಾ ಇತರ ನೌಕರನನ್ನು,

(i) ಅವನ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದಲ್ಲಿ ಅಥವಾ ಅಂಥ ಶಿಸ್ತುಕ್ರಮ ಇತ್ಯರ್ಥದಲ್ಲಿ ಇರುವಲ್ಲಿ; ಅಥವಾ

(ii) ಅವನ ವಿರುದ್ಧ ಯಾವುದೇ ಕ್ರಿಮಿನಲ್ ಅಪರಾಧದ ಸಂಬಂಧದಲ್ಲಿ ತನಿಖೆ ಅಥವಾ ಅಧಿವಿಚಾರಣೆ ನಡೆಯುತ್ತಿರುವಲ್ಲಿ

- ಅಮಾನತ್ತಿನಲ್ಲಿಡಬಹುದಾಗಿದೆ.

(ಬಿ) ಅಂಥ ಯಾವುದೇ ಅಮಾನತ್ತು ಆರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಜಾರಿಯಲ್ಲಿ ಇರತಕ್ಕುದಲ್ಲ:

ಪರಂತು, ಆರು ತಿಂಗಳ ಅವಧಿಯೊಳಗೆ ವಿಚಾರಣೆಯು ಮುಗಿಯದೆ ಹೋದಲ್ಲಿ, ಕಾರ್ಯದರ್ಶಿಯವರು ಆ ವಿಷಯವನ್ನು ಸಕ್ಷಮ ಪ್ರಾಧಿಕಾರಿಗೆ ತಿಳಿಸತಕ್ಕುದು. ನಿಯಂತ್ರಣಕ್ಕೂ ಮೀರಿದ ಸನ್ನಿವೇಶಗಳಿಂದಾಗಿ ವಿಚಾರಣೆಯನ್ನು ಪೂರ್ತಿಗೊಳಿಸುವುದು ಸಾಧ್ಯವಾಗಲಿಲ್ಲವೆಂದು ಸಕ್ಷಮ ಪ್ರಾಧಿಕಾರಿಗೆ ಮನದಟ್ಟಾದರೆ ಅವನು ಅಮಾನತ್ತಿನ ಅವಧಿಯನ್ನು ಆರು ತಿಂಗಳಿಗೂ ಮೀರಿ ವಿಸ್ತರಿಸಲು ಅನುಮತಿಸಬಹುದು.

(ಸಿ) ನೌಕರನನ್ನು ಅಮಾನತ್ತಿನಲ್ಲಿಡುವ ಆಡಳಿತ ಸಮಿತಿಯು, ಅಮಾನತ್ತಿನಲ್ಲಿಡುವ ಬಗ್ಗೆ ಹೊರಡಿಸಲಾದ ಆದೇಶಕ್ಕೆ ಕಾರಣವಾದ ಸನ್ನಿವೇಶಗಳನ್ನು ಆ ಕೂಡಲೇ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸತಕ್ಕುದು;

(ಡಿ) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಈ ಪ್ರಕರಣದ ಮೇರೆಗೆ ಅಮಾನತ್ತಿನಲ್ಲಿಡಲಾದ ಪ್ರತಿಯೊಬ್ಬ ನೌಕರನು ನಿಯಮಿಸಬಹುದಾದಂಥ ಜೀವನ ನಿರ್ವಹಣಾ ಭತ್ಯೆಗೆ ಹಕ್ಕುಳ್ಳವನಾಗತಕ್ಕುದು.

**93. ಆದೇಶವನ್ನು ತಿಳಿಸುವುದು.–** (1) ಆಡಳಿತ ಸಮಿತಿಯು ಯಾವುದೇ ದಂಡವನ್ನು ವಿಧಿಸಿ ಅಥವಾ ಅನ್ಯಥಾ ನೌಕರನಿಗೆ ಬಾಧಕವಾಗುವಂತೆ ಅವನ ಸೇವಾ ಷರತ್ತುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತೆ ಮಾಡಿದ ಪ್ರತಿಯೊಂದು ಆದೇಶವನ್ನು ನಿಯಮಿಸಲಾದ ರೀತಿಯಲ್ಲಿ ಆ ನೌಕರನಿಗೆ ತಿಳಿಸತಕ್ಕುದು.

(2) ಯಾವ ಆದೇಶವನ್ನು (1)ನೇ ಉಪಪ್ರಕರಣಕ್ಕನುಸಾರವಾಗಿ ತಿಳಿಸಿಲ್ಲವೋ ಆ ಯಾವುದೇ ಆದೇಶವು ಮಾನ್ಯವಾಗತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕುದಲ್ಲ.

**94. ಅಪೀಲುಗಳು.–** (1) ವಜಾ ಮಾಡಲಾದ, ತೆಗೆದುಹಾಕಲಾದ ಅಥವಾ ಕೆಳದರ್ಜೆಗೆ ಇಳಿಸಲಾದ ಖಾಸಗಿ ಶಿಕ್ಷಣ ಸಂಸ್ಥೆಯ ಯಾವನೇ ಶಿಕ್ಷಕನು ಅಥವಾ ಇತರ ನೌಕರನು ಆ ಆದೇಶವನ್ನು ಆತನಿಗೆ ತಿಳಿಸಿದ ಮೂರು ತಿಂಗಳ ಒಳಗಾಗಿ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಅಪೀಲುಗಳಿಗೆ ಕಾಲ ಪರಿಮಿತಿ ಅಧಿನಿಯಮ, 1963ರ 4ನೇ ಮತ್ತು 5ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗತಕ್ಕುದು.

(3) ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚೆ, ಯಾವನೇ ಶಿಕ್ಷಕನನ್ನು ಅಥವಾ ನೌಕರನನ್ನು ವಜಾ ಮಾಡಿದ್ದರೆ ಅಥವಾ ತೆಗೆದುಹಾಕಿದ್ದರೆ ಅಥವಾ ಕೆಲದರ್ಜೆಗಿಳಿಸಿದ್ದರೆ ಅಥವಾ ಅವನ ನೇಮಕಾತಿಯನ್ನು ಇತರ ರೀತಿಯಲ್ಲಿ ಕೊನೆಗೊಳಿಸಿದ್ದರೆ ಮತ್ತು ಅವನು ಆ ದಿನಾಂಕಕ್ಕೆ ಮುಂಚೆ–

(ಎ) ಹಾಗೆ ವಜಾ ಮಾಡಿರುವುದರ ಅಥವಾ ತೆಗೆದುಹಾಕಿರುವುದರ, ಕೆಳದರ್ಜೆಗಿಳಿಸಿರುವುದರ ಅಥವಾ ನೇಮಕಾತಿಯನ್ನು ಕೊನೆಗೊಳಿಸಿರುವುದರ ವಿರುದ್ಧ ಅಪೀಲನ್ನು ಸಲ್ಲಿಸಿದ್ದರೆ; ಅಥವಾ

(ಬಿ) ಅವನು ಅಥವಾ ಆಡಳಿತ ಪರಿಷತ್ತು (ಎ) ಖಂಡದಲ್ಲಿ ಉಲ್ಲೇಖಿಸಲಾದ ಅಪೀಲಿನಲ್ಲಿ ಕೊಡಲಾದ ಯಾವುದೇ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದರೆ ಮತ್ತು ಅದು ಯಾವನೇ ಅಧಿಕಾರಿಯು ಮುಂದೆ ಇತ್ಯರ್ಥದಲ್ಲಿದ್ದರೆ ಮತ್ತು ಅವನು ಅಂಥ ಅಧಿಕಾರಿಗೆ ಆ ಬಗ್ಗೆ ಅರ್ಜಿ ಸಲ್ಲಿಸಿದ್ದರೆ (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ ಅಂಥ ಅಪೀಲು ನ್ಯಾಯಾಧಿಕರಣಕ್ಕೆ ವರ್ಗಾವಣೆಯಾಗತಕ್ಕುದು.

(4) (1)ನೇ ಉಪಪ್ರಕರಣದ ಮೇರೆಗೆ ದಾಖಲು ಮಾಡಿದ ಅಪೀಲನ್ನು ಅಥವಾ (3)ನೇ ಉಪಪ್ರಕರಣದ ಮೇರೆಗೆ ವರ್ಗಾಯಿಸಲಾದ ಅಪೀಲನ್ನು ನ್ಯಾಯಾಧಿಕರಣವು, ಪಕ್ಷಕಾರನಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ನಂತರ ವಿಲೆ ಮಾಡತಕ್ಕುದು.

(5) ಯಾವನೇ ಶಿಕ್ಷಕನಿಗೆ ಅಥವಾ ನೌಕರನಿಗೆ 92ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ದಂಡನೆಯ ಹೊರತಾದ ಯಾವುದೇ ದಂಡನೆಯನ್ನು ವಿಧಿಸುವ ಆದೇಶದ ಸಂಬಂಧದಲ್ಲಿ ಅಂಥ ದಂಡನೆಯನ್ನು ವಿಧಿಸುವ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಸಕ್ಷಮ ಪ್ರಾಧಿಕಾರಿಗೆ ಅಂಥ ಆದೇಶದ ವಿರುದ್ಧ ಅಪೀಲು ಮಾಡಿಕೊಳ್ಳಲು ಅವಕಾಶವಿರುತಕ್ಕುದು.

(6) (5)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲನ್ನು, ಪಕ್ಷಕಾರರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಅನಂತರ ಸಕ್ಷಮ ಪ್ರಾಧಿಕಾರಿಯು ವಿಲೆ ಮಾಡತಕ್ಕುದು.

(7) (6)ನೇ ಉಪಪ್ರಕರಣದ ಮೇರೆಗಿನ ಅಪೀಲಿನ ಮೇಲೆ ಸಕ್ಷಮ ಪದಾಧಿಕಾರಿಯು ನೀಡಿದ ಆದೇಶದ ವಿರುದ್ಧ ನಿಯಮಿಸಿದ ಅವಧಿಯೊಳಗಾಗಿ ನ್ಯಾಯಾಧಿಕರಣದ ಮುಂದೆ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕುದು, ಮತ್ತು ಆ ಬಗ್ಗೆ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರತಕ್ಕುದು.

**95. ನ್ಯಾಯಾಲಯ ಶುಲ್ಕ.–** ಕರ್ನಾಟಕ ನ್ಯಾಯಾಲಯ ಫೀಜು ಹಾಗೂ ದಾವೆಗಳ ಮೌಲ್ಯ ನಿರ್ಣಯ ಅಧಿನಿಯಮ, 1968ರಲ್ಲಿ ಏನೇ ಇದ್ದರೂ, ನ್ಯಾಯಾಧಿಕರಣಕ್ಕೆ ಸಲ್ಲಿಸುವ ಅರ್ಜಿಯ ಪ್ರತಿಯೊಂದು ಅಪೀಲಿಗೂ ಇಪ್ಪತ್ತೈದು ರೂಪಾಯಿಯ ನ್ಯಾಯಾಲಯ ಫೀಜು ಸ್ಟಾಂಪನ್ನು ಅಂಟಿಸಿರತಕ್ಕುದು.

**96. ನ್ಯಾಯಾಧಿಕರಣ.–** (1) ಈ ಅಧಿನಿಯಮದ ಮೇರೆಗೆ ಸಲ್ಲಿಸಲಾಗುವ ಅಪೀಲುಗಳ ನ್ಯಾಯ ನಿರ್ಣಯಕ್ಕಾಗಿ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ಅಥವಾ ಹೆಚ್ಚು ಶೈಕ್ಷಣಿಕ ಅಪೀಲು ನ್ಯಾಯಾಧಿಕರಣಗಳನ್ನು ರಚಿಸತಕ್ಕುದು ಮತ್ತು ಒಂದಕ್ಕಿಂತಲೂ ಹೆಚ್ಚು ನ್ಯಾಯಾಧಿಕರಣಗಳನ್ನು ರಚಿಸಿದರೆ ಅಂಥ ಪ್ರತಿಯೊಂದು ನ್ಯಾಯಾಧಿಕರಣದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸತಕ್ಕುದು.

(2) ಶೈಕ್ಷಣಿಕ ಅಪೀಲು ನ್ಯಾಯಾಧಿಕರಣವು, ಜಿಲ್ಲಾ ನ್ಯಾಯಾಧೀಶನ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ನ್ಯಾಯಿಕ ಅಧಿಕಾರಿಯಾಗಿದ್ದ ಅಥವಾ ಆಗಿರುವ ಒಬ್ಬ ವ್ಯಕ್ತಿಯನ್ನು ಒಳಗೊಂಡಿರತಕ್ಕುದು:

ಪರಂತು, (1)ನೇ ಉಪಪ್ರಕರಣದ ಮೇರೆಗೆ ಶೈಕ್ಷಣಿಕ ಅಪೀಲು ನ್ಯಾಯಾಧಿಕರಣದ ರಚನೆಯಾಗದಿರುವಾಗ, ಪ್ರತಿಯೊಂದು ಜಿಲ್ಲೆಯ ಜಿಲ್ಲಾ ನ್ಯಾಯಧೀಶನು ಆ ಜಿಲ್ಲೆಯ ಶೈಕ್ಷಣಿಕ ಅಪೀಲು ನ್ಯಾಯಾಧಿಕರಣವಾಗಿ ಕಾರ್ಯ ನಿರ್ವಹಿಸತಕ್ಕದ್ದು.

(3) ಶೈಕ್ಷಣಿಕ ಅಪೀಲು ನ್ಯಾಯಾಧಿಕರಣವು,–

(ಎ) ದಾಖಲೆಯಲ್ಲಿರುವ ಆಧಾರದ ಮೇಲೆ ಸದರಿ ಆದೇಶವು ಮನಸೋ ಇಚ್ಛೆಯದಾಗಿದೆ, ವಿಕೃತವಾಗಿದೆ, ದುರುದ್ದೇಶದಿಂದ ಕೂಡಿದೆ, ಸಹಜ ನ್ಯಾಯ ನಿಯಮಗಳನ್ನು ಉಲಂಘಿಸುವಂಥದ್ದಾಗಿದೆ ಎಂದು ಅಥವಾ ಯಾವುದೇ ಇತರ ಆಧಾರದ ಮೇಲೆ ಅದು ಸಮರ್ಥನೀಯವಾಗಿಲ್ಲವೆಂದು ತನಗೆ ಮನದಟ್ಟಾದರೆ, ಸಂಬಳ, ಭತ್ಯಗಳು ಹಾಗೂ ವೆಚ್ಚಗಳ ಸಂದಾಯವೂ ಒಳಗೊಂಡು ತಾನು ಸೂಕ್ತವೆಂದು ಭಾವಿಸಬಹುದಾದ ನಿಬಂಧನೆಗಳು ಹಾಗೂ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳ ಮೇಲೆ ಆ ನೌಕರನನ್ನು ಅವನ ಹುದ್ದೆಯಲ್ಲಿ ಮತ್ತೆ ಇರಿಸುವುದೂ ಸೇರಿದಂತೆ ಆದೇಶಗಳನ್ನು ಮಾಡಬಹುದು;

(ಬಿ) ಈ ಅಧಿನಿಯಮದ ಮೇರೆಗೆ ಸಲ್ಲಿಸಲಾದ ಅಪೀಲುಗಳ ವಿಲೆಯ ಉದ್ದೇಶಗಳಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರಾಧಿನಿಯಮ 5) ಮೇರೆಗೆ ಅಪೀಲು ನ್ಯಾಯಾಲಯದಲ್ಲಿ ನಿಹಿತವಾದಂಥ ಅಧಿಕಾರಗಳನ್ನೇ ಹೊಂದಿರತಕ್ಕುದು;

(ಸಿ) ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಜಾರಿಗೊಳಿ–ಸುವಿಕೆಯನ್ನು, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ತಡೆಹಿಡಿಯುವ ಅಧಿಕಾರವನ್ನು ಹೊಂದಿರತಕ್ಕುದು;

(ಡಿ) ತನ್ನ ಆದೇಶಗಳು ಸಿವಿಲ್ ನ್ಯಾಯಾಲಯದ ಡಿಕ್ರಿಗಳಾಗಿದ್ದರೆ ಹೇಗೋ ಹಾಗೆ ಆ ಆದೇಶಗಳನ್ನು ಅಮಲ್ಜಾರಿಗೊಳಿಸುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರಾಧಿನಿಯಮ 5) ಮೇರೆಗೆ ಸಿವಿಲ್ ನ್ಯಾಯಾಲಯದ ಡಿಕ್ರಿಯನ್ನು ಅಮಲ್ಜಾರಿಗೊಳಿಸುವ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರಗಳನ್ನೇ ಹೊಂದಿರತಕ್ಕುದು.

(4) ನ್ಯಾಯಾಧಿಕರಣದ ಸಂಬಂಧದಲ್ಲಿ ವಹಿಸಲಾಗುವ ಎಲ್ಲ ವೆಚ್ಚಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕುದು.

(5) ನ್ಯಾಯಾಧಿಕರಣವು ಈ ಅಧಿನಿಯಮದ ಮೇರೆಗೆ, ಯಾವ ವಿಷಯಗಳ ಸಂಬಂಧದಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸುತ್ತದೋ ಅಂಥ ವಿಷಯಗಳ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರತಕ್ಕುದಲ್ಲ.

**97. ರಾಜಿನಾಮೆ.–** (1) ಖಾಸಗಿ ಶಿಕ್ಷಣ ಸಂಸ್ಥೆಯ ಯಾವನೇ ನೌಕರನು ಶೈಕ್ಷಣಿಕ ಸಂಸ್ಥೆಯ ಆಡಳಿತ ಪರಿಷತ್ತಿಗೆ (1)ನೇ ಉಪಪ್ರಕರಣಕ್ಕನುಸಾರವಾಗಿ ನೋಟೀಸು ಕೊಡುವ ಮೂಲಕ ತನ್ನ ಕೆಲಸಕ್ಕೆ ರಾಜೀನಾಮೆ ನೀಡಬಹುದು.

(2) ರಾಜೀನಾಮೆಯ ಅಂಥ ಪ್ರತಿಯೊಂದು ನೋಟೀಸೂ,–

(ಎ) ಆ ನೌಕರನಿಗೆ ಅನ್ವಯವಾಗುವ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳಿಗೆ ಅನುಗುಣವಾಗಿರತಕ್ಕುದು; ಮತ್ತು

(ಬಿ) ಅದು ನಿಯಮಿಸಲಾದ ನಮೂನೆಯಲ್ಲಿರತಕ್ಕುದು, ಹಾಗೂ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಯುಕ್ತವಾಗಿ ಅಧಿಕೃತಗೊಳಿಸಿದ ಪ್ರಾಧಿಕಾರಿಯು ಅದನ್ನು ದೃಢೀಕರಿಸಿರಬೇಕು.

(3) (2)ನೇ ಉಪಪ್ರಕರಣಕ್ಕನುಗುಣವಾಗಿರದ ಯಾವುದೇ ರಾಜೀನಾಮೆಯು ಮಾನ್ಯವಾಗತಕ್ಕುದಲ್ಲ ಹಾಗೂ ಅದು ಯಾವ ರೀತಿಯಲ್ಲೂ ಪರಿಣಾಮಕಾರಿಯಾಗತಕ್ಕುದಲ್ಲ.

**98. ನೌಕರರನ್ನು ಕೆಲಸದಿಂದ ತೆಗೆದುಹಾಕುವುದು.–** ಶಿಕ್ಷಣದ ಅಥವಾ ಶಿಕ್ಷಣ ಕ್ರಮದ ಸಂಬಂಧದಲ್ಲಿ ಮಾಡಿದ ಯಾವುದೇ ಬದಲಾವಣೆಯ ಪರಿಣಾಮವಾಗಿ ಅಥವಾ ಇತರ ಯಾವುದೇ ಕಾರಣದಿಂದಾಗಿ ಆಡಳಿತ ಪರಿಷತ್ತು ಅಥವಾ ಸಕ್ಷಮ ಪ್ರಾಧಿಕಾರಿಯು, ಒಬ್ಬ ನೌಕರನನ್ನು ಕೆಲಸದಿಂದ ತೆಗೆದುಹಾಕುವುದು ಅವಶ್ಯವಾದರೆ ಸಕ್ಷಮ ಪ್ರಾಧಿಕಾರಿಯ, ಅಥವಾ ಸಂದರ್ಭಾನುಸಾರ ಅವರ ನಿಕಟ ಮೇಲಧಿಕಾರಿಯ ಪೂರ್ವಾನುಮೋದನೆಯ ತರುವಾಯ ಹಾಗೆ ಕೆಲಸದಿಂದ ತೆಗೆದುಹಾಕಬಹುದು.

(2) ಯಾವುದೇ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿಯ ಬೋಧಕ ಸಿಬ್ಬಂದಿಯ ಒಬ್ಬ ಸದಸ್ಯನನ್ನು ಕೆಲಸದಿಂದ ತೆಗೆದುಹಾಕಿರುವಲ್ಲಿ, ರಾಜ್ಯ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರಿಯು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳಲ್ಲಿನ ಮೀಸಲಾತಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ನಿಯಮಗಳಿಗೆ ಅಥವಾ ಆದೇಶಗಳಿಗೆ ಒಳಪಟ್ಟು, ಯಾವುದೇ ಇತರ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಅದೇ ಬಗೆಯ ಹುದ್ದೆಗಳು ಲಭ್ಯವಿರುವಾಗ ಅಂಥ ವ್ಯಕ್ತಿಯನ್ನು ಅದಕ್ಕೆ ನೇಮಕ ಮಾಡತಕ್ಕುದು.

(3) ಒಂದು ಸಂಸ್ಥೆಯ ಆಡಳಿತ ವರ್ಗವು ನೌಕರನನ್ನು ಬೇರೊಂದು ಸಂಸ್ಥೆಯಲ್ಲಿ ಖಾಲಿ ಇರುವ ಒಂದು ಹುದ್ದೆಗೆ ವರ್ಗಾಯಿಸಬೇಕೆಂದು ಇಚ್ಛಿಸಿದಲ್ಲಿ ಅಥವಾ ಸಂಸ್ಥೆಯ ಯಾವನೇ ನೌಕರನು ವರ್ಗಾವಣೆಯನ್ನು ಇಚ್ಛಿಸಿದರೆ ಅಥವಾ ಇಬ್ಬರು ನೌಕರರು ಪರಸ್ಪರ ವರ್ಗಾವಣೆಯನ್ನು ಇಚ್ಛಿಸಿದರೆ ರಾಜ್ಯ ಸರ್ಕಾರವು, ಸಂಸ್ಥೆಯ ಅಥವಾ ಸಂದರ್ಭಾನುಸಾರ ಆ ನೌಕರನ ಕೋರಿಕೆಯನ್ನು ಮಂಜೂರು ಮಾಡಬಹುದು.

**99. ಸೇವೆಯನ್ನು ಕೊನೆಗೊಳಿಸುವುದು.–** ಖಾಸಗಿ ಶಿಕ್ಷಣ ಸಂಸ್ಥೆಯ ಖಾಯಂಗೊಳಿಸಲಾದ ಒಬ್ಬ ನೌಕರನನ್ನು ದಂಡನೆಯ ಕ್ರಮದಿಂದಾಗಿ ಅಲ್ಲದೆ ಇತರ ಕಾರಣಗಳಿಗಾಗಿ ಆಡಳಿತ ಸಮಿತಿಯು ಸೇವೆಯಿಂದ ತೆಗೆದುಹಾಕಿದರೆ ಅಥವಾ ಸೇವೆಯನ್ನು ಕೊನೆಗೊಳಿಸಿದರೆ ಆ ನೌಕರನು, ಕನಿಷ್ಠ ಮೂರು ತಿಂಗಳುಗಳ ಮತ್ತು ಗರಿಷ್ಠ ಹದಿನೈದು ತಿಂಗಳುಗಳ ಸಂಬಳದ ಸಂದಾಯಕ್ಕೆ ಒಳಪಟ್ಟು ಪೂರ್ಣಗೊಳಿಸಿದ ಪ್ರತಿ ಸೇವಾ ವರ್ಷಕ್ಕೆ ಹದಿನೈದು ದಿನಗಳ ಸಂಬಳದ ದರದಲ್ಲಿ ಪರಿಹಾರ ಧನವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕುದು.

**100. ಈ ಅಧ್ಯಾಯದ ಮೇಲುಗೈ ಪರಿಣಾಮ.–** ಈ ಅಧ್ಯಾಯದ ಉಪಬಂಧಗಳು,-

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ; ಅಥವಾ

(ii) ಈ ಅಧಿನಿಯಮ ಪ್ರಾರಂಭವಾಗುವ ದಿನದ ಮೊದಲು ಅಥವಾ ಅನಂತರ ಸೇವೆಗೆ ಸಂಬಂಧಿಸಿದಂತೆ ಮಾಡಲಾದ ಯಾವುದೇ ಐತೀರ್ಪಿನಲ್ಲಿ, ಒಪ್ಪಂದದಲ್ಲಿ ಅಥವಾ ಕರಾರಿನಲ್ಲಿ; ಅಥವಾ

(iii) ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಯಾವುದೇ ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ

– ಏನೇ ಇದ್ದರೂ ಮೇಲುಗೈಯಾಗಿರತಕ್ಕುದು :

ಪರಂತು, ಅಂಥ ಯಾವುದೇ ಕಾನೂನು, ಐತೀರ್ಪು, ಒಪ್ಪಂದ, ಸೇವಾ ಕರಾರು, ತೀರ್ಪು, ಡಿಕ್ರಿ ಅಥವಾ ಆದೇಶ ಇವುಗಳ ಮೇರೆಗೆ ಅಥವಾ ಇತರ ರೀತಿಯಲ್ಲಿ ಯಾವನೇ ಶಿಕ್ಷಕನು ಅಥವಾ ಇತರ ನೌಕರನು ಈ ಅಧ್ಯಾಯದ ಮೇರೆಗೆ ಕೊಡಲಾಗುವ ಪ್ರಯೋಜನಗಳಿಗಿಂತ ಹೆಚ್ಚಿನ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರುವಲ್ಲಿ ಅವನು ಅಂಥ ಪ್ರಯೋಜನಗಳ ಮುಂದುವರಿಕೆಗೆ ಹಕ್ಕುಳ್ಳವನಾಗತಕ್ಕುದು:

ಮತ್ತೂ ಪರಂತು, ಈ ಅಧ್ಯಾಯದಲ್ಲಿ ಇರುವುದು ಯಾವುದೂ, ಅಂಥ ಅನುಕೂಲಕರ ಸೌಲಭ್ಯಗಳನ್ನು ನೀಡಲಾಗುವ ಶಿಕ್ಷಕರು ಅಥವಾ ನೌಕರರು ಯಾವುದಾದರೂ ಕರಾರನ್ನು ಮಾಡಿ-ಕೊಳ್ಳುವುದಕ್ಕೆ ಅಡ್ಡಿಪಡಿಸತಕ್ಕುದಲ್ಲ.

**101. ದಂಡನೆ ವಿಧಿಸಲು ಸರ್ಕಾರದ ಅಧಿಕಾರ.–** 92 ಮತ್ತು 94ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಸಕ್ಷಮ ಪ್ರಾಧಿಕಾರವು ಒಬ್ಬ ನೌಕರನ ವಿರುದ್ಧ ಶಿಸ್ತು ಕ್ರಮ ಕೈಕೊಳ್ಳುವುದು ಅವಶ್ಯವೆಂದು ಅಭಿಪ್ರಾಯಪಡುವಲ್ಲಿ, ಆ ಸಕ್ಷಮ ಪ್ರಾಧಿಕಾರವು ಸಂಬಂಧಪಟ್ಟ ನೌಕರನ ವಿರುದ್ಧ ನಿರ್ದಿಷ್ಟಪಡಿಸಿದ ಅವಧಿಯ ಒಳಗಾಗಿ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಆಡಳಿತ ಪರಿಷತ್ತಿಗೆ ನಿರ್ದೇಶಿಸಬಹುದು; ಆಡಳಿತ ಪರಿಷತ್ತು ಅಂಥ ನಿರ್ದೇಶನವನ್ನು ಪಾಲಿಸಲು ತಪ್ಪಿದಲ್ಲಿ, ಸಕ್ಷಮ ಪ್ರಾಧಿಕಾರವು ಆ ವಿಷಯವನ್ನು ಸರ್ಕಾರಕ್ಕೆ ವರದಿ ಮಾಡತಕ್ಕುದು ಮತ್ತು ಸರ್ಕಾರವು ಸದರಿ ವರದಿಯನ್ನು ಪರಿಶೀಲಿಸಿದ ನಂತರ, ಆ ನೌಕರನ ವಿರುದ್ಧ ಶಿಸ್ತು ಕ್ರಮ ಕೈಕೊಳ್ಳಲು ಯಾವನೇ ವ್ಯಕ್ತಿಯನ್ನು ಅಥವಾ ಯಾವುದೇ ಪ್ರಾಧಿಕಾರವನ್ನು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದು, ಹಾಗೆ ನಿರ್ದಿಷ್ಟಪಡಿಸಲಾದ ವ್ಯಕ್ತಿ ಅಥವಾ ಪ್ರಾಧಿಕಾರವು ಆ ತರುವಾಯ ಆ ನೌಕರನ ವಿರುದ್ಧ ಶಿಸ್ತು ಕ್ರಮ ಕೈಕೊಳ್ಳಬಹುದು ಮತ್ತು ಆಡಳಿತ ಪರಿಷತ್ತು ವಿಧಿಸತಕ್ಕ ಎಲ್ಲ ದಂಡನೆಗಳನ್ನು ಅಥವಾ ಯಾವುದೇ ದಂಡನೆಯನ್ನು ಅಂಥ ನೌಕರನಿಗೆ ವಿಧಿಸಬಹುದು ಮತ್ತು ಅಂಥ ವ್ಯಕ್ತಿಯ ಅಥವಾ ಪ್ರಾಧಿಕಾರದ ತೀರ್ಮಾನದ ವಿರುದ್ಧ ನಿಯಮಿಸಲಾದ ಅವಧಿಯೊಳಗಾಗಿ ಅಪೀಲು ಸಲ್ಲಿಸಲು ಅವಕಾಶವಿರತಕ್ಕುದು.

## ಅಧ್ಯಾಯ – XV

### ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ

**102. ಆಡಳಿತ ಪರಿಷತ್ತಿನ ಆಚಾರ ಸಂಹಿತೆ.–** ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ, ನಿಯಮಿಸಬಹುದಾದಂಥ ಆಚಾರ ಸಂಹಿತೆಯು, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿಗೆ ಅನ್ವಯವಾಗತಕ್ಕುದು, ಈ ಅಧಿನಿಯಮದ ಮೇರೆಗೆ ಉದ್ಭವಿಸುವ ಮತ್ತು ಮೇಲೆ ಹೇಳಿದಂಥ ಆಚಾರ ಸಂಹಿತೆಯಲ್ಲಿ ಒಳಗೊಳ್ಳದೆ ಇರುವಂಥ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿಯಮಿಸಿದ ಆಚಾರ ಸಂಹಿತೆಗೆ ಅಸಂಗತವಾಗದಂತೆ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು ಆಡಳಿತ ಪರಿಷತ್ತು ಸಿದ್ಧಪಡಿಸಿದ ಆಚಾರ ಸಂಹಿತೆಯು ಅದಕ್ಕೆ ಅನ್ವಯವಾಗತಕ್ಕುದು ಮತ್ತು ಅದನ್ನು ಸಕ್ಷಮ ಪ್ರಾಧಿಕಾರಿಗೆ ಮಾಹಿತಿಗಾಗಿ ಕಳಿಸತಕ್ಕುದು.

**103. ಸ್ವತ್ತುಗಳ ಪಟ್ಟಿಯನ್ನು ಒದಗಿಸುವುದು.–** (1) ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯು, ತನ್ನ ಒಡೆತನದಲ್ಲಿರುವ ಚರ ಹಾಗೂ ಸ್ಥಿರ ಸ್ವತ್ತುಗಳ ಪಟ್ಟಿಯನ್ನು ಇಡತಕ್ಕುದು.

(2) ಆಡಳಿತ ವರ್ಗವು, ನಿಯಮಿಸಿದ ದಿನಾಂಕದಂದು ಅಥವಾ ದಿನಾಂಕದೊಳಗಾಗಿ ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಅಂಥ ಪಟ್ಟಿಯ ಒಂದು ಪ್ರತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಒದಗಿಸತಕ್ಕುದು.

**104. ನಿಧಿ, ಮುಂತಾದವುಗಳ ಬಳಕೆ.–** (1) ಖಾಸಗಿ ಶಿಕ್ಷಣ ಸಂಸ್ಥೆಯ ಪರವಾಗಿ ಆಡಳಿತ ವರ್ಗವು ಸಂಗ್ರಹಿಸಿದ ಎಲ್ಲ ಹಣ, ಸ್ವೀಕರಿಸಿದ ಅನುದಾನ ಮತ್ತು ಹೊಂದಿರುವ ಎಲ್ಲ ಸ್ವತ್ತುಗಳನ್ನು ನಿಯಮಿಸಲಾದ ಉದ್ದೇಶಗಳಿಗೆ ಮತ್ತು ಯಾವ ಉದ್ದೇಶಗಳಿಗಾಗಿ ಅವುಗಳನ್ನು ಕೊಡಲಾಗಿದೆಯೋ ಆ ಉದ್ದೇಶಗಳಿಗಾಗಿ ಬಳಸತಕ್ಕುದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಆ ಖಾಸಗಿ ಶಿಕ್ಷಣ ಸಂಸ್ಥೆಯು ಲೆಕ್ಕಪತ್ರಗಳನ್ನು ಇಡತಕ್ಕುದು.

(2) ಖಾಸಗಿ ಶಿಕ್ಷಣ ಸಂಸ್ಥೆಯು ತನ್ನ ನಿಧಿಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಠೇವಣಿ ಇಡತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಹಣದ ಬಗ್ಗೆ ಲೆಕ್ಕ ಕೊಡಲು ತಪ್ಪಿದ ಆಡಳಿತ ಪರಿಷತ್ತು ಸಕ್ಷಮ ಪ್ರಾಧಿಕಾರವು ನಿಗದಿಪಡಿಸಬಹುದಾದ ಅವಧಿಯೊಳಗಾಗಿ ಆ ಖಾಸಗಿ ಶಿಕ್ಷಣ ಸಂಸ್ಥೆಯ ಲೆಕ್ಕಕ್ಕೆ ಆ ಹಣವನ್ನು ತುಂಬಿ ಕೊಡತಕ್ಕುದು, ಹಾಗೆ ನಿಗದಿಪಡಿಸಿದ ಅವಧಿಯೊಳಗಾಗಿ ಹಣವನ್ನು ತುಂಬಿಕೊಡದಿದ್ದರೆ, ಸಕ್ಷಮ ಪ್ರಾಧಿಕಾರವು ಅದನ್ನು ಭೂಕಂದಾಯದ ಬಾಕಿಯಂತೆ ಆಡಳಿತ ಪರಿಷತ್ತಿನಿಂದ ವಸೂಲು ಮಾಡಿ ಸಂಸ್ಥೆಯ ಲೆಕ್ಕಕ್ಕೆ ಜಮೆ ಮಾಡತಕ್ಕುದು.

**105. ಸಾಕಷ್ಟು ನೋಟೀಸು ಕೊಡದೆ ಖಾಸಗಿ ಸಂಸ್ಥೆಗಳನ್ನು ಮುಚ್ಚದಿರುವುದು ಇತ್ಯಾದಿ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು ಆ ಶಿಕ್ಷಣ ಸಂಸ್ಥೆಯನ್ನು ಮುಚ್ಚುವ ಬಗ್ಗೆ ಅಥವಾ ಮುಂದುವರಿಸದಿರುವ ಬಗ್ಗೆ, ಆ ಕುರಿತು ಸಕ್ಷಮ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಗೆ ಒಂದು ಶೈಕ್ಷಣಿಕ ವರ್ಷಕ್ಕೆ ಕಡಿಮೆಯಲ್ಲದ ಅವಧಿಗೆ ಮುಂಚಿತವಾಗಿ ನೋಟೀಸನ್ನು ಕೊಡದೆ ಆ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚತಕ್ಕುದಲ್ಲ ಅಥವಾ ಮುಂದುವರಿಸದಿರತಕ್ಕುದಲ್ಲ.

(2) ಮನ್ನಣೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚಿದ ಅನಂತರ, ಸರ್ಕಾರವು ಅದಕ್ಕೆ ಕೊಟ್ಟ ಸಹಾಯಾನುದಾನಕ್ಕೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರವು ನಿರ್ಧರಿಸಬಹುದಾದ ಅದರ ಎಲ್ಲ ಸ್ವತ್ತುಗಳು ರಾಜ್ಯ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕುದು.

**106. ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚುವುದು ಇತ್ಯಾದಿಗಳ ನಂತರ ಆಡಳಿತ ಪರಿಷತ್ತು, ಸ್ವತ್ತುಗಳನ್ನು ಮತ್ತು ದಾಖಲೆ, ಮುಂತಾದುವುಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ವಹಿಸಿಕೊಡುವುದು.–** (1) ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚುವ ಅಥವಾ ಮುಂದುವರಿಸದಿರುವ ಅಥವಾ ಅದರ ಮನ್ನಣೆಯನ್ನು ರದ್ದುಪಡಿಸುವ ಸಂದರ್ಭದಲ್ಲಿ, ಆಡಳಿತ ಪರಿಷತ್ತು ತನ್ನ ವಶದಲ್ಲಿದ್ದ ಶಿಕ್ಷಣ ಸಂಸ್ಥೆಯ ಎಲ್ಲ ಸ್ವತ್ತುಗಳ, ದಾಖಲೆಗಳ ಮತ್ತು ಲೆಕ್ಕಪತ್ರಗಳ ಅಭಿರಕ್ಷೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ವಹಿಸಿಕೊಡತಕ್ಕುದು ಅಥವಾ ವಹಿಸಿಕೊಡುವಂತೆ ಮಾಡತಕ್ಕುದು.

(2) (ಎ) ಸಂಸ್ಥೆಯ ಸ್ವತ್ತುಗಳ, ದಾಖಲೆಗಳ ಅಥವಾ ಲೆಕ್ಕಪತ್ರಗಳ ಅಭಿರಕ್ಷೆಯನ್ನು ತೆಗೆದುಕೊಳ್ಳುವಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಅಂಥ ಆಡಳಿತ ವರ್ಗವು ಅಡ್ಡಿಪಡಿಸಿದರೆ ಅಥವಾ ತಡೆಯುಂಟು ಮಾಡಿದರೆ, ಅಧಿಕಾರ ವ್ಯಾಪ್ತಿಯುಳ್ಳ ಪ್ರಥಮ ದರ್ಜೆಯ ಯಾರೇ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಸಕ್ಷಮ ಪ್ರಾಧಿಕಾರವು ಅರ್ಜಿಯನ್ನು ಸಲ್ಲಿಸಿದ ಮೇಲೆ, ಅವನು ಆಡಳಿತ ಪರಿಷತ್ತಿಗೆ ನೋಟೀಸನ್ನು ಕೊಟ್ಟ ನಂತರ ಆದೇಶ ಹೊರಡಿಸಿ, ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿದ

ಅವಧಿಯೊಳಗಾಗಿ ಸಂಸ್ಥೆಯ ಅಂಥ ಸ್ವತ್ತುಗಳ, ದಾಖಲೆಗಳ ಅಥವಾ ಲೆಕ್ಕಪತ್ರಗಳ ಅಭಿರಕ್ಷೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ವಹಿಸಿಕೊಡುವಂತೆ ನಿರ್ದೇಶಿಸತಕ್ಕುದು.

(ಬಿ) (ಎ) ಖಂಡದ ಮೇರೆಗೆ ಮ್ಯಾಜಿಸ್ಟ್ರೇಟ್‌ನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಸ್ವತ್ತುಗಳ, ದಾಖಲೆಗಳ ಅಥವಾ ಲೆಕ್ಕಪತ್ರಗಳ ಅಭಿರಕ್ಷೆಯನ್ನು ವಹಿಸಿಕೊಡಲು ಆಡಳಿತ ಪರಿಷತ್ತು ತಪ್ಪಿದರೆ, ಅದು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತವಾಗತಕ್ಕುದು, ಮತ್ತು ಮ್ಯಾಜಿಸ್ಟ್ರೇಟನು, ಅವಶ್ಯವೆನಿಸಬಹುದಾದಂಥ ಪೊಲೀಸ್ ಸಹಾಯದಿಂದ ಸ್ವತ್ತುಗಳ, ದಾಖಲೆಗಳ ಅಥವಾ ಲೆಕ್ಕಪತ್ರಗಳ ಅಭಿರಕ್ಷೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ವಹಿಸಿಕೊಡುವಂತೆ ಮಾಡತಕ್ಕುದು.

(3) ಈ ಪ್ರಕರಣದಲ್ಲಿರುವುದಾವುದೂ, ಧರ್ಮಾರ್ಥ ಅಥವಾ ಧಾರ್ಮಿಕ ಸಂಸ್ಥೆಯವರ, ಧರ್ಮಾರ್ಥ ಅಥವಾ ಧಾರ್ಮಿಕ ದತ್ತಿಯ ಮತ್ತು ವಕ್ಫ್‌ನ ಆಡಳಿತಗಳಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸತಕ್ಕುದಲ್ಲ.

**107. ಖಾಸಗಿ ಶಿಕ್ಷಣ ಸಂಸ್ಥೆಯ ಸ್ವತ್ತನ್ನು ಪರಭಾರೆ ಮಾಡಲು ನಿರ್ಬಂಧ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಅರ್ಜಿಯನ್ನು ಸಲ್ಲಿಸಿ ಸಕ್ಷಮ ಪ್ರಾಧಿಕಾರದ ಲಿಖಿತ ಪೂರ್ವಾನುಮತಿಯನ್ನು ಪಡೆದ ಹೊರತು, ಖಾಸಗಿ ಶಿಕ್ಷಣ ಸಂಸ್ಥೆಯ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ, ಯಾವುದೇ ಮಾರಾಟ, ಅಡಮಾನ, ಗುತ್ತಿಗೆ, ಒತ್ತೆ ಅಥವಾ ಪ್ರಭಾರ ಅಥವಾ ಸ್ವಾಧೀನತೆಯ ವರ್ಗಾವಣೆ ಮಾಡತಕ್ಕುದಲ್ಲ ಅಥವಾ ಸೃಷ್ಟಿಸತಕ್ಕುದಲ್ಲ.

(2) (ಎ) (1)ನೇ ಉಪಪ್ರಕರಣದ ಮೇರೆಗೆ ಕೋರಲಾದ ಅನುಮತಿಯನ್ನು ನೀಡುವುದರಿಂದ ಸಂಸ್ಥೆಯ ಕಾರ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮವುಂಟಾಗುವುದೆಂದು ಸಕ್ಷಮ ಪ್ರಾಧಿಕಾರವು ಅಭಿಪ್ರಾಯಪಡುವ ಹೊರತು ಅದನ್ನು ನಿರಾಕರಿಸತಕ್ಕುದಲ್ಲ.

(ಬಿ) ಅನುಮತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಸಕ್ಷಮ ಪ್ರಾಧಿಕಾರವು ಅಂಥ ಅನುಮತಿಯನ್ನು ನೀಡುವ ಅಥವಾ ನಿರಾಕರಿಸುವ ಬಗ್ಗೆ ಆದೇಶ ನೀಡತಕ್ಕುದು.

(3) (2)ನೇ ಉಪಪ್ರಕರಣದ ಮೇರೆಗಿನ ಅನುಮತಿ ನಿರಾಕರಿಸುವ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಸಮಯದೊಳಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(4) (1)ನೇ ಉಪಪ್ರಕರಣವನ್ನು ಉಲ್ಲಂಘಿಸಿ ಮಾಡಲಾದ ಯಾವುದೇ ವ್ಯವಹಾರವು ಅನೂರ್ಜಿತವಾಗತಕ್ಕುದು ಮತ್ತು ಅಸಿಂಧುವಾಗತಕ್ಕುದು.

**108. ಕೆಲವು ಸಂದರ್ಭಗಳಲ್ಲಿ ಮಾಡಿದ ಸಾಲಗಳನ್ನು ಮರು ಪಾವತಿ ಮಾಡಲು ಕಾರ್ಯದರ್ಶಿಯ ಹೊಣೆ.–** ಯಾವನೇ ಕಾರ್ಯದರ್ಶಿಯು, ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸುವ ಉದ್ದೇಶಕ್ಕಾಗಿ ಅಂಥ ಸಂಸ್ಥೆಯ ಆಡಳಿತ ಪರಿಷತ್ತಿನಿಂದ ಅಥವಾ ಸಂದರ್ಭಾನುಸಾರ ಆಡಳಿತ ಸಮಿತಿಯಿಂದ ಸೂಕ್ತ ಅಧಿಕಾರ ಪಡೆಯದೆ ಸಾಲ ಮಾಡಿರುವಲ್ಲಿ ಮತ್ತು ಅಂಥ ಸಾಲಗಳ ಮೂಲಕ ಪಡೆದ ಹಣವನ್ನು ಸಂಸ್ಥೆಯ ನಿರ್ವಹಣೆಗಾಗಿ ಉಪಯೋಗಿಸಿಲ್ಲವೆಂದು ತನಿಖೆ ನಡೆಸಿದ ತರುವಾಯ ಸಕ್ಷಮ ಪ್ರಾಧಿಕಾರಕ್ಕೆ ಕಂಡುಬಂದಲ್ಲಿ, ಸದರಿ ಸಾಲಗಳನ್ನು ತೀರಿಸುವುದು ಅಂಥ ಕಾರ್ಯದರ್ಶಿಯ ವೈಯಕ್ತಿಕ ಹೊಣೆಯಾಗಿರತಕ್ಕುದು.

## ಅಧ್ಯಾಯ - XVI

## ರಾಜ್ಯ ಶಿಕ್ಷಣ ಸಲಹಾ ಪರಿಷತ್ತು ಇತ್ಯಾದಿ

**109. ರಾಜ್ಯ ಶಿಕ್ಷಣ ಸಲಹಾ ಪರಿಷತ್ತು.–** ಶೈಕ್ಷಣಿಕ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು, ಅಧಿಸೂಚನೆ ಹೊರಡಿಸಿ ಅಧಿಕಾರಿಗಳನ್ನು ಮತ್ತು ಅಧಿಕಾರೇತರರನ್ನು ಒಳಗೊಂಡ ರಾಜ್ಯ ಶಿಕ್ಷಣ ಸಲಹಾ ಪರಿಷತ್ತು (ಇದರಲ್ಲಿ ಇನ್ನು ಮುಂದೆ ಪರಿಷತ್ತು ಎಂದು ಉಲ್ಲೇಖಿಸಲಾಗಿದೆ) ರಚಿಸತಕ್ಕುದು.

(2) ಶಿಕ್ಷಣ ಖಾತೆಯ ಪ್ರಭಾರವನ್ನು ಹೊಂದಿರುವ ಮಂತ್ರಿಯು ಸಲಹಾ ಪರಿಷತ್ತಿನ ಅಧ್ಯಕ್ಷನಾಗಿರತಕ್ಕುದು ಮತ್ತು ಸಂಬಂಧಪಟ್ಟ ಇತರ ಮಂತ್ರಿಗಳು ಯಾರಾದರೂ ಇದ್ದರೆ ಅವರು ಸಹ ಅಧ್ಯಕ್ಷರಾಗಿರತಕ್ಕುದು ಮತ್ತು ಶಿಕ್ಷಣ ಖಾತೆಯ ರಾಜ್ಯ ಮಂತ್ರಿ ಅಥವಾ ಉಪ ಮಂತ್ರಿಯು ಯಾರಾದರೂ ಇದ್ದರೆ, ಅವರು ಈ ಪರಿಷತ್ತಿನ ಉಪಾಧ್ಯಕ್ಷರಾಗಿರತಕ್ಕುದು.

(3) ಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯು ಅದರ ಸದಸ್ಯ ಕಾರ್ಯದರ್ಶಿ ಯಾಗಿರತಕ್ಕುದು.

(4) ಪರಿಷತ್ತು ಈ ಕೆಳಕಂಡ ಸದಸ್ಯರನ್ನೂ ಸಹ ಒಳಗೊಂಡಿರತಕ್ಕುದು:-

(ಎ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ, 1963ರ ಮೇರೆಗೆ ರಚಿತವಾದ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು;

(ಬಿ) ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ, ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ, ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕ, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕ, ವಯಸ್ಕರ ಶಿಕ್ಷಣ ಇಲಾಖೆಯ ನಿರ್ದೇಶಕ, ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕ, ಯುವಜನ ಸೇವಾ ಇಲಾಖೆಯ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕ, ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಇಲಾಖೆಯ ನಿರ್ದೇಶಕ, ಕೃಷಿ ಇಲಾಖೆಯ ನಿರ್ದೇಶಕ;

(ಸಿ) 110ನೇ ಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ಸ್ಥಾಯೀ ಸಮಿತಿಯ ನಾಮ-ನಿರ್ದೇಶಿತ ಸದಸ್ಯರು;

(ಡಿ) ರಾಜ್ಯ ಸರ್ಕಾರವು, ನಾಮನಿರ್ದೇಶನ ಮಾಡಿದ ಹತ್ತಕ್ಕಿಂತ ಹೆಚ್ಚಿಲ್ಲದಷ್ಟು ಸದಸ್ಯರು, ಇವರಲ್ಲಿ ಮೂವರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿರತಕ್ಕುದು ಮತ್ತು ಕಡೇ ಪಕ್ಷ ಒಬ್ಬರು ಮಹಿಳೆ ಇರತಕ್ಕದು, ಇಬ್ಬರು ಹಿಂದುಳಿದ ವರ್ಗಗಳವರು ಹಾಗೂ ಒಬ್ಬರು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರು ಆಗಿರತಕ್ಕುದು.

(5) ಸದಸ್ಯರ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಪದಾವಧಿಯು ನಿಯಮಿಸ-ಬಹುದಾದಂತೆ ಇರತಕ್ಕುದು.

**110. ಸ್ಥಾಯೀ ಸಮಿತಿ.–** (1) ಸಾರ್ವಜನಿಕ ಶಿಕ್ಷಣ, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ, ವೃತ್ತಿ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಈ ಪ್ರತಿಯೊಂದು ಇಲಾಖೆಗೂ ರಾಜ್ಯ ಶಿಕ್ಷಣ ಸಲಹಾ ಸಮಿತಿಯ ಒಂದೊಂದು ಸ್ಥಾಯಿ ಸಮಿತಿ ಇರತಕ್ಕುದು.

(2) ಇಂಥ ಪ್ರತಿಯೊಂದು ಸಮಿತಿಯು, ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು:-

(ಎ) ಸಂಬಂಧಪಟ್ಟ ಇಲಾಖೆಯ ಸರ್ಕಾರದ ಕಮೀಷನರು ಅಥವಾ ಕಾರ್ಯದರ್ಶಿ

- ಅಧ್ಯಕ್ಷರು;

(ಬಿ) ಸಂದರ್ಭಾನುಸಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮೀಷನರು ಅಥವಾ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕ ಅಥವಾ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಅಥವಾ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕ ಅಥವಾ ವಯಸ್ಕರ ಶಿಕ್ಷಣ ಸಲಾಖೆಯ ನಿರ್ದೇಶಕ ಅಥವಾ ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕ – ಸದಸ್ಯ;

(ಸಿ) ಸಂಬಂಧಪಟ್ಟ ಶಿಕ್ಷಣ ವಿಷಯದಲ್ಲಿ ತಜ್ಞರಾದ ಮೂವರು ಇತರ ಸದಸ್ಯರನ್ನು ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡತಕ್ಕುದು.

(3) ಸ್ಥಾಯೀ ಸಮಿತಿಯ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳು ಮತ್ತು ಪದಾವಧಿಯು ನಿಯಮಿಸಬಹುದಾದಂತೆ ಇರತಕ್ಕುದು.

**111. ಸಲಹಾ ಸಮಿತಿ.–** (1) ಸರ್ಕಾರವು ಪೂರ್ವ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ, ತಾಂತ್ರಿಕ ಶಿಕ್ಷಣ, ವೃತ್ತಿ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣ, ಕಾಲೇಜು ಶಿಕ್ಷಣ, ವೈದ್ಯಕೀಯ ಶಿಕ್ಷಣ, ಅಧ್ಯಾಪಕರ ಶಿಕ್ಷಣ, ಸಂಸ್ಕೃತ ಶಿಕ್ಷಣ, ಅರೇಬಿಕ್ ಹಾಗೂ ಪರ್ಶಿಯನ್ ಶಿಕ್ಷಣ, ವಾಣಿಜ್ಯ ಶಿಕ್ಷಣ, ಕಲೆ ಮತ್ತು ಕುಶಲ ಕಲಾ ಶಿಕ್ಷಣ, ದೈಹಿಕ ಶಿಕ್ಷಣ, ಹಿಂದೀ ಶಿಕ್ಷಣ, ಸಂಗೀತ, ನೃತ್ಯ, ತಾಳವಾದ್ಯ ನಾಟಕ ಶಿಕ್ಷಣ, ಅಂಗವಿಕಲರ ಶಿಕ್ಷಣ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳವರ ಶಿಕ್ಷಣ, ಬಾಲಿಕೆಯರ ಮತ್ತು ಮಹಿಳೆಯರ ಶಿಕ್ಷಣ, ಅಲ್ಪ ಸಂಖ್ಯಾತರ ಶಿಕ್ಷಣ, ಶೈಕ್ಷಣಿಕ ಕಟ್ಟಡಗಳು ಮತ್ತು ಅವಶ್ಯವೆಂದು ಭಾವಿಸುವಂಥ ಇತರ ವಿಭಾಗಗಳಲ್ಲಿ ಶಿಕ್ಷಣಕ್ಕಾಗಿ ಪ್ರತ್ಯೇಕ ಸಲಹಾ ಸಮಿತಿಗಳನ್ನು ರಚಿಸಬಹುದು.

(2) ಪ್ರತಿಯೊಂದು ಸಲಹಾ ಸಮಿತಿಯಲ್ಲಿ ನಿಯಮಿಸಬಹುದಾದಷ್ಟು ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರು ಸೇರಿ ಒಂಬತ್ತು ಜನರಿಗೆ ಮೀರದಷ್ಟು ಸದಸ್ಯರಿರತಕ್ಕುದು. ರಾಜ್ಯ ಸರ್ಕಾರವು, ಪ್ರತಿ ಸಮಿತಿಯ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸತಕ್ಕುದು ಹಾಗೂ ಪ್ರತಿ ಸಮಿತಿಗೆ ಒಬ್ಬ ಕಾರ್ಯದರ್ಶಿಯನ್ನು ನೇಮಿಸತಕ್ಕುದು.

(3) ಸಮಿತಿಯ ಸದಸ್ಯರ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಪದಾವಧಿಯು ನಿಯಮಿಸಬಹುದಾದಂತೆ ಇರತಕ್ಕುದು.

**112. ಸಭೆಗಳ ಕಾರ್ಯ ವಿಧಾನ.–** ರಾಜ್ಯ ಶಿಕ್ಷಣ ಸಲಹಾ ಪರಿಷತ್ತಿನ ಮತ್ತು ಸಲಹಾ ಸಮಿತಿಗಳ ಸಭೆಗಳಲ್ಲಿ ಅನುಸರಿಸತಕ್ಕ ಕಾರ್ಯ ವಿಧಾನವು ನಿಯಮಿಸಬಹುದಾದಂತೆ ಇರತಕ್ಕುದು.

## ಅಧ್ಯಾಯ – XVII

## ದಂಡನೆಗಳು

**113. 17ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** (1) ಯಾವನೇ ವ್ಯಕ್ತಿಯು, 17ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಗತ್ಯವಾದಂಥ ಯಾವುದೇ ಮಾಹಿತಿಯನ್ನು ಒದಗಿಸಲು ತಪ್ಪಿದಲ್ಲಿ ಅವನು ಅಪರಾಧ ನಿರ್ಣಯವಾದ ನಂತರ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

(2) 17ನೇ ಪ್ರಕರಣದ ಮೇರೆಗೆ ಮಾಡಿದ ಹಾಜರಾತಿ ಆದೇಶ ಪಾಲಿಸಲು ತಂದೆ ತಾಯಿಗಳಲ್ಲಿ ಯಾರಾದರೂ ತಪ್ಪಿದಲ್ಲಿ ಅವರು ಅಪರಾಧ ನಿರ್ಣಯವಾದ ನಂತರ ಎರಡು ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡಿತರಾಗತಕ್ಕುದು ಮತ್ತು ಉಲ್ಲಂಘನೆಯು ಮುಂದುವರೆದಲ್ಲಿ ಆ ಅವಧಿಯ ಪ್ರತಿ ದಿನಕ್ಕೆ ಒಂದು ರೂಪಾಯಿಗೆ ಮೀರದ ಹೆಚ್ಚಿನ ಜುಲ್ಮಾನೆಯಿಂದ ದಂಡಿತರಾಗತಕ್ಕುದು:

ಪರಂತು, ಜುಲ್ಮಾನೆಯ ಮೊಬಲಗು ಯಾವುದೇ ಒಂದು ವರ್ಷದಲ್ಲಿ ಒಂದು ನೂರು ರೂಪಾಯಿಗೆ ಮೀರತಕ್ಕುದಲ್ಲ.

**114. 18ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** ಯಾವನೇ ವ್ಯಕ್ತಿಯು, 18ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ, ಅವನು ಅಪರಾಧ ನಿರ್ಣಯವಾದ ನಂತರ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕುದು ಮತ್ತು ಉಲ್ಲಂಘನೆ ಮುಂದುವರೆದಲ್ಲಿ ಆ ಅವಧಿಯ ಪ್ರತಿಯೊಂದು ದಿನಕ್ಕೆ ಒಂದು ರೂಪಾಯಿಗೆ ಮೀರದಂತೆ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**115. 23ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** 23ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**116. ರ್‍ಯಾಗಿಂಗ್ ಮಾಡಿದ್ದಕ್ಕಾಗಿ ದಂಡನೆ.–** (1) ವಿಶ್ವವಿದ್ಯಾನಿಲಯದ ಅಥವಾ ಕೇಂದ್ರ ಸರ್ಕಾರದ ನೇರ ಆಡಳಿತ ನಿರ್ವಹಣೆಯಲ್ಲಿರುವ ಸಂಸ್ಥೆಯೂ ಸೇರಿದಂತೆ ಒಂದು ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿರುವ ಯಾವನೇ ವ್ಯಕ್ತಿಯು ರ್‍ಯಾಗಿಂಗ್ ಮಾಡತಕ್ಕುದಲ್ಲ.

(2) (1)ನೇ ಉಪಪ್ರಕರಣವನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**117. ಪರೀಕ್ಷೆಗಳಲ್ಲಿ ಕಾಪಿ ಮಾಡಿದ್ದಕ್ಕೆ ದಂಡನೆ.–** ಯಾವನೇ ವ್ಯಕ್ತಿಯು 24ನೇ ಪ್ರಕರಣವನ್ನು ಉಲ್ಲಂಘಿಸುತ್ತಿರುವುದು ಪರಿವೀಕ್ಷಕನಿಗೆ ಅಥವಾ ಪರೀಕ್ಷೆಯ ಮೇಲ್ವಿಚಾರಣೆ ನಡೆಸುವ ಯಾವನೇ ಇತರ ವ್ಯಕ್ತಿಗೆ ಕಂಡುಬಂದರೆ ಆತನು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**118. ಪರೀಕ್ಷೆಗಳಲ್ಲಿ ಇತರರಂತೆ ನಟಿಸಿ ಹಾಜರಾಗಿದ್ದಕ್ಕೆ ದಂಡನೆ.–** 25ನೇ ಪ್ರಕರಣದ ಉಪಂಬಂಧಗಳ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಒಂದು ನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**119. ಪರೀಕ್ಷಾ ಕೇಂದ್ರದ ಸಮೀಪ ಅಲೆದಾಡುತ್ತಿರುವುದು, ಮುಂತಾದವಕ್ಕೆ ದಂಡನೆ.–** 26ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**120. ಪರೀಕ್ಷೆಯಲ್ಲಿ ಬರೆದ ಉತ್ತರಗಳನ್ನು ವ್ಯತ್ಯಾಸಗೊಳಿಸಿದ್ದಕ್ಕೆ ದಂಡನೆ.–** (1) 27ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

(2) ಯಾವುದೇ ಪರೀಕ್ಷೆಗೆ ಸಂಬಂಧಿಸಿದ ಕಾರ್ಯವನ್ನು ವಹಿಸಲಾದ ಅಥವಾ ಆ ಸಂಬಂಧವಾಗಿ ನೇಮಕನಾದ ವ್ಯಕ್ತಿಯ ದೇಹಕ್ಕೆ ಅಥವಾ ಸ್ವತ್ತಿಗೆ ಬಾಧಕ ಉಂಟು ಮಾಡುವ ಯಾವುದೇ ಅಪರಾಧವನ್ನು ಮಾಡುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ತರುವಾಯ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**121. ಪರೀಕ್ಷೆಯಲ್ಲಿ ಇತರ ದುರಾಚರಣೆಗಳಿಗೆ ನಿಷೇಧ, ಇತ್ಯಾದಿ.–** 115, 117, 118, 119 ಹಾಗೂ 120 ಈ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳ ಹೊರತಾಗಿ ಇತರ ಯಾವುದೇ ದುರಾಚರಣೆಯನ್ನು ಅನುಸರಿಸುವ ಅಥವಾ ಅವಲಂಬಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ತರುವಾಯ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ಕಡಿಮೆಯಲ್ಲದ, ಅದರೆ ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**122. 28ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** ಯಾವುದೇ ಪರೀಕ್ಷೆಗೆ ಸಂಬಂಧಿಸಿದ ಮತ್ತು ಅವನಿಗೆ ವಹಿಸಿಕೊಡಲಾದ ಯಾವುದೇ ಕೆಲಸವನ್ನು ಮಾಡಲು ಯುಕ್ತ ಕಾರಣಗಳಿಲ್ಲದೆ ನಿರಾಕರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**123. ನೋಂದಣಿಯಾಗದ ಶಿಕ್ಷಣ ಸಂಸ್ಥೆಗಳು ಮುಂತಾದುವನ್ನು ಸ್ಥಾಪಿಸಿದ್ದಕ್ಕಾಗಿ ದಂಡನೆ.–** ಯಾವನೇ ವ್ಯಕ್ತಿಯು, 30ನೇ ಪ್ರಕರಣವನ್ನು ಉಲ್ಲಂಘಿಸಿ ಅಥವಾ 31ನೇ ಪ್ರಕರಣದ ಮೇರೆಗೆ ಸಂಸ್ಥೆಯ ನೋಂದಣಿಯನ್ನು ನಿರಾಕರಿಸಿದ ನಂತರ ಅಥವಾ 34ನೇ ಪ್ರಕರಣದ ಮೇರೆಗೆ ನೋಂದಣಿಯನ್ನು ರದ್ದುಗೊಳಿಸಿದನಂತರ, ಸಂದರ್ಭಾನುಸಾರ, ಅಂಥ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ ಅಥವಾ ನಿರ್ವಹಿಸಿದಲ್ಲಿ ಅಥವಾ ನಡೆಸಿಕೊಂಡು ಬಂದಲ್ಲಿ, ಅಪರಾಧ ನಿರ್ಣಯವಾದ ತರುವಾಯ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಆದರೆ, ಆರು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯ ಕಾರಾವಾಸದಿಂದ ಹಾಗೂ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಆದರೆ, ಒಂದು ಸಾವಿರ ರೂಪಾಯಿಗೆ ಕಡಿಮೆಯಲ್ಲದ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**124. ನೋಂದಣಿಯಾಗದ ಟ್ಯುಟೋರಿಯಲ್ ಸಂಸ್ಥೆಗಳನ್ನು ನಿರ್ವಹಿಸಿದ್ದಕ್ಕಾಗಿ ಅಥವಾ ನಡೆಸಿದ್ದಕಾಗಿ ದಂಡನೆ.–** (1) ಯಾವನೇ ವ್ಯಕ್ತಿಯು, 35ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡವನ್ನು ಉಲ್ಲಂಘಿಸಿ ಟ್ಯುಟೋರಿಯಲ್ ಸಂಸ್ಥೆಯನ್ನು ನಿರ್ವಹಿಸಿಕೊಂಡು ಬಂದಲ್ಲಿ ಅಥವಾ ನಡೆಸಿಕೊಂಡು ಬಂದಲ್ಲಿ, ಅಥವಾ ಸದರಿ ಪ್ರಕರಣದ (2)ನೇ ಉಪಪ್ರಕಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಪಡೆಯದೆಯೇ ಟ್ಯುಟೋರಿಯಲ್ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ ಮತ್ತು ನಿರ್ವಹಿಸಿಕೊಂಡು ಬಂದಲ್ಲಿ ಅಥವಾ ಆ ಉಪಪ್ರಕರಣದ ಮೇರೆಗೆ ಅವನಿಗೆ ಕೊಟ್ಟಿರುವ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ ತರುವಾಯವೂ ಅಂಥ ಸಂಸ್ಥೆಯನ್ನು ನಡೆಸಿಕೊಂಡು ಬರುವುದನ್ನು ಮುಂದುವರಿಸಿದಲ್ಲಿ, ಅಪರಾಧ ನಿರ್ಣಯವಾದ ನಂತರ, ಅವನು ಎರಡು ನೂರಾಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕುದು:

ಪರಂತು, ಈ ಪ್ರಕರಣದ ಮೇರೆಗೆ ಎರಡನೇ ಅಥವಾ ತರುವಾಯದ ಯಾವುದೇ ಅಪರಾಧ ನಿರ್ಣಯಕ್ಕಾಗಿ, ಅವನು ಮೂರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದು ನೂರು

ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**125. 51ನೇ ಪ್ರಕರಣವನ್ನು ಉಲ್ಲಂಘಿಸಿ ಹಣ ಸಂಗ್ರಹಿಸುವುದಕ್ಕಾಗಿ ದಂಡನೆ.–** 51ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಶಿಕ್ಷಣ ಸಂಸ್ಥೆಯು, ಹಣ ಸಂಗ್ರಹಿಸುತ್ತಿರುವುದಾಗಿ ಕಂಡುಬಂದಲ್ಲಿ, ಅಂಥ ಸಂಗ್ರಹಣೆಯ ಕಾಲದಲ್ಲಿ ಸಂಸ್ಥೆಯ ಆಡಳಿತ ಪ್ರಭಾರವನ್ನು ಹೊಂದಿದ್ದ ಮತ್ತು ಆ ಬಗ್ಗೆ ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಅನಂತರ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕುದು, ಮತ್ತು ಅಪರಾಧ ನಿರ್ಣಯವಾದ ನಂತರ ಯಾರಿಂದ ಹಣ ಸಂಗ್ರಹಿಸಿತ್ತೋ ಅಂಥ ವ್ಯಕ್ತಿಗೆ ಹಾಗೆ ಸಂಗ್ರಹಿಸಿದ ಹಣವನ್ನು ಸಂಸ್ಥೆಯು ಮರು ಸಂದಾಯ ಮಾಡತಕ್ಕುದು.

**126. ಆಡಳಿತ ಪರಿಷತ್ತು ಆಚಾರ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ದಂಡನೆ.–** ಯಾವುದೇ ಆಡಳಿತ ಪರಿಷತ್ತು, 102ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿಯಮಿಸಲಾದ ಯಾವುದೇ ಆಚಾರ ಸಂಹಿತೆಯನ್ನು ಉದ್ದೇಶಪೂರ್ವಕವಾಗಿ ಅಥವಾ ತಿಳಿದೂ ತಿಳಿದೂ ಉಲ್ಲಂಘಿಸಿದಲ್ಲಿ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿತವಾದ ನಿಯಮಗಳ ಮೇರೆಗೆ ಕೈಕೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಬಾಧೆಯುಂಟಾಗದಂತೆ, ಅಪರಾಧ ನಿರ್ಣಯವಾದ ನಂತರ ಅದರ ಪ್ರತಿಯೊಬ್ಬ ಸದಸ್ಯನು ಅಂಥ ಪ್ರತಿಯೊಂದು ಉಲ್ಲಂಘನೆಗಾಗಿ ಐದು ನೂರು ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**127. ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ನೋಟೀಸನ್ನು ಕೊಡಲು ತಪ್ಪಿರುವುದಕ್ಕಾಗಿ ದಂಡನೆ.–** ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು, 105ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾಗಿರುವ ನೋಟೀಸನ್ನು ಕೊಡಲು ತಪ್ಪಿದಲ್ಲಿ ಅದರ ಪ್ರತಿಯೊಬ್ಬ ಸದಸ್ಯನು ಅಪರಾಧ ನಿರ್ಣಯವಾದ ನಂತರ, ಎರಡು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಹಾಗೆ ತಪ್ಪು ಮಾಡಿದ ಪ್ರತಿ ದಿನಕ್ಕೆ ಐವತ್ತು ರೂಪಾಯಿ ಜುಲ್ಮಾನೆಯಿಂದಲೂ ದಂಡಿತನಾಗತಕ್ಕುದು.

**128. ಅಪರಾಧದ ಬಗ್ಗೆ ಉಪಬಂಧಿಸಿರದ ಜುಲ್ಮಾನೆಗಳು.–** ಈ ಅಧಿನಿಯಮದಲ್ಲಿ ಒಳಗೊಂಡಿರುವ ಮುಂಚಿನ ಉಪಬಂಧಗಳ ಮೇರೆಗೆ ದಂಡನೀಯವಾದುವುಗಳನ್ನು ಹೊರತುಪಡಿಸಿ ಯಾವನೇ ವ್ಯಕ್ತಿಯು ಯಾವುದೇ ಇತರ ನಿಯಮಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಯತ್ನಿಸುವ ಅಥವಾ ಉಲಂಘಿಸಲು ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ನಂತರ ಅಂಥ ಪ್ರತಿಯೊಂದು ಉಲ್ಲಂಘನೆಗಾಗಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಈ ಅಧಿನಿಯಮ ಅಥವಾ ನಿಯಮಗಳನ್ನು ಉಲ್ಲಂಘಿಸುವ ಅವಧಿಯಲ್ಲಿ ಅಪರಾಧವು ಮುಂದುವರೆದಿರುವ ಅವಧಿಯಲ್ಲಿ ಒಂದು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯನ್ನು ವಿಧಿಸತಕ್ಕುದು.

**129. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಯಾವುದೇ ಉಪಬಂಧಗಳ ವಿರುದ್ಧ ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಆಡಳಿತದ ಪ್ರಭಾರವನ್ನು ಹೊಂದಿದ್ದ, ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ಅವರು ತಮ್ಮ

ವಿರುದ್ಧ ಕೈಕೊಳ್ಳಲಾಗುವ ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು:

ಪರಂತು, ಈ ಉಪಪ್ರಕಣದಲ್ಲಿರುವುದು ಯಾವುದೂ, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆ ವಹಿಸಿದ್ದನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ಅಂಥ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಆ ಕಂಪನಿಯ ಯಾವನೇ ನಿರ್ದೇಶಕನ ಅಥವಾ ವ್ಯವಸ್ಥಾಪನ ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದರೆ ಅಥವಾ ಆ ಅಪರಾಧವು ಅವರ ಯಾವುದೇ ನಿರ್ಲಕ್ಷ್ಯತೆಯಿಂದ ಆಗಿದೆಯೆಂದು ಆರೋಪಿಸಬಹುದಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ಅದಕ್ಕನುಸಾರವಾಗಿ ಅವನ ವಿರುದ್ಧ ಕೈಕೊಳ್ಳಲಾಗುವ ವ್ಯವಹರಣೆಗಳಿಗೆ ಗುರಿಯಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಕಂಪನಿ ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ನ್ಯಾಸ, ಫರ್ಮು, ಸಂಘ ಅಥವಾ ವ್ಯಕ್ತಿಗಳ ಇತರ ಸಂಸ್ಥೆ – ಇವುಗಳನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ,–

(i) ಆ ಫರ್ಮಿನ ಪಾಲುದಾರ;

(ii) ಸಂಘ, ನ್ಯಾಸ ಅಥವಾ ವ್ಯಕ್ತಿಗಳ ಇತರ ಸಂಸ್ಥೆಗಳ ಸಂಬಂಧದಲ್ಲಿ ನಿರ್ದೇಶಕ ಎಂದರೆ, ಸಂಘದ, ನ್ಯಾಸದ ಅಥವಾ ಇತರ ಸಂಸ್ಥೆಯ ನಿಯಮಗಳ ಮೇರೆಗೆ, ಸಂಘದ, ನ್ಯಾಸದ ಅಥವಾ ಸಂದರ್ಭಾನುಸಾರ ಇತರ ಸಂಸ್ಥೆಯ ಆಡಳಿತ ನಿರ್ವಹಣೆಯ ಕಾರ್ಯವನ್ನು ವಹಿಸಿ ಕೊಡಲಾಗಿರುವ ವ್ಯಕ್ತಿ.

## ಅಧ್ಯಾಯ – XVIII

### ಸಂಕೀರ್ಣ

**130. ಅಪೀಲುಗಳು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಮೇರೆಗೆ ಯಾವನೇ ಅಧಿಕಾರಿಯು ಅಥವಾ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಥವಾ ಯಾವುದೇ ಆಡಳಿತ ಪರಿಷತ್ತು ತೊಂದರೆಗೊಳಗಾದರೆ, ನಿಯಮಿಸಲಾದ ಅವಧಿಯೊಳಗಾಗಿ ನಿಯಮಿಸಲಾದ ಅಪೀಲು ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

**131. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ.–** (1) ಯಾವ ವ್ಯವಹರಣೆಯಲ್ಲಿ ಮಧ್ಯಸ್ಥಗಾರನಿಗೆ ಒಪ್ಪಿಸಲು ಅಥವಾ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಲು ಉಪಬಂಧಿಸಿರುವುದಿಲ್ಲವೋ ಅಂಥ ವ್ಯವಹರಣೆಗೆ ಸಂಬಂಧಪಟ್ಟಂತೆ ಯಾವುದೇ ಆಡಳಿತಾತ್ಮಕ ಅಥವಾ ನ್ಯಾಯಿಕ ಸ್ವರೂಪದ ತೀರ್ಮಾನದ ಅಥವಾ ಆದೇಶದ ಕ್ರಮಬದ್ಧತೆ, ಸರಿತನ, ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಮನವರಿಕೆ ಮಾಡಿಕೊಳ್ಳಲು ರಾಜ್ಯ ಸರ್ಕಾರವು ತಾನಾಗಿಯೇ ಆಗಲಿ ಅಥವಾ ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲಾಗಲಿ ಅಂಥ ತೀರ್ಮಾನ ಅಥವಾ ಆದೇಶಕ್ಕೆ ಸಂಬಂಧ ಪಟ್ಟಂಥ ಶೈಕ್ಷಣಿಕ ಸಂಸ್ಥೆಯ ಅಥವಾ ಯಾವುದೇ ಪ್ರಾಧಿಕಾರದ ಅಧಿಕಾರಿಯ ಅಥವಾ ವ್ಯಕ್ತಿಯ ದಾಖಲೆಯನ್ನು

ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಅಂಥ ತೀರ್ಮಾನವನ್ನು ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕೆಂದು, ರದ್ದುಗೊಳಿಸಬೇಕೆಂದು ಅಥವಾ ವಿಪರ್ಯಯಗೊಳಿಸಬೇಕೆಂದು, ಮರುಪರಿಶೀಲನೆಗಾಗಿ ಕಳಿಸಿಕೊಡಬೇಕೆಂದು ಸರ್ಕಾರಕ್ಕೆ ಕಂಡುಬರುವ ಯಾವುದೇ ಸಂದರ್ಭದಲ್ಲಿ, ಅದು ತದನುಸಾರವಾಗಿ ಆದೇಶವನ್ನು ಹೊರಡಿಸಬಹುದು:

ಪರಂತು, ರಾಜ್ಯ ಸರ್ಕಾರವು, ಯಾರೇ ಪಕ್ಷಕಾರರನ್ನು ಪ್ರತಿಕೂಲವಾಗಿ ಬಾಧಿಸುವಂಥ ಯಾವುದೇ ಆದೇಶವನ್ನು, ಆ ಪಕ್ಷಕಾರನಿಗೆ ತನ್ನ ಅಹವಾಲನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ಹೊರತು ಹೊರಡಿಸತಕ್ಕುದಲ್ಲ.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಅಂಥ ಯಾವುದೇ ತೀರ್ಮಾನ ಅಥವಾ ಆದೇಶದ ಬಗ್ಗೆ ಅಧಿಕಾರಗಳನ್ನು ಚಲಾಯಿಸುವವರೆಗೆ, ಯಾವುದೇ ಅಂಥ ತೀರ್ಮಾನದ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಬೇಕಾದ ಪ್ರತಿಯೊಂದು ಅರ್ಜಿಯನ್ನು ನಿಯಮಿಸ-ಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ಫೀಜಿನೊಂದಿಗೆ ಸಲ್ಲಿಸತಕ್ಕುದು.

**132. ಪುನರಾವಲೋಕನ.–** (1) ರಾಜ್ಯ ಸರ್ಕಾರವು ಅಥವಾ ಸಂದರ್ಭಾನುಸಾರ ಸಾರ್ವಜನಿಕ ಶಿಕ್ಷಣ ಕಮೀಷನರನು ಅಥವಾ ನಿರ್ದೇಶಕನು ಯಾವುದೇ ಸಮಯದಲ್ಲಿ ತಾವಾಗಿಯೇ ಅಥವಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಆದೇಶವನ್ನು ಹೊರಡಿಸಿದ ತೊಂಭತ್ತು ದಿನಗಳ ಒಳಗಾಗಿ ಹಿತಾಸಕ್ತ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ಒಂದು ವೇಳೆ ಆ ಯಾವುದೇ ಆದೇಶವನ್ನು ಯಾವುದೇ ಸಂಗತಿಯ ಅಥವಾ ಕಾನೂನಿನ ತಪ್ಪಿನಿಂದಾಗಿ ಅಥವಾ ಯಾವುದೇ ವಸ್ತು ಸಂಗತಿಯ ಅರಿವಿಲ್ಲದೆಯೇ ಅವರು ಅಥವಾ ಆತ ಹೊರಡಿಸಿದ್ದರೆ, ಆ ಯಾವುದೇ ಆದೇಶವನ್ನು ಪುನರಾವಲೋಕನಮಾಡಬಹುದು.

(2) 131ನೇ ಪ್ರಕರಣದ (1), (2), (3)ನೇ ಉಪಪ್ರಕರಣಗಳ ಪರಂತುಕದಲ್ಲಿರುವ ಉಪಬಂಧಗಳನ್ನು ಆದಷ್ಟು ಮಟ್ಟಿಗೆ, ಆ ಪ್ರಕರಣದ (1)ನೇ ಉಪಪ್ರಕರಣದ ವ್ಯವಹರಣೆಗಳಿಗೆ ಅವು ಅನ್ವಯವಾಗುವಂತೆಯೇ ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆಯೂ ಅನ್ವಯಿಸಬಹುದು.

**133. ನಿರ್ದೇಶನಗಳನ್ನು ಕೊಡಲು ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ಆದೇಶದ ಮೂಲಕ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮೀಷನರನಿಗೆ ಅಥವಾ ನಿರ್ದೇಶಕನಿಗೆ ಅಥವಾ ಜಿಲ್ಲಾ ಶಿಕ್ಷಣಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಇತರ ಯಾರೇ ಅಧಿಕಾರಿಗೆ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣೆ ಮಾಡಲು ಅಥವಾ ಈ ಅಧಿನಿಯಮದ ಮೇರೆಗೆ ಸೂಕ್ತ ವ್ಯವಹರಣೆಗಳನ್ನು ಕೈಗೊಳ್ಳಲು ನಿರ್ದೇಶಿಸಬಹುದು ಮತ್ತು ಸಂದರ್ಭಾನುಸಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮೀಷನರನು, ನಿರ್ದೇಶಕನು ಅಥವಾ ಇತರ ಅಧಿಕಾರಿಯು ತಾನು ಮಾಡಿದ ವಿಚಾರಣೆಯ ಅಥವಾ ಕೈಕೊಂಡ ವ್ಯವಹರಣೆಯ ಫಲಿತಾಂಶವನ್ನು ಯಥಾ ಕ್ರಮದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕುದು.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳನ್ನು ಅಥವಾ ಆದೇಶಗಳನ್ನು ಅಥವಾ ಅವುಗಳ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವೆಂದು ಅಥವಾ ಯುಕ್ತವೆಂದು ತಾನು ಅಭಿಪ್ರಾಯಪಡುವಂಥ ನಿರ್ದೇಶನಗಳನ್ನು ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಟ್ಯುಟೋರಿಯಲ್

ಸಂಸ್ಥೆಗೆ ನೀಡಬಹುದು ಮತ್ತು ಅಂಥ ಶಿಕ್ಷಣ ಸಂಸ್ಥೆಯ ಆಡಳಿತ ವರ್ಗವು ಅಥವಾ ಸಂದರ್ಭಾನುಸಾರ ಒಡೆಯನು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ತನ್ನ ನಿಯಂತ್ರಣದಲ್ಲಿರುವ ಅಧಿಕಾರಿಗಳಿಗೆ ಅಥವಾ ಪ್ರಾಧಿಕಾರಿಗಳಿಗೆ ತಾನು ಅವಶ್ಯಕವೆಂದು ಅಥವಾ ಯುಕ್ತವೆಂದು ಅಭಿಪ್ರಾಯಪಡುವಂತಹ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳ್ನು ಪಾಲಿಸುವುದು ಅಂಥ ಅಧಿಕಾರಿಗಳ ಅಥವಾ ಪ್ರಾಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.

**134. ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರ.–** ನಿಯಮಿಸಬಹುದಾದಂಥ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಪ್ರತಿಯೊಬ್ಬ ಅಧಿಕಾರಿಯೂ, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಶಿಕ್ಷಣ ಸಂಸ್ಥೆಯ ಅಥವಾ ಟ್ಯುಟೋರಿಯಲ್ ಸಂಸ್ಥೆಯ ವಾಡಿಕೆಯ ಕೆಲಸದ ವೇಳೆಯ ಅವಧಿಯ ಯಾವುದೇ ಸಮಯದಲ್ಲಿ ತನ್ನ ಅಧಿಕಾರ ವ್ಯಾಪ್ತಿಯೊಳಗಿರುವ ಯಾವುದೇ ಅಂಥ ಸಂಸ್ಥೆಯ ಯಾವುದೇ ಆವರಣಗಳನ್ನು ಪ್ರವೇಶಿಸಲು ಮತ್ತು ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಅಂಥ ಸಂಸ್ಥೆಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜುಗಳನ್ನು ಅಥವಾ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಪರಿಶೀಲಿಸಲು ಸಕ್ಷಮವಾಗಿರತಕ್ಕದ್ದು.

(2) ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು, ಅಧಿನಿಯಮದ ಯಾವುವೇ ಉಪಬಂಧಗಳ ಉಲ್ಲಂಘನೆಯಾಗುತ್ತಿದೆ ಎಂದು ಅಥವಾ ಉಲ್ಲಂಘನೆಯಾಗಿದೆ ಎಂದು ಅವನಿಗೆ ನಂಬಲು ಕಾರಣವಿದ್ದರೆ, ಶಿಕ್ಷಣ ಸಂಸ್ಥೆಯ ವಾಡಿಕೆ ಕೆಲಸದ ವೇಳೆಯ ಯಾವುದೇ ಸಮಯದಲ್ಲಿ ಅಂಥ ಸಂಸ್ಥೆಗೆ ಅಥವಾ ಆ ಸಂಸ್ಥೆಯ ಆಡಳಿತ ಮಂಡಳಿಗೆ ಸೇರಿದ ಯಾವುದೇ ಆವರಣವನ್ನು ಪ್ರವೇಶಿಸಬಹುದು ಮತ್ತು ದಾಖಲೆಗಳು, ಲೆಕ್ಕಪತ್ರಗಳು, ರಿಜಿಸ್ಟರುಗಳು ಅಥವಾ ಇತರ ದಾಖಲೆಗಳನ್ನು ಅಂಥ ಸಂಸ್ಥೆಗೆ ಅಥವಾ ಆಡಳಿತ ಮಂಡಳಿಗೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಶೋಧಿಸಬಹುದು ಮತ್ತು ಪರಿಶೀಲಿಸಬಹುದು ಮತ್ತು ಯಾವುದೇ ಅಂಥ ಉಲ್ಲಂಘನೆ ನಡೆಯುತ್ತಿದೆಯೇ ಅಥವಾ ನಡೆದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳವುದಕ್ಕಾಗಿ ಅಂಥ ದಾಖಲೆ, ಲೆಕ್ಕಪತ್ರ ಅಥವಾ ಇತರ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು.

(3) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಶಿಕ್ಷಣ ಸಂಸ್ಥೆಯ ಹಣಕಾಸುಗಳನ್ನು ಅಥವಾ ಸಂಪನ್ಮೂಲಗಳನ್ನು ಅಥವಾ ಆಸ್ತಿಗಳನ್ನು ಸೂಕ್ತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಕೆಯಾಗುವಂತೆ ಖಚಿತಪಡಿಸಿಕೊಳ್ಳುವುದಕ್ಕಾಗಿ, ರಾಜ್ಯ ಸರ್ಕಾರವು, (2)ನೇ ಉಪಪ್ರಕರಣದ ಉಪಬಂಧಗಳ ನೆರವು ಪಡೆಯುವುದು ಮತ್ತು ಯಾವುದೇ ಸಂಸ್ಥೆಯ ಹಣಕಾಸುಗಳು, ಸಂಪನ್ಮೂಲಗಳು ಹಾಗೂ ಆಸ್ತಿಗಳು – ಇವುಗಳ ಬಗ್ಗೆ ಖಚಿತವಾಗಿ ತಿಳಿದುಕೊಳ್ಳುವುದು ಮತ್ತು ಹಾಗೆ ಖಚಿತವಾಗಿ ತಿಳಿದುಕೊಂಡ ತರುವಾಯ, ಆಡಳಿತ ಪರಿಷತ್ತಿಗೆ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನ ನೀಡುವುದು ಸಕ್ಷಮವಾಗಿರತಕ್ಕದ್ದು.

(4) ಶೋಧನೆ ಹಾಗೂ ಜಫ್ತಿಗೆ ಸಂಬಂಧಪಡುವ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರಾಧಿನಿಯಮ 2) ಉಪಬಂಧಗಳು, (2)ನೇ ಉಪಪ್ರಕರಣದ ಮೇರೆಗಿನ ಶೋಧನೆ ಹಾಗೂ ಜಫ್ತಿಗೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**135. ಈ ಅಧಿನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಗೆ ಅಥವಾ ಇನ್ನಿತರ ವ್ಯಕ್ತಿಗೆ ಅಡ್ಡಿಯುಂಟು ಮಾಡಿದ್ದಕ್ಕೆ ದಂಡನೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸರ್ಕಾರದ ಅಧಿಕಾರಿಗೆ ಪ್ರದತ್ತವಾದ ಅಧಿಕಾರವನ್ನು ಆ ಅಧಿಕಾರಿಯು ಚಲಾಯಿಸುವಾಗ ಅಥವಾ ಆ

ಅಧಿಕಾರಿಗೆ ಒಪ್ಪಿಸಿರುವ ಪ್ರಕಾರ್ಯವನ್ನು ಆ ಅಧಿಕಾರಿಯು ನಿರ್ವಹಿಸುವಾಗ ಅಥವಾ ಅಂಥ ಅಧಿಕಾರವನ್ನು ಚಲಾಯಿಸಲು ಅಥವಾ ಅಂಥ ಪ್ರಕಾರ್ಯವನ್ನು ನಿರ್ವಹಿಸಲು ಅಂಥ ಅಧಿಕಾರಿಗೆ ಕಾನೂನು ಸಮ್ಮತವಾಗಿ ನೆರವಾಗುತ್ತಿರುವ ಯಾವನೇ ಇತರ ವ್ಯಕ್ತಿಗೆ ಅಡ್ಡಿಯುಂಟು ಮಾಡುವ ಯಾವನೇ ವ್ಯಕ್ತಿಯು ಅಥವಾ ಆ ಅಧಿಕಾರಿಯು ಅಥವಾ ಆ ವ್ಯಕ್ತಿಯು ಕಾನೂನು ಸಮ್ಮತವಾಗಿ ನೀಡಿದ ನಿರ್ದೇಶನಗಳನ್ನು ಪಾಲಿಸಲು ತಪ್ಪಿದ ಯಾವನೇ ವ್ಯಕ್ತಿಯು ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**136. ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ಯಾವುದೇ ಪ್ರಾಧಿಕಾರದ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ ಅನ್ನು ಅಥವಾ ಇತರ ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕುದಲ್ಲ.

**137. ತನಿಖೆ ಹಾಗೂ ಅಪರಾಧಗಳ ಸಂಜ್ಞಾನ.–** (1) ಯಾವುದೇ ನ್ಯಾಯಾಲಯವು, 115 ರಿಂದ 122 ಈ ಪ್ರಕರಣಗಳ ಮೇರೆಗೆ (ಎರಡೂ ಪ್ರಕರಣಗಳೂ ಸೇರಿ) ಹೊರತು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಅಥವಾ ಅಂಥ ಯಾವುದೇ ಅಪರಾಧದ ದುಷ್ಪ್ರೇರಣೆಯ ಬಗ್ಗೆ ಸಕ್ಷಮ ಪ್ರಾಧಿಕಾರವು ನೀಡಿದ ದೂರಿನ ಮೇಲೆ ಹೊರತು ಅಥವಾ ಆ ಪ್ರಾಧಿಕರಾದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಸಂಜ್ಞಾನವನ್ನು ತೆಗೆದುಕೊಳ್ಳತಕ್ಕುದಲ್ಲ.

(2) 115 ರಿಂದ 122ರ ವರೆಗಿನ (ಎರಡೂ ಸೇರಿ) ಪ್ರಕರಣಗಳ ಮೇರೆಗೆ ದಂಡನೀಯವಾದ ಎಲ್ಲ ಅಪರಾಧಗಳ ಬಗ್ಗೆ,–

(ಎ) ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಯ ಅಥವಾ ಅದಕ್ಕೂ ಹೆಚ್ಚಿನ ದರ್ಜೆಯ ಅಧಿಕಾರಿಯು ತನಿಖೆ ನಡೆಸತಕ್ಕುದು; ಮತ್ತು

(ಬಿ) ಅಂಥ ಅಪರಾಧಗಳು ಸಂಜ್ಞೇಯವಾಗಿರತಕ್ಕುದು ಹಾಗೂ ಜಾಮೀನೀಯ ವಾಗಿರತಕ್ಕುದಲ್ಲ:

ಪರಂತು, ಆಪಾದಿತ ವ್ಯಕ್ತಿಯು ಮಹಿಳೆಯಾಗಿರುವಲ್ಲಿ ತನಿಖೆಯ ಅಥವಾ ಅಧಿವಿಚಾರಣೆಯ ಹಂತದಲ್ಲಿ ತಾನು ಹಾಜರಾಗುವುದಾಗಿ ಅವಳು ವೈಯಕ್ತಿಕ ಮುಚ್ಚಳಿಕೆಯನ್ನು ಬರೆದುಕೊಟ್ಟಾಗ ಅವಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕುದು.

**138. ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ ಮಾಡುವಂತೆ ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಅಂಥ ಅಪರಾಧಕ್ಕಾಗಿ ಉಪಬಂಧಿಸಲಾಗಿರುವ ದಂಡನೆಯಿಂದ ದಂಡಿತನಾಗತಕ್ಕುದು.

**139. ವಿಚಾರಣೆ ಮತ್ತು ವ್ಯವಹರಣೆಗಳು.–** ನ್ಯಾಯಾಧಿಕರಣದ ಮುಂದಿರುವ ಎಲ್ಲ ವ್ಯವಹರಣೆಗಳು ಮತ್ತು ವಿಚಾರಣೆಗಳನ್ನು, ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ ಫಿಐಗಿ) 193, 219 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯಲ್ಲಿನ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕುದು.

**140. ಕರ್ನಾಟಕ ಅಧಿನಿಯಮ 1966ರ ಸಂಖ್ಯೆ 16ರ ತಿದ್ದುಪಡಿ.–** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ಅನುಸೂಚಿ 1ರಲ್ಲಿ ನಿರ್ದಿಷ್ಟಪಡಿಸಿರುವ ಆ ರೀತಿಯಲ್ಲಿ ಮತ್ತು ಅಷ್ಟು ಮಟ್ಟಿಗೆ ಈ ಮೂಲಕ ತಿದ್ದುಪಡಿ ಮಾಡಲಾಗಿದೆ.

**141. ಕೆಲವು ಸಂಸ್ಥೆಗಳಿಗೆ ಈ ಅಧಿನಿಯಮದ ಅನ್ವಯ.–** ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಇರುವುದು ಯಾವುದೂ, ಭಾರತ ಸಂವಿಧಾನದ 30ನೇ ಅನುಚ್ಛೇದದ ಮೇರೆಗೆ ಖಾತ್ರಿ ನೀಡಲಾದ ಹಕ್ಕುಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಯಾವುದೇ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗೆ ಅನ್ವಯವಾಗತಕ್ಕುದಲ್ಲ.

**142. ತೊಂದರೆಗಳ ನಿವಾರಣೆ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶವನ್ನು ಹೊರಡಿಸಿ ಸದರಿ ಉಪಬಂಧಗಳಿಗೆ ಅಸಂಗತವಾಗದಂಥ ಮತ್ತು ಆ ತೊಂದರೆಯ ನಿವಾರಣೆಗೆ ಅಗತ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವಂ1ಥ ಉಪಬಂಧಗಳನ್ನು ರಚಿಸಬಹುದು.

**143. ಪ್ರತ್ಯಾಯೋಜನೆ.–** ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಅಂಥ ಷರತ್ತುಗಳೇನಾದರೂ ಇದ್ದರೆ ಅವುಗಳಿಗೊಳಪಟ್ಟು, ತಾನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೇರೆಗೆ ಚಲಾಯಿಸಬಹುದಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಅಧಿಕಾರಿಯು ಅಥವಾ ಪ್ರಾಧಿಕಾರವೂ ಕೂಡ ಚಲಾಯಿಸಬಹುದಾದಂತೆ ಪ್ರತ್ಯಾಯೋಜಿಸಬಹುದು.

**144. ಇತ್ಯರ್ಥದಲ್ಲಿರುವ ವ್ಯವಹರಣೆಗಳ ವರ್ಗಾವಣೆ.–** ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತುಪಾಲನೆ ಮತ್ತು ನಿಯಂತ್ರಣ) ಅಧಿನಿಯಮ, 1975ರ (1975ರ ಕರ್ನಾಟಕ ಅಧಿನಿಯಮದ 10) ಮೇರೆಗೆ ರಚಿತವಾದ ಶೈಕ್ಷಣಿಕ ಅಪೀಲು ನ್ಯಾಯಾಧಿಕರಣದ ಮುಂದೆ ಈ ಅಧಿನಿಯಮ ಪ್ರಾರಂಭದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳು ಮತ್ತು ಎಲ್ಲ ವ್ಯವಹರಣೆಗಳು ಈ ಅಧಿನಿಯಮದ ಮೇರೆಗೆ ರಚಿತವಾದ ಶೈಕ್ಷಣಿಕ ನ್ಯಾಯಾಧಿಕರಣಕ್ಕೆ ವರ್ಗಾಯಿತವಾಗಿರತಕ್ಕುದು ಮತ್ತು ಅವು ಸದರಿ ಅಧಿನಿಯಮವು ಈ ಅಧಿನಿಯಮದ ಮೇರೆಗೆ ನಿರಸಿತವಾಗದಿದ್ದರೆ ಹೇಗೋ ಹಾಗೆ ಅವುಗಳನ್ನು ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತುಪಾಲನೆ ಮತ್ತು ನಿಯಂತ್ರಣ) ಅಧಿನಿಯಮ,1975 (1975ರ ಕರ್ನಾಟಕ ಅಧಿನಿಯಮ 10)ರ ಉಪಬಂಧಗಳಿಗನುಸಾರವಾಗಿ, ಅಂಥ ನ್ಯಾಯಾಧಿಕರಣದಿಂದ ಇತ್ಯರ್ಥವಾಗತಕ್ಕುದು.

**145. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಅಥವಾ ಪೂರ್ವಭಾವಿ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡವುಗಳ ಬಗ್ಗೆ ಉಪಬಂಧಿಸಬಹುದು:–

(i) ಎಷ್ಟರವರೆಗಿನ ಶಿಕ್ಷಣ ತರಗತಿಗಳು ಅಥವಾ ಇಯತ್ತೆಗಳನ್ನು ಪ್ರಾಥಮಿಕ ಶಿಕ್ಷಣವೆಂದು ಪರಿಗಣಿಸತಕ್ಕುದು;

(ii) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾಗಿರುವ ಪಾಠಕ್ರಮಗಳು, ಇತ್ಯಾದಿ;

(iii) ಜಾಗೃತಾ ವಿಭಾಗಗಳ ಕರ್ತವ್ಯಗಳು ಮತ್ತು ಪ್ರಕಾರ್ಯಗಳು;

(iv) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಜೂರಾದ ಹುದ್ದೆಗಳಿಗೆ ನೇಮಕಾತಿ ಮಾಡುವ ಪ್ರಾಧಿಕಾರಗಳು ಮತ್ತು ವಿಧಾನ ಹಾಗೂ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(v) 10ನೇ ಪ್ರಕರಣದ ಮೇರೆಗೆ ರಚಿತವಾದ ಮಂಡಳಿಗಳ ರಚನೆ ಮತ್ತು ಅಧಿಕಾರಗಳು;

(vi) ನಿರ್ದಿಷ್ಟ ಪ್ರದೇಶವೆಂದು ಯಾವುದೇ ಪ್ರದೇಶವನ್ನು ಅಧಿಸೂಚಿಸುವುದಕ್ಕೆ ಮುಂಚೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸಲು ಕೈಗೊಳ್ಳಬೇಕಾದ ಕ್ರಮಗಳು;

(vii) ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಹಾಜರಾತಿ ಪ್ರಾಧಿಕಾರವು ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕಾದ ರೀತಿ;

(viii) ಒಂದು ಮಗುವನ್ನು ಎಷ್ಟು ದೂರದಿಂದ ಆಚೆಗೆ ಇರುವ ಅನುಮೋದಿತ ಶಾಲೆಗೆ ಹಾಜರಾಗತಕ್ಕುದೆಂದು ಒತ್ತಾಯಿಸಲು ಸಾಧ್ಯವಿಲ್ಲವೋ ಆ ದೂರವನ್ನು ನಿಗದಿಪಡಿಸುವುದು;

(ix) ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆ ನಡೆಸಬೇಕಾದ ರೀತಿ;

(x) ಈ ಅಧಿನಿಯಮದ ಮೇರೆಗೆ ಹಾಜರಾತಿ ಆದೇಶವನ್ನು ಹೊರಡಿಸಬೇಕಾದ ನಮೂನೆ;

(xi) ಈ ಅಧಿನಿಯಮದ ಉದ್ದೇಶಕ್ಕಾಗಿ ಅನುಮೋದಿತ ಶಾಲೆಗಳು ಇಡಬೇಕಾದ ಅಥವಾ ಒದಗಿಸಬೇಕಾದ ರಿಜಿಸ್ಟರುಗಳು, ವಿವರಣೆಗಳು, ವರದಿಗಳು, ವಿವರಣಪಟ್ಟಿಕೆಗಳು, ಆಯವ್ಯಯ ಪತ್ರಗಳು ಮತ್ತು ಇತರ ಮಾಹಿತಿ;

(xii) ಪ್ರೌಢ ಇಲ್ಲವೆ ಉನ್ನತ ಪ್ರೌಢ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಿಶೇಷ ಶಿಕ್ಷಣ ಇವುಗಳನ್ನು ಮತ್ತು ಶಾಲೆಗಳು ಅಥವಾ ಇತರ ವಿದ್ಯಾ ಸಂಸ್ಥೆಗಳಲ್ಲಿ ಶಾಲಾ ಆವರಣ ಇವುಗಳನ್ನು, ಶಾಲೆಗೆ ಹೋಗುವ ಮಕ್ಕಳ ವಯೋಮಾನ ಮತ್ತು ಶಾಲೆಗಳಲ್ಲಿನ ಹಾಜರಾತಿ ಬಗ್ಗೆ ವಿವರಿಸುವ ಘೋಷಣೆ;

(xiii) ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಅಥವಾ ನಿರ್ವಹಣೆ ಮತ್ತು ಆಡಳಿತ;

(xiv) ಶಿಕ್ಷಣ ಸಂಸ್ಥೆಗಳಿಗೆ ನೋಂದಣಿ ಅಥವಾ ಮನ್ನಣೆ ನೀಡುವುದು ಮತ್ತು ಅದಕ್ಕೆ ಸಂಬಂಧಿಸಿದ ಷರತ್ತುಗಳು;

(xv) ಸಂಸ್ಥೆಗಳ ನೋಂದಣಿಗಾಗಿ ಅರ್ಜಿ ಹಾಕಿಕೊಳ್ಳಲು ಅವಧಿ ಮತ್ತು ರೀತಿ;

(xvi) ಶಿಕ್ಷಣ ಸಂಸ್ಥೆಗಳ ಮತ್ತು ಟ್ಯುಟೋರಿಯಲ್‌ಗಳ ನೋಂದಣಿ ಬಗ್ಗೆ ಇಡಬೇಕಾದ ರಿಜಿಸ್ಟರಿನ ಮತ್ತು ನೋಂದಣಿ ಪ್ರಮಾಣ ಪತ್ರದ ನಮೂನೆ;

(xvii) ತಜ್ಞ ಮಂಡಲಿಯ ವರದಿಯನ್ನು ಸಲ್ಲಿಸುವ ರೀತಿ;

(xviii) ಹಾಲಿ ಸಂಸ್ಥೆಗಳಿಗೆ ಮನ್ನಣೆ ನೀಡುವ ಬಗ್ಗೆ ಷರತ್ತುಗಳು ಮತ್ತು ಆ ಸಂಬಂಧವಾದ ಕಾರ್ಯ ವಿಧಾನ;

(xix) ಶಿಕ್ಷಣ ಸಂಸ್ಥೆಗಳಲ್ಲಿ ಫೀಜಿನ ದರವನ್ನು ಮತ್ತು ಫೀಜನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು – ಇವುಗಳನ್ನು ನಿಯಂತ್ರಿಸುವುದು;

(xx) ಶಿಕ್ಷಣ ಸಂಸ್ಥೆಗಳಲ್ಲಿನ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ಇಡಬೇಕಾದ ರೀತಿ ಮತ್ತು ಹಾಗೆ ಇಡಲು ಜವಾಬ್ದಾರವಾಗಿರುವ ಪ್ರಾಧಿಕಾರ;

(xxi) ಶಿಕ್ಷಣ ಸಂಸ್ಥೆಗಳ ಅಥವಾ ಟ್ಯುಟೋರಿಯಲ್ ಸಂಸ್ಥೆಗಳ ಸ್ವತ್ತುಗಳ ಬಗ್ಗೆ ಸಂಬಂಧಪಟ್ಟ ವ್ಯವಸ್ಥಾಪಕರು ಅಥವಾ ಒಡೆಯರು ವಿವರಪಟ್ಟಿಕೆ, ವಿವರಣೆಗಳು ಮತ್ತು ಲೆಕ್ಕಪತ್ರಗಳನ್ನು ಒಪ್ಪಿಸುವುದು;

(xxii) ಶಿಕ್ಷಣ ಸಂಸ್ಥೆಗಳ ಮತ್ತು ಟ್ಯುಟೋರಿಯಲ್ ಸಂಸ್ಥೆಗಳ ಪರಿಶೀಲನೆ ಮತ್ತು ಪರಿಶೀಲನೆ ಮಾಡತಕ್ಕ ಅಧಿಕಾರಿಗಳು;

(xxiii) ಅಂಥ ಸಂಸ್ಥೆಗಳ ಲೆಕ್ಕಪತ್ರಗಳನ್ನು ಇಡುವ ಮತ್ತು ಲೆಕ್ಕಪರಿಶೋಧನೆಯ ವಿಧಾನ;

(xxiv) ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ವ್ಯಾಸಂಗ ಕ್ರಮ;

(xxv) ಶಿಷ್ಯ ವೇತನ, ಫೀ ರಿಯಾಯಿತಿಗಳು ಮತ್ತು ಅಂಥವೇ ರಿಯಾಯಿತಿಗಳನ್ನು ಒದಗಿಸಲು ಶೈಕ್ಷಣಿಕ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಮೊಬಲಗನ್ನು ಮಂಜೂರು ಮಾಡುವುದು;

(xxvi) ಸಾಮಾನ್ಯವಾಗಿ ಶಿಕ್ಷಣ ಸಂಸ್ಥೆಗಳಿಗಾಗಿ ಮತ್ತು ವಿಶೇಷವಾಗಿ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗಾಗಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಒಪ್ಪಿಸುವುದು ಹಾಗೂ ಅಂಥ ಯೋಜನೆಗಳ ಒಳಾಂಶಗಳು;

(xxvii) ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಇತರ ಅಧೀನ ಸಿಬ್ಬಂದಿ ವರ್ಗದ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xxviii) ಶಿಕ್ಷಣ ಸಂಸ್ಥೆಗಳ ಕಟ್ಟಡ ನಕ್ಷೆಗಳ ಮತ್ತು ಅಂದಾಜುಗಳ ತಯಾರಿಕೆ ಹಾಗೂ ಮಂಜೂರಾತಿ ಮತ್ತು ಸ್ಥಳೀಯ ಪ್ರಾಧಿಕಾರಗಳು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳ ಕಟ್ಟಡಗಳ ಸಂಬಂಧದಲ್ಲಿ ಪಾಲಿಸತಕ್ಕ ಅವಶ್ಯಕತೆಗಳು;

(xxix) ಶಿಕ್ಷಣ ಸಂಸ್ಥೆಗಳು ಕಟ್ಟಡಗಳ ಆವರಣಗಳನ್ನು ಯಾವ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು ಮತ್ತು ಅಂಥ ಆ ಕಟ್ಟಡಗಳನ್ನು ಇತರ ಯಾವುವೇ ಉದ್ದೇಶಗಳಿಗಾಗಿ ಯಾವ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ಉಪಯೋಗಿಸಿಕೊಳ್ಳಬಹುದು;

(xxx) ಶಿಕ್ಷಣ ಸಂಸ್ಥೆಗಳ ಪಠ್ಯ ಪುಸ್ತಕಗಳು, ನಕಾಶೆಗಳು, ನಕ್ಷೆಗಳು, ಉಪಕರಣಗಳು ಮತ್ತು ಇತರ ಪ್ರಯೋಗಾಲಯದ ಮತ್ತು ಕ್ರೀಡಾ ಸಾಧನ ಸಲಕರಣೆಗಳ ಬಳಕೆಯನ್ನು ನಿಯಂತ್ರಿಸುವುದು;

(xxxi) ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವ್ಯಾಸಂಗ ಕ್ರಮಗಳಿಗಾಗಿ ಖಾಸಗಿ ಅಧ್ಯಯನಕ್ಕಾಗಿ ಮತ್ತು ಇತರ ವಿಶೇಷ ವ್ಯಾಸಂಗ ಕ್ರಮಗಳಿಗಾಗಿ ಪ್ರವೇಶ ನೀಡುವುದನ್ನು ಮತ್ತು ಅವುಗಳಲ್ಲಿ ಹಾಜರಾತಿ ಬಗ್ಗೆ ನಿಯಂತ್ರಿಸುವುದು;

(xxxii) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರಗಳು ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಇರುವ ಅಗತ್ಯ ಅರ್ಹತೆಗಳು ಮತ್ತು ಪಾಲಿಸತಕ್ಕ ಇತರ ಷರತ್ತುಗಳು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮತ್ತು ಪುನರ್ ಮೌಲ್ಯಮಾಪನ ಮಾಡುವ ಪದ್ಧತಿ;

(xxxiii) ವಿಶೇಷ ರಾತ್ರಿ ಶಾಲೆಗಳನ್ನು ಪ್ರಾರಂಭಿಸುವುದು ಮತ್ತು ಅವುಗಳ ಕಾರ್ಯನಿರ್ವಹಣೆಗಾಗಿ ಷರತ್ತುಗಳು ಮತ್ತು ಸಂಸ್ಥೆಗಳಲ್ಲಿ ಭಾಷಾ ಅಲ್ಪ ಸಂಖ್ಯಾತರಿಗಾಗಿ ಅದೇ ರೀತಿಯ ವಿಭಾಗಗಳನ್ನು ಇಲ್ಲವೇ ತರಗತಿಗಳನ್ನು ಪ್ರಾರಂಭಿಸುವುದು;

(xxxiv) ತರಗತಿಗಳನ್ನು ಮತ್ತು ನಿಯತಕಾಲಗಳಲ್ಲಿ ಪರೀಕ್ಷೆಗಳನ್ನು ನಡೆಸುವ ಮತ್ತು ವಿದ್ಯಾರ್ಥಿಗಳನ್ನು ಮೇಲಿನ ತರಗತಿಗಳಿಗೆ ಬಡತಿ ನೀಡುವ ವಿಧಾನ;

(xxxv) ಯಾವ ಷರತ್ತುಗಳಿಂದ ಶಿಕ್ಷಣ ಸಂಸ್ಥೆಗಳು ಸಾರ್ವಜನಿಕರಿಂದ ದಾನವನ್ನು ಅಥವಾ ವಂತಿಗೆಗಳನ್ನು ಸ್ವೀಕರಿಸಬಹುದು ಮತ್ತು ಸಂಸ್ಥೆಗಳಿಗೆ ಹೆಸರಿಡುವುದು;

(xxxvi) ಶಿಕ್ಷಣ ಸಂಸ್ಥೆಗಳಲ್ಲಿ ಸಹ ಶಿಕ್ಷಣ ನಡೆಸುವ ಬಗ್ಗೆ ಷರತ್ತುಗಳು ಹಾಗೂ ವಿದ್ಯಾರ್ಥಿಗಳಲ್ಲಿ ನಡವಳಿಕೆ ಮತ್ತು ಶಿಸ್ತುಪಾಲನೆಯನ್ನು ನಿಯಂತ್ರಿಸುವುದು ಹಾಗೂ ದುರ್ನಡತೆಗಾಗಿ ಅಥವಾ ಅಶಿಸ್ತಿಗಾಗಿ ದಂಡನೆ;

(xxxvii) ನೋಟೀಸುಗಳನ್ನು, ಆದೇಶಗಳನ್ನು ಮತ್ತು ಇತರ ವ್ಯವಹರಣೆಗಳನ್ನು ಜಾರಿಗೊಳಿಸುವ ರೀತಿ, ಪುನರವಲೋಕನ ಅಥವಾ ಪುನರಿಕ್ಷಣೆಗಾಗಿ ಅಪೀಲುಗಳನ್ನು ಅಥವಾ ಅರ್ಜಿಗಳನ್ನು ಸಲ್ಲಿಸುವುದು ಮತ್ತು ಅವುಗಳನ್ನು ವ್ಯವಹರಿಸುವ ಕಾರ್ಯ ವಿಧಾನ ಮತ್ತು ಆ ಸಂಬಂಧವಾದ ಫೀಜು;

(xxxviii) ಯಾವ ಪ್ರಮಾಣಪತ್ರದ, ಅನುಮತಿಯ, ಅಂಕಪಟ್ಟಿಯ ಅಥವಾ ಇತರ ದಸ್ತಾವೇಜಿನ ಸಂಬಂಧದಲ್ಲಿ ಫೀಜುಗಳನ್ನು ಅಥವಾ ಚಾರ್ಜುಗಳನ್ನು ವಸೂಲು ಮಾಡಬಹುದೋ ಅವುಗಳ ಬಗ್ಗೆ ಸಂದಾಯವಾಗತಕ್ಕ ಫೀಜುಗಳ ಮತ್ತು ಚಾರ್ಜುಗಳ ಶ್ರೇಣಿ ಮತ್ತು ಅವುಗಳನ್ನು ನಿಗದಿಪಡಿಸುವ ರೀತಿ;

(xxxix) ವಿದ್ಯಾರ್ಥಿ ಸಂಘಗಳಿಗೆ ಅಥವಾ ಒಕ್ಕೂಟಗಳಿಗೆ ಚುನಾವಣೆಗಳು;

(xi) ಈ ಅಧಿನಿಯಮದ ಮೂಲಕ ಗೊತ್ತುಪಡಿಸಬೇಕೆಂದು ಸ್ಪಷ್ಟವಾಗಿ ಅಗತ್ಯಪಡಿಸಲಾದ ಅಥವಾ ಅನುಮತಿಸಬಹುದಾದ ಅಥವಾ ಯಾವುದಕ್ಕೆ ಈ ಅಧಿನಿಯಮವು ಯಾವುದೇ ಉಪಬಂಧ ರಚಿಸದಿರುವುದಕ್ಕೆ ಅಥವಾ ಸಾಕಷ್ಟು ಅಲ್ಲದ ಉಪಬಂಧವನ್ನು ರಚಿಸಿರುವುದಕ್ಕೆ ಮತ್ತು ಈ ಅಧಿನಿಯಮದ ಯುಕ್ತವಾದ ಜಾರಿಗೆ ಅವಶ್ಯವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವಂಥ ಉಪಬಂಧಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳು.

(3) ಈ ಅಧಿನಿಯಮದಮೇರೆಗೆ ಪೂರ್ವಾನ್ವಯವಾಗಿ ಯಾವುದೇ ನಿಯಮವನ್ನು ರಚಿಸಬಹುದು; ಮತ್ತು ಅಂಥ ನಿಯಮವನ್ನು ರಚಿಸಿದಾಗ ನಿಯಮವನ್ನು ರಚಿಸುವ ಬಗ್ಗೆ ಇರುವ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕ ವಿವರಣೆಯಲ್ಲಿ ಸ್ಪಷ್ಟಪಡಿಸತಕ್ಕುದು.

(4) ಈ ಅಧಿನಿಯಮದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ

ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಅದು ಅಧಿವೇಶನದಲ್ಲಿರುವಾಗ ಮತ್ತು ಅದು ಅಧಿವೇಶನದಲ್ಲಿ ಇಲ್ಲದಿರುವಾಗ ಅಧಿವೇಶನದ ತರುವಾಯ ಅದರ ನಿಕಟ ತರುವಾಯ ಬರುವ ಒಂದು ಅಥವಾ ಎರಡು ಅಧಿವೇಶನಗಳಲ್ಲಿ ಅಡಕಗೊಳ್ಳಬಹುದಾದ ಒಟ್ಟು ಹದಿನಾಲ್ಕು ದಿವಸಗಳ ಅವಧಿಯವರೆಗೆ ಇಡತಕ್ಕುದು ಮತ್ತು ಹಾಗೆ ಇರಿಸಲಾದ ಅಧವೇಶನದ ಅಥವಾ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಅಥವಾ ಅಧಿಸೂಚನೆ ಅಥವಾ ನಿಯಮದ ರದ್ದಿಯಾತಿಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅನಂತರ ಆ ಅಧಿಸೂಚನೆಯು ಅಥವಾ ನಿಯಮವು, ಆ ಮಾರ್ಪಾಟು ಅಥವಾ ರದ್ದಿಯಾತಿಯ ಅಧಿಸೂಚನೆಯ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ರದ್ದಾಗತಕ್ಕುದು. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಥವಾ ನಿಯಮದ ಮೇರೆಗೆ ಆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕುದಲ್ಲ.

**146. ನಿರಸನ ಮತ್ತು ಉಳಿಸುವಿಕೆಗಳು.–** ಕರ್ನಾಟಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 9) ಮತ್ತು ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ 10), ಇವು ಈ ಮೂಲಕ ನಿರಸಿತವಾಗಿವೆ.

(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಯಾವ ವಿಷಯಗಳ ಮುನ್ನಡೆಗಾಗಿ ಈ ಅಧಿನಿಯಮವನ್ನು ಅಧಿನಿಯಮಿಸಲಾಗಿದೆಯೋ ಆ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸುವ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ರಚಿಸಿದ್ದು ಅಥವಾ ಹೊರಡಿಸಿದ್ದು ಮತ್ತು ಅಂಥ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ, ಎಲ್ಲ ನಿಯಮಗಳು, ಆದೇಶಗಳು, ಅಧಿಸೂಚನೆಗಳು, ಸಹಾಯಾನುದಾನ ಸಂಹಿತೆಗಳು, ನೇಮಕಗಳು, ಯೋಜನೆಗಳು, ಉಪವಿಧಿಗಳು, ವಿನಿಯಮಗಳು, ಅಧಿಕೃತ ಜ್ಞಾಪನ ಪತ್ರಗಳು, ಸತ್ತ್ತೋಲೆಗಳು ಅಥವಾ ಯಾವುದೇ ಇತರ ಆದೇಶಗಳು, ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಅಥವಾ ಕೈಕೊಂಡ ಕ್ರಮದ ಮೂಲಕ ಅಥವಾ ರಚಿಸಿದ ಅಥವಾ ಹೊರಡಿಸಿದ ಅಧಿಸೂಚನೆಯ, ಸಹಾಯಾನುದಾನದ ಸಂಹಿತೆಯ, ನಿಯಮದ, ಆದೇಶದ, ನೇಮಕದ, ಯೋಜನೆಯ, ಉಪವಿಧಿಯ, ವಿನಿಯಮನದ, ಅಧಿಕೃತ ಜ್ಞಾಪನ ಪತ್ರದ, ಸುತ್ತೋಲೆಯ ಅಥವಾ ಯಾವುದೇ ಇತರ ಆದೇಶದ ಮೂಲಕ ರದ್ದಾದ ಹೊರತು ಮತ್ತು ಆವರೆಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ರಚಿಸಲಾಗಿದ್ದರೆ ಹೇಗೋ ಹಾಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕುದು ಮತ್ತು ಪರಿಣಾಮಕಾರಿ–ಯಾಗಿರತಕ್ಕುದು.

* * * *

## ಅನುಸೂಚಿ – I

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯ ಅಧಿನಿಯಮ, 1966

**1966ರ ಕರ್ನಾಟಕ ಅಧಿನಿಯಮ, 16ರ ತಿದ್ದುಪಡಿ.–** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 16) ರಲ್ಲಿ –

(1) 2ನೇ ಪ್ರಕರಣದ (ಡಿ) ಖಂಡದ ನಂತರ ಕೆಳಕಂಡವುಗಳನ್ನು ಸೇರಿಸತಕ್ಕುದು:–

"(ಡಿಎ) 'ನಿರ್ದೇಶಕ' ಎಂದರೆ ಮಂಡಳಿಯ ನಿರ್ದೇಶಕರು";

(2) 4ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣದ ಕೊನೆಯಲ್ಲಿ ಈ ಕೆಳಕಂಡವುಗಳನ್ನು ಸೇರಿಸತಕ್ಕುದು– "ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತನು, ಮಂಡಳಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕುದು";

(ಬಿ) (2)ನೇ ಪ್ರಕರಣದಲ್ಲಿ ಬರುವ "ಅಧ್ಯಕ್ಷ" ಮತ್ತು "ಜಂಟಿ ನಿರ್ದೇಶಕ" ಎಂಬ ಪದಗಳ ಬದಲಾಗಿ "ನಿರ್ದೇಶಕ" ಮತ್ತು "ಅಡಿಷನಲ್ ನಿರ್ದೇಶಕ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು;

(ಸಿ) (3)ನೇ ಉಪಪ್ರಕರಮಣದಲ್ಲಿ, "ಪ್ರೌಢ ಶಿಕ್ಷಣ ಪ್ರಭಾರದಲ್ಲಿರುವ, ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ", ಎಂಬ ಪದಗಳಿಗೆ "ನಿರ್ದೇಶಕ" ಎಂಬ ಪದವನ್ನು ಪ್ರತಿಯೋಜಿಸತಕ್ಕುದು.

(ಡಿ) (4)ನೇ ಉಪಪ್ರಕರಣದಲ್ಲಿ,–

(i) (ಡಿ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ:–

(ಡಿಎ) "ಪಠ್ಯ ಪುಸ್ತಕಗಳ ನಿರ್ದೇಶಕ ಅಥವಾ ಅವನ ನಾಮನಿರ್ದೇಶಿತ";

(ii) (ಇ) ಖಂಡದಲ್ಲಿ ಬರುವ 'ಏಳು' ಎಂಬ ಪದದ ಬದಲಾಗಿ 'ಎಂಟು' ಎಂಬ ಪದವನ್ನು ಪ್ರತಿಯೋಜಿಸತಕ್ಕುದು ಮತ್ತು "ಸಂಸ್ಕೃತ ಶಿಕ್ಷಣ" ಎಂಬ ಪದಗಳ ತರುವಾಯ ಒಂದು ಅಲ್ಪ ವಿರಾಮ ಮತ್ತು "ರಾಜ್ಯ ಶಿಕ್ಷಣ ಘಟಕ" ಪದಗಳನ್ನು ಸೇರಿಸತಕ್ಕುದು;

(3) 17ನೇ ಪ್ರಕರಣದ (2), (3) ಮತ್ತು (4)ನೇ ಉಪಪ್ರಕರಣಗಳಲ್ಲಿ, 18ನೇ ಪ್ರಕರಣದಲ್ಲಿ, 19ನೇ ಪ್ರಕರಣದಲ್ಲಿ, 20, 21 ಹಾಗೂ 38 – ಈ ಪ್ರಕರಣಗಳಲ್ಲಿ "ಅಧ್ಯಕ್ಷ" ಎಂಬ ಪದವು ಬರುವಲ್ಲೆಲ್ಲಾ "ನಿರ್ದೇಶಕ" ಎಂಬ ಪದವನ್ನು ಪ್ರತಿಯೋಜಿಸತಕ್ಕುದು;

(4) 17ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಬರುವ "ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು" ಎಂಬ ಪದಗಳಿಗೆ ಬದಲಾಗಿ "ಅಧ್ಯಕ್ಷ" ಎಂಬ ಪದವನ್ನು ಪ್ರತಿಯೋಜಿಸತಕ್ಕುದು; ಮತ್ತು

(5) 36, 37 ಮತ್ತು 38 ಈ ಪ್ರಕರಣಗಳಲ್ಲಿ ಬರುವ "ಉಪಾಧ್ಯಕ್ಷ" ಎಂಬ ಪದಕ್ಕೆ ಬದಲಾಗಿ "ನಿರ್ದೇಶಕ" ಅಥವಾ "ಉಪಾಧ್ಯಕ್ಷರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು.

## ಅನುಸೂಚಿ - II

1. ರಾಜ್ಯ ವಿಧಾನ ಮಂಡಲದ ಅಧಿನಿಯಮದ ಮೂಲಕ ಸ್ಥಾಪಿಸಲಾದ ಯಾವುದೇ ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಮೂಲಕ ಅಥವಾ ಅದರ ಮೇರೆಗೆ ನಡೆಸುವ ಯಾವುದೇ ಪರೀಕ್ಷೆ.

2. ಕರ್ನಾಟಕ ಪ್ರೌಢ ಶಿಕ್ಷಣ ಮಂಡಲಿಯ ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ನಡೆಸುವ ಯಾವುದೇ ಪರೀಕ್ಷೆ.

3. ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಮಂಡಲಿಯು ನಡೆಸುವ ಯಾವುದೇ ಪರೀಕ್ಷೆ.

4. ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಲಿಯು ನಡೆಸುವ ಯಾವುದೇ ಪರೀಕ್ಷೆ.

5. ವೃತ್ತಿ ಶಿಕ್ಷಣ ರಾಜ್ಯ ಪರಿಷತ್ತು ನಡೆಸುವ ಯಾವುದೇ ಪರೀಕ್ಷೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಬಿ.ಎನ್. ಮಲ್ಲಿಕಾರ್ಜುನ
ಸರ್ಕಾರದ ಕಾರ್ಯದರ್ಶಿ ಹಾಗೂ ಪ್ರಾರೂಪಣಕಾರರು,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

* * * *

The above translation of the Karnataka Education Act, 1983 (Karnataka Act No 1 of 1995) shall be published in the Official Gazette under clause (ii) of section 5A of the Karnataka Official Language Act, 1963 (Karnataka Act No 26 of 1963).

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ.ರಾ ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.